REGISTERED NO. M. 1393.

ಕಂಠೀರವ

ಅರ್ಧಾಣೆ

ESTD. 1919 ಸ್ಥಾಪನೆ.

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

KANTEERAVA, MANGALORE

The only Nationalist Kanarese BI-WEEKLY with the largest circulation.

ಸಂಪುಟ ೧೪ | ಮಂಗಳೂರು, ೧೯೩೬ನೇ ಇಸವಿ ಜುಲಾಯಿ ತಾರೀಕು ೧೦ನೇ ಶುಕ್ರವಾರ | ಸಂಚಿಕೆ ೩೦.

VOL. XVIII | MANGALORE, FRIDAY, JULY 10, 1936 | NO. 30.

BANK with the

UDIPI BANK Ltd.

(KALSANK, ═══ UDIPI ═══ S. KANARA)

and thereby **DEFEND** your own interest.

ALL KINDS OF BANKING BUSINESS TRANSACTED.

ESTD: 1925

ESTD:—1906.

THE CANARA
BANKING CORPORATION, UDIPI, LTD.

THE FIRST INDIGENOUS & COSMOPOLITAN BANK
OF
S. K. DISTRICT.

Capital: Authorised, Issued and Subscribed	Rs. 3,50,000-0-0
Paid up	Rs. 2,88,840-0-0
Reserve and other funds	Rs. 3,72,337-0-0
Deposits	Rs. 29,50,717-0-0

16—6—1936.

Fixed deposit rates up to 5% p. a.

ಪೊಪ್ಯುಲರ್

- ಬ್ರಿಟಿಷ್ ಕರ್ನಾಟಕದ ಪ್ರಥಮ ವಿಮಾಸಂಸ್ಥೆ—ದಕ್ಷಿಣ ಕನ್ನಡದ ಆದರ್ಶ ವಿಮಾಸಂಸ್ಥೆ.
- ಪ್ರಥಮ ವರ್ಷದಿಂದಲೇ ವಿಮಾನಿಧಿ ಸ್ಥಾಪಿತವಾಗಿದ್ದು ಇದು ವರ್ಷಂಪ್ರತಿ ಬೆಳೆಯುತ್ತಾ ಇದೆ.
- ಪ್ರಥಮ ವರ್ಷಾಲ್ಯವೇತನದಲ್ಲಿಯೇ ಬೋನಸ್—ಅಖಿಲ ಕರ್ನಾಟಕದಲ್ಲಿ ಪ್ರಥಮ ಬಾರಿಯೇ ಬೋನಸನ್ನು ಹಂಚಿದ ಸಂಸ್ಥೆಯೆಂದರೆ ಇದೊಂದೇ.

ವಿಮೆಯನ್ನು ಮಾಡಲೂ, ಮಾಡಿಸಲೂ ಇದೀಗ ನಿಮ್ಮ ಸಂಸ್ಥೆ.
ಸುಲಭವಾದ ವಿಮಾಕಂತುಗಳು—ಸರ್ವರಿಗೂ ಅನುಕೂಲವಾದ ಅತ್ಯಾಧುನಿಕ ಶಾಸ್ತ್ರೀಯ ವಿಮಾಪದ್ಧತಿಗಳು—ಅಡಳಿತೆಯು ಸುವ್ಯವಸ್ಥಿತ—ಭದ್ರತೆಯು ವಿಶ್ವಾಸಾರ್ಹ.

ಯೋಗ್ಯ ಏಜಂಟರುಗಳಿಗೆ ಧಾರಾಳ ಕಮಿಶನ್.

ಮಾಹಿತಿಪತ್ರ ಇತ್ಯಾದಿ ಹೆಚ್ಚಿನ ವಿವರಗಳಿಗೆ ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆಯಿರಿ.

Asiatic Government Security
LIFE ASSURANCE CO., LTD.,

Established 1913. **Life Branch 1922.**

The Pioneer Insurance Institution in Mysore State transacting business throughout India. Varied plans of Assurances for both male and female lives at competitive rates. Attractive Policies with liberal privileges including Disability Benefits. Substantial Bonus. Profitable Agency Connections.

For Prospectus and Agency terms apply to:

Head Office: "Asiatic Buildings" Bangalore City,

OR

to any of the Company's undernoted Branches:

Madras Branch: 187, Mount Road.
Bombay Branch: Hornby Road, Fort.
Calcutta Branch: 15, Clive Street.

V. RANGASWAMI, B. A., B. L.,
General Manager.

Complete Service

We are here to serve your banking requirements, and to place at your command the practical cooperation of our resources and banking facilities. Whether your needs are local, provincial or world-wide this bank through its experience, connections and organisations is eminently qualified to serve you.

THE PALAI
CENTRAL BANK, LIMITED,

(INCORPORATED IN TRAVANCORE.)

Bunder Road, MANGALORE.

London Agents: LLOYDS BANK, LIMITED.
New York ,, : NATIONAL CITY BANK OF NEW YORK.

The Pioneer General Insurance Agency of West Coast, Mangalore, S. K.

Invites application for the post of a cashier—salary Rs. 20/-- per month, annual increment Rs. 5/-, to join service immediately. None but those who can afford to pay cash security of Rs. 500/— need apply.

Knowledge of Typing will be taken as a special qualification.

Application for agencies from ladies and gents on lucrative terms are also invited.

HYDROCELE

CURE FOR HYDROCELE TUMOUR Hernia, Varicocele, Elephantiasis and all swelling diseases. Guaranteed to cure radically by external application. Free from injurious drugs. Highly recommended by medical authorities. Price complete course 8 oz. Rs. 10, 2 oz. Rs. 3. Postage extra.

Send stamp for reply.

Alliance Laboratory P. O.,
Amherst Street, CALCUTTA.
8, 26-6.

ಪ್ರಕಟಣೆ.

ಕದ್ರೆಯಲ್ಲಿ ರಾ। ಡಾಕ್ಟರ್ ಮುಂಡ್ಕೂರು ತಿಮರಾಯರ ಮೆಟರ್ನಿಟಿ ಆಸ್ಪತ್ರೆಯ ಹಿಂದಿರುವ ದೊಡ್ಡ ವಿಶಾಲವಾದ ಹಂಚಿನ ಮನೆ ಮತ್ತು ಇದರ ಕಂಪೌಂಡು ಒಂದು, ಬೋಳೂರಿನಲ್ಲಿರುವ ರಾ। ಸಾಹುಕಾರ ಗಣೇಶ ಶ್ರೀನಿವಾಸ ಪೈಗಳ ಮನೆ ಹತ್ತಿರವಿರುವ ಹಂಚುಛಾವಣಿಯ ದೊಡ್ಡ ಮನೆ ಮತ್ತು ಇದರ ಕಂಪೌಂಡು ಒಂದು ಹೀಗೆ ಎರಡು ಮನೆಗಳು ಬಾಡಿಗೆಗೆ ದೊರೆಯುತ್ತವೆ. ಬೇಕಾದವರು ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ದಸ್ಕತು ಮಾಡಿದವರಿಂದ ತಿಳಿಯಬಹುದು.

ಮಂಗಳೂರು, 7—7—1936. } **ಕೋಟೆ ರಾಮಕೃಷ್ಣ ಕಾರಂತ,** ವಕೀಲ

ಮೋಸಹೋಗಬೇಡಿ!

ಶ್ರೀ ಅಂಬಾಳ್ ಮದರಾಸು ನಶ್ಯವು ಅನೇಕ ವರ್ಷಗಳಿಂದ ಅಸಮಾನವಾದ ಮತ್ತು ಶಾಶ್ವತವಾದ ಕೀರ್ತಿಯನ್ನು ಹೊಂದಿ ಜಗತ್ಪ್ರಸಿದ್ಧವಾಗಿರುವುದನ್ನು ಅರಿತು ಕೆಲವರು ಹಣದಾಸೆಯುಳ್ಳವರಾಗಿ ಕಿರಿದು ಹೊಗೆಸೊಪ್ಪನ್ನು ತರಿಸಿ ಅವುಗಳಲ್ಲಿರುವ ಮಣ್ಣು ದುಂಬು, ಮಸಿಗಳನ್ನು ತೆಗೆಯದೆ ಬೆರಕೆ ತುಪ್ಪವನ್ನು ಸೇರಿಸಿ ನಶ್ಯವನ್ನು ತಯಾರಿಸಿ ವ್ಯಾಪಾರಸ್ಥರಲ್ಲಿ ಹೋಗಿ ಕಡಿಮೆ ಬೆಲೆಗೆ ಸಾಲವಾಗಿ ಕೊಟ್ಟು ಬರುವರು. ಕೆಲವು ವ್ಯಾಪಾರಸ್ಥರು ಸರಸವಾಗಿಯೂ ಸಾಲವಾಗಿಯೂ ಸಿಗುವುದರಿಂದ ಮೇಲ್ಕಂಡ ಹಲ್ಕಾ ನಶ್ಯವನ್ನು ತರಿಸಿ ಇದೇ ಹಸನಾದ ಮದರಾಸು ನಶ್ಯವೆಂದು ಬಿಕರಿ ಮಾಡಿ ಬರುತ್ತಿರುವರು. ಸಹೋದರರೇ! ಮೋಸಹೋಗಬೇಡಿ. ಇಂಥಾ ಪೋಲಿ ನಶ್ಯವನ್ನು ಉಪಯೋಗಿಸಿದರೆ ಮೇಲ್ಕಂಡ ನಶ್ಯದಲ್ಲಿರುವ ಮಣ್ಣು, ಮಸಿ ಮೊದಲಾದವುಗಳು ಮೂಗಿನ ಮೂಲಕ ಮೆದುಳಿಗೆ ಹೋಗಿ ಮೆದುಳನ್ನು ಬಲೆಯೋಪಾದಿಯಲ್ಲಿ ಮುಚ್ಚಿಕೊಂಡು ಅಜ್ಞಾನವನ್ನುಂಟುಮಾಡುವುದು, ನಾಸಿಕದ್ವಾರವನ್ನು ಬಂಧಿಸುವುದು. ಮೂಗಿನಲ್ಲಿ ಪ್ರಣವನ್ನುಂಟುಮಾಡುವುದಲ್ಲದೆ ಪಂಚೇಂದ್ರಿಯಗಳ ಶಕ್ತಿಯನ್ನು ಕುಂದಿಸುವದು. ಆದುದರಿಂದ, ಆಪ್ತರೇ, ಅನೇಕ ವರ್ಷಗಳಿಂದ ಅನೇಕ ಡಾಕ್ಟರುಗಳಿಂದಲೂ, ಜಡ್ಜಿಗಳಿಂದಲೂ, ಇನ್ನೂ ಅನೇಕ ಶ್ರೀಮಂತರಿಂದಲೂ ಶ್ಲಾಘಿಸಲ್ಪಟ್ಟಿರುವ ಶ್ರೀ ಅಂಬಾಳ್ ಅಂಡ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. ೩, ಮದರಾಸು, ಇವರ ಮದರಾಸು ನಶ್ಯ, ಸುಗಂಧ ನಶ್ಯವನ್ನೇ ಉಪಯೋಗಿಸಿ ಆನಂದಪಡಿರಿ. ಎಲ್ಲಾ ವ್ಯಾಪಾರಸ್ಥರಲ್ಲಿಯೂ ಸಿಗುವುದು.

For your Diamonds enquire at Sowcar
SRINIVAS RANGA PAI,
Sowcar Mahal,
Car Street,
MANGALORE.

ಡಿ. ಕಲೆಕ್ಟರರ ಅಳಿಯ.

'ಇನ್ನೂ ಎಷ್ಟು ದಿನ ಹೀಗಿರೋದು? ಮದುವೆಯಾಯ್ತು; ಮನೆಕಾಲವಾಯ್ತು; ಮಕ್ಕಳಾಯ್ತು; ಮರಿಗಳಾಯ್ತು. ನಮ್ಮ ನೆಂಟರಿಷ್ಟರೆಲ್ಲ ನೋಡಿ, ನಗುತಾ ಇದ್ದಾರೆ.'

ಕಮಲೂ ಬಾಲಕೃಷ್ಣರಾಯನ ಎದುರಿಗೆ, ಒಂದು ಲೋಟಾ ಕಾಫಿ ಇಟ್ಟು, ಮೆಲ್ಲಗೆ ಮಾತಾಡಿದಳು.

ಕಮಲೂ ನಮ್ಮ ರಿಟೈರ್ಡ್ ಡಿ॥ ಕಲೆಕ್ಟರ್ ಮರಿರಾಯರ ಮಗಳು. ಮರಿರಾಯರಿಗೆ ಇದು ಎರಡನೇ ಸಂಬಂಧ. ಮೊದಲಿನ ಸಂಬಂಧದಲ್ಲಿ, ಅರ್ಧ ಡಜನು ಗಂಡು ಹೆಣ್ಣು ಮಕ್ಕಳಿದ್ದರು. ಎರಡನೇ ಹೆಂಡತಿ ಮನೆಗೆ ಯಜಮಾನಿಯಾದ ಮೇಲೆ, ಆ ಮೊದಲನೆ ಹೆಂಡತಿಯ ಮಕ್ಕಳೊಂದೂ ತಂದೆಯ ಮನೆಗೆ ಬಂದು ಹೋಗುತ್ತಾ ಇರಲಿಲ್ಲ. ಎರಡನೇ ಹೆಂಡತಿ ಅಷ್ಟು ಬುದ್ಧಿವಂತೆ. ಮೊದಲ್ಗ ಹೆಂಡತಿಯ ಮಕ್ಕಳಿಗೆಲ್ಲಾದರೂ ಆಸ್ಪದಕೊಟ್ಟರೆ, ಗಂಡ ಸಂಪಾದಿಸಿಟ್ಟದ್ದು ಆ ಮಕ್ಕಳ ಪಾಲಿಗೂ ಒಂದಿಷ್ಟು ಹೋದೀತು ಅಂತ, ಆಕೆ ಆ ಮಕ್ಕಳಿಗೆ ಸ್ವಲ್ಪವೂ ಆಶ್ರಯ ಕೊಡುತ್ತಿರಲಿಲ್ಲ. ಹತ್ತಿರ ಸೇರಿಸುತ್ತಾ ಇರಲಿಲ್ಲ.

ಮರಿರಾಯರೂ,—ಎಲ್ಲಾ ಹೆಂಡತಿ ಹೇಳಿದ ಹಾಗೆ! ಅವಳು ಹೇಳಿದ್ದೇ ವೇದವಾಕ್ಯ. ಮೊದಲ ಹೆಂಡತಿಮಕ್ಕಳ ಗೊಡವೆ ಅವರಿಗೇನೂ ಇರಲಿಲ್ಲ. ಈ ಸೌಭಾಗ್ಯವತಿ ಮನೆಗೆ ಬಂದ ಮೇಲೆ ಅವರಿಗೆ ತಹಶೀಲ್ದಾರಿಕೆಗೆ ಬಡ್ತಿಯಾಗಿತ್ತು. ಇವರ ಮಗಳು ಕಮಲು ಹುಟ್ಟಿದ ಮೇಲೇ ಡೆಪ್ಯುಟಿ ಕಲೆಕ್ಟರರ ಕೆಲಸ ದೊರಕಿತ್ತು. ಆದ್ದರಿಂದ ಮರಿರಾಯರ ಕಣ್ಣು ಗೊಂಬೆ, ಪ್ರಾಣದ ಗಂಟು ಎಂದರೆ—ಅವರ ಎರಡನೇ ಹೆಂಡತಿ; ಅವರ ಒಬ್ಬಳೇ ಒಬ್ಬಳು ಮಗಳು ಕಮಲೂ.

ಮರಿರಾಯರು, ಎರಡನೇ ಹೆಂಡತಿಯನ್ನು—ಎದೆಯ ಮೇಲಲ್ಲ, ತಲೆಯ ಮೇಲೆ ಕೂರಿಸಿಕೊಳ್ಳಲಿಕ್ಕೆ—ಇನ್ನೂ ಒಂದು ಕಾರಣವಿತ್ತು. ರಾಯರ ಮೊದಲನೆ ಹೆಂಡತಿಯ ಕೈ ಸ್ವಲ್ಪ ಧಾರಾಳ. ಆಗ್ಗೆ ರಾಯರಿಗೆ ತಾಲೂಕು ಹೆಡ್‌ಮುನಿಸಿ ಕೆಲಸ; ಸಂಬಳ ಕಡಿಮೆ. ಹೊರಗಿನ ಆದಾಯಕ್ಕೂ ಆ ಹೆಂಡತಿ ಈ ಗಂಡನ ಕೈ ನೀಡಿಸುತ್ತಾ, ಅವರನ್ನು ಪೀಡಿಸುತ್ತಾ ಇರಲಿಲ್ಲ. ಆಗ್ಗೆ ರಾಯರ ಹೆಂಡತಿ ಮನೆಗೆ ಬಂದವರಿಗೆ, ಯಥಾಯೋಗ್ಯವಾಗಿ, ಊಟಉಪಚಾರ ಮಾಡಿಸುತ್ತಾ ಇದ್ದರು. ಬಡವರಿಗೇನಾದರೂ ದಾನಧರ್ಮ ಮಾಡುತ್ತಾ ಇದ್ದರು. ದೇವರು ಬ್ರಾಂಬರು ಅಂತ ವಿಶ್ವಾಸವಿಟ್ಟುಕೊಂಡು ನಡೆದುಕೊಳ್ಳುತ್ತಾ ಇದ್ದರು. ಹೀಗಾಗಿ ರಾಯರ ಮೊದಲಿನ ಹೆಂಡತಿ ಕಾಲದಲ್ಲಿ ರಾಯರಿಗೆ 'ಗಂಟು' ಹಾಕಲಿಕ್ಕೇನೂ ಸಿಕ್ಕಲಿಲ್ಲ. ಗಂಟು ಬಿಚ್ಚಿದ್ದೇ. ಎಲ್ಲಾ 'ಖರ್ಚು'.

ಈ ಹೆಂಡತಿಯ ಕಾಲದಲ್ಲಿ, ರಾಯರ ದರ್ಬಾರು ಹಾಗಲ್ಲ. ರಾಯರ ಹೆಂಡತಿಯದೇ ಪೂರಾ ದರ್ಬಾರು—ನೂರ್‌ಜಹಾನ್ ಮಹಾರಾಣಿಯ ಹಾಗೆ. ಎಲ್ಲಾ ಕಂಟ್ರೋಲೂ—ಮನೆಯದೂ, ಆಫೀಸಿನದೂ—ಎಲ್ಲಾ 'ಅಮ್ಮ'ನದೇ. ಪೇದೆಗಳು, ಪಾಪ, ಈ ಅಮ್ಮನ ಉಪಟಳ ಸಹಿಸದೆ, ಹಿಂದುಗಡೆ, 'ಈ ಸೂಟೆ ಮಹಾಂಕಾಳಿ ಹಾಳಾಗಿ ಹೋಗಲಿ' ಎಂದು ಶಪಿಸುತ್ತಾ ಇದ್ದರು. ಊರಿನವರು ಈ ಅಮ್ಮನನ್ನು 'ಮರಿರಾಯ ಇವರ ಗಂಡನಲ್ಲ; ಇವರೇ ಮರಿರಾಯನ ಗಂಡ' ಎಂದು ಪರಿಹಾಸಮಾಡುತ್ತಿದ್ದರು. ಈ ಅಮ್ಮನ ದರ್ಬಾರಿನಲ್ಲಿ ಯಾರಿಗೂ ಸುಖವಿರಲಿಲ್ಲ. ಪೇದೆಯವರಿಗೆ ಕ್ಲಾರ್ಕರಿಗೆ 'ಬಿಟ್ಟಿ' ತಪ್ಪುತ್ತಾ ಇರಲಿಲ್ಲ. ಪಟೇಲ್, ಶ್ಯಾನುಭಾಗ, ಉಗ್ರಾಣಿಗಳಿಗಂತೂ 'ಸರಬರಾಯಿ' ಮಾಡಿ ಮಾಡಿ ಪ್ರಾಣಹೋಗುತ್ತಾ ಇತ್ತು.

ಹೇಗೂ, ಈ ಅಮ್ಮ, ತಮ್ಮ ಕಾಲದಲ್ಲಿ ದೊಡ್ಡ ಗಂಟು ಕಟ್ಟಿಡಲು ಸಮರ್ಥರಾದರು. ಇವರ ಸಂಸಾರದ ಕ್ರಮ ಬಹಳ ಬಿಗಿ, ಬಹಳ ಸ್ವಾರಸ್ಯವಾಗಿತ್ತು. ಪೇದೆಯೊಬ್ಬ, ಇವರಲ್ಲಿ ಅಡಿಗೆಯವ; ಇನ್ನೊಬ್ಬ ಪೇದೆ ಇವರ ಮನೆ ಊಳಿಗದವ. ರಾಯರಿಗೆ 'ಸರ್ಕೀಟೇ' ಹೆಚ್ಚು; ಆ ಕಾಲದಲ್ಲಿ ಅಮ್ಮನೂ ಜತೆಯಲ್ಲಿದ್ದು 'ಸರಬರಾಯಿ' ಜೋಪಾಸನ ನೋಡಿಕೊಳ್ಳುವರು. ಅವರಿಗೆ ಈ ಸರಬರಾಯಿ ಭರದಿಂದಲೇ ತಿಂಗಳ ಸಂಸಾರದ ಖರ್ಚು ದಾಟುತ್ತಿತ್ತು. ಬಂದ ಸಂಬಳವು, ಸರ್ಕೀಟ್ ಭತ್ತೆಯೂ ಎಲ್ಲಾ ನಗದಿಯಾಗಿ ಹಾಗೆಯೇ 'ಭದ್ರ'ವೇ ಬೇಕಿನಲ್ಲಿ. ಹೀಗಾಗಿ, ಈ ಅಮ್ಮನ ಕಾಲದಲ್ಲಿ, ರಾಯರು ಸಾವಿರಾರು ರೂ ಪಾಯಿಗಳನ್ನು ಸಂಪಾದಿಸಿದರು—ಅಲ್ಲ, ರಾಯರಿಗಾಗಿ ಅಮ್ಮನೇ ಸಂಪಾದಿಸಿದ್ದರು. ಹೀಗೆ ಈ ಹೆಂಡತಿ ತನ್ನ 'ಮನೆಯನ್ನು ಉದ್ಧಾರ ಮಾಡಿದಳಲ್ಲಾ', ಎಂದು, ರಾಯರು ಅಮ್ಮನ ಮುಂದೆ ತಿಮ್ಮನ ಹಾಗಿದ್ದರು.

ಕಮಲೂಗೆ ಮದುವೆಯ ವಯಸ್ಸು ಬಂತು. ಎಷ್ಟಾದರೂ ಡೆಪ್ಯುಟಿ ಕಲೆಕ್ಟರರ ಮಗಳು; ಅಂಥವರ ಮಗಳಿಗೆ ವರ ಸಿಕ್ಕುವುದು ಕಷ್ಟವೇ? ಎಂತ ಸುಲಭದಲ್ಲಿ ತೀರ್ಮಾನಿಸಬೇಡಿ. ಅದೂ ಕಷ್ಟವೇ, ಸ್ವಾಮಿಾ—ಈಗಿನ ಕಾಲದಲ್ಲಿ. ಏಕೆಂದರೆ, ದುಡ್ಡಿದ್ದವರು, ಅಧಿಕಾರಸ್ಥರು ಇಂತವರ ಹೆಣ್ಣುಮಕ್ಕಳಲ್ಲಿ ಎಷ್ಟೋ ಮಂದಿಗೆ ರೂಪ, ಗುಣ, ವಿದ್ಯೆ ಅಂದರೆ, ಅವರಪ್ಪ ಸಂಪಾದಿಸಿಟ್ಟ ದುಡ್ಡು; ಆಭರಣ; ಅಳಿಯನಿಗೆ ಕೊಡತಕ್ಕ ವರದಕ್ಷಿಣೆ; ಮಾಡತಕ್ಕ ವರಪೂಜೆ ಇವುಗಳೇ ಆದ್ದರಿಂದ, ನಮ್ಮ ಮರಿರಾಯರ ಮಗಳಿಗಾದರೂ, ಸಕಲ ಗುಣಸಂಪನ್ನನಾದ, ಅವರಿಗೆ ಬೇಕಾದ ವರ ಸುಲಭದಲ್ಲಿ ಸಿಕ್ಕಲಿಲ್ಲ.

ಕಮಲೂಗೆ ಬೇಕಾದಷ್ಟು ಐಶ್ವರ್ಯ ದೇವರು ಕೊಟ್ಟಿದ್ದರೂ, ಬೇಕಾದಷ್ಟು ರೂಪ ಕೊಟ್ಟಿರಲಿಲ್ಲ. ಹುಡುಗಿಯನ್ನು ನೋಡಲು ಬಂದವರರಲ್ಲಿ, ಹೆಚ್ಚುಮಂದಿ ಈ ಹುಡುಗಿ 'ಬೇಡ' ಎಂತ ಹೊರಟುಹೋದರು. ಕೊನೆಗೆ, ಮರಿರಾಯರು, ನಿರುಪಾಯರಾಗಿ 'ವಿದ್ಯಾರ್ಥಿಭವನ'ದ ಬೀ. ಏ. ಪಾಸಾದ ಒಬ್ಬ ಬಡ ವಿದ್ಯಾರ್ಥಿಯನ್ನು ತಂದು, ಮಗಳನ್ನು ಕುತ್ತಿಗೆಗೆ ಕಟ್ಟಿದರು.

ಈ ಮದುವೆಯಾದದ್ದೇ ತಡ! ರಾಯರ ಅಳಿಯ ಒಳ್ಳೇ ಜರುಬಿನಿಂದ ಬಿ. ಎಲ್. ಓದುವುದಕ್ಕೆ ಹೊರಟ—ಮದ್ರಾಸಿಗೆ. ಮದ್ರಾಸಿನಲ್ಲಿ ಅವನ ಮರ್ಜಿ ಪೂರಾ ಬದಲಾಯಿತು. ಓದು ಕಡಿಮೆಯಾಯ್ತು. ಮೋಜು ಹೆಚ್ಚಾಯಿತು. ತಿಂಗಳಿಗೆ ೨-೩ ಸಲ, 'ಪಾಕೆಟ್ ಎಂಪ್ತಿ; ವಯರ್ ಫಿಫ್ಟಿ' ಎಂತ ಮಾವನಿಗೆ ತಂತಿ; ಮಾವನಿಗೆ ಈ ರೀತಿ ದುಡ್ಡು ಒದಗಿಸಿ ಬೇಜಾರ ಬಂತು. ಹುಡುಗ ಎಫ್. ಎಲ್. ಪರೀಕ್ಷೆ ಪಾಸಾಗಲೂ ಇಲ್ಲ. ರಾಯರ ಹೆಂಡತಿ, 'ಹೋಗಲ್ಬಿಡಿ. ಇರೋ ಒಂದು ಮಗುವಿನ್ನ, ಅಳಿಯನ್ನ ಮನೆಯಲ್ಲಿ ಇಟ್ಕೊಳ್ಳೋಣ. ಅಳಿಯನ್ನ ಮದ್ರಾಸಿನಿಂದ ಕರೆಸಿ' ಅಂದರು. ಅದರಂತೆ, ಅಳಿಯನ್ನ ಕರಸಿಕೊಂಡು, ಸಂಸಾರ ಸಾಗುತ್ತಾ ಇತ್ತು.

ಇಷ್ಟರಲ್ಲಿ, ಅಳಿಯನ ಸಂಸಾರ ಬೆಳೆಯಿತು; ಬಸರುಹೆಂಗಸುತನ; ಬಾಣಂತ್ಯನ; ಮಕ್ಕಳು ಮರಿ. ಇತ್ತ ರಾಯರಿಗೂ ರಿಟೈರ್ ಆಯ್ತು. ದೊಡ್ಡ ಸಂಬಳ ತಪ್ಪಿತು; ಭತ್ತೆ ತಪ್ಪಿತು; ಪೇದೇರು, ಕ್ಲಾರ್ಕರು ತಪ್ಪಿದರು; ಹಳ್ಳಿ ಸರಬರಾಯಿ ತಪ್ಪಿತು. ರಾಯರ ಸಂಸಾರದ ಆದಾಯ ತಗ್ಗಿತು; ಖರ್ಚು ಹೆಚ್ಚಾಯಿತು. ರಾಯರು ಅಳಿಯನಿಗೊಂದು ೨೫ ರೂಪಾಯಿ ಕೆಲಸಕ್ಕಾಗಿ ಯತ್ನಿಸಿದರು. ರಾಯರ ಅಳಿಯನಿಗೆ, ಬೀ. ಏ. ಪ್ಯಾಸ್‌ಮಾಡಿ, ೨೫ ರುಪಾಯಿಗಳ ಕೆಲಸವೆಂದರೆ ಅವಮಾನ ಎಂತ ತೋರಿತು. 'ಬೇಡೆ' ಅಂದ. ಬಿಟ್ಟೀ ಬಸವಯ್ಯನ ಹಾಗೆ, ಮಾವನ ಮನೆಯಲ್ಲಿ ತಿಂದು ತಿರುಗುತ್ತಾ ಇದ್ದ.

ರಾಯರ ಅಳಿಯ ಈ ಹೋಳಿಕಾಮಣ್ಣನ್ನ ನೋಡಿ, ಬಂಧುಬಾಂಧವರೆಲ್ಲರೂ ಕುಚೇಷ್ಟೆ ಮಾಡುತ್ತಾ ಇದ್ದರು. ಇದು ಕಮಲೂಗೂ ಕಿವಿಗೂ ಬಿತ್ತು. ಬೀ. ಏ. ಪ್ಯಾಸ್ ಮಾಡಿ, ಅಳಿಯ ಯಾವ ಕೆಲಸಕ್ಕೂ ಹೋಗುವುದಿಲ್ಲವಲ್ಲಾ ಎಂಬ ತಂದೆಯ ಅಸಮಾಧಾನವೂ ಆಕೆಗೆ ತಿಳಿದಿತ್ತು. ಅದೇ ಅವಳು, ಗಂಡನೊಡನೆ—

'ಇನ್ನೂ ಎಷ್ಟು ದಿನ ಹೀಗಿರೋದು?' ಅಂದಳು.

'ಎಷ್ಟು ದಿನಾ, ಅಂದರೇನೆ? ಒಳ್ಳೆ ಕೆಲಸ ದೊರಿಯೋ ತನಕ. ಅಲ್ಲಾ, ಬೀ. ಏ. ಪರೀಕ್ಷೆ ಮಾಡಿ, ೨೫ ರೂಪಾಯಿ ಕೆಲಸಕ್ಕೆ ಹೋಗು ಎಂದರೆ, ಇದಕ್ಕೇನು ಅರ್ಥ? ಅದು ನನಗೆ ಮಾನವೇ? ನಿಮ್ಮಪ್ಪನಿಗೆ ಮಾನವೇ?'

'ಆದರೆ ನೀವು ಹೀಗೇ ಕೂತಿದ್ದರೆ, ನಮ್ಮ ಬಂಧುಬಾಂಧವರೆಲ್ಲಾ ನಮ್ಮನ್ನ ಹಾಸ್ಯ ಮಾಡ್ತಾರಲ್ಲಾ! ರಾಯರ ಅಳಿಯ, ಮನೆ ತೊಳಿಯಾ, ಜಗುಲಿಬಿಟ್ಟು ಕೆಳಗಿಳಿಯಾ ಎಂತ! ಈ ಮಾತಿನ್ನ ಎಷ್ಟು ಸಲ ಕೇಳಲಿ! ನಾಚಿಗೆಯಲ್ಲವೇ?'

'ಹಾಗಾದರೆ ಏನು ಮಾಡ್ಬೇಕುಂತಿಯಾ? ಏನಾದರೂ ಒಂದು ಸ್ವತಂತ್ರ ಉದ್ಯೋಗ ಮಾಡಲೆ?'

'ಮಾಡಿ, ಯಾರು ಬೇಡ ಅಂತಾರೇ?'

'ಆದರೆ ನೋಡು—ಊರಿನಲ್ಲಿ ಕೂತು ಯಾವ ಸ್ವತಂತ್ರ ಉದ್ಯೋಗವನ್ನೂ ಮಾಡುವ ಹಾಗಿಲ್ಲ. ಇಲ್ಲಿ ಅದಕ್ಕೆ ಸ್ಕೋಪ್ ಇಲ್ಲ. ಬೊಂಬಾಯಿಯಂಥ ದೊಡ್ಡ ಪಟ್ಟಣಕ್ಕೆ ಹೋದರೆ, ಏನಾದರೂ ಆಗಬಹುದು.'

'ಹಾಗಾದರೂ ಮಾಡಿ—ನಿಮ್ಮ ಧರ್ಮ'

'ನಿನ್ನ ಬಿಟ್ಟಿರಬೇಕಲ್ಲ!'

'(ನಗುತ್ತ) ಅದಕ್ಕೇನು ಮಾಡೋದು? ಯಾವಾಗಲೂ ಹೆಂಡತಿ ಮುಖ ನೋಡಿಕೊಂಡೇ ಇರಬೇಕು ಅಂದ್ರೆ ಆಗುತ್ತೆಯೇ? ಬೊಂಬಾಯಿಗೆ ಹೋಗಿ; ಏನಾದರೂ ಸ್ವತಂತ್ರ ಉದ್ಯೋಗ ಸಂಪಾದಿಸಿ; ಆ ಮೇಲೆ ಕರೆಸಿಕೊಳ್ಳಿ—ನನ್ನ, ಮಕ್ಕಳನ್ನ!'

'ಹೋಗುವಾಗ ಒಂದಿಷ್ಟು ದುಡ್ಡು ಬೇಕಲ್ಲ! ನಿಮ್ಮಪ್ಪ ಬೇರೆ ಕೊಡಲಾರರು. ಅವರಿಗೆ ನನ್ನ ಮೇಲೆ ಕೋಪವಿದೆ—೨೫ ರುಪಾಯಿ ಕೆಲಸಕ್ಕೆ ಹೋಗಿಲ್ಲ ಅಂತ. ನನಗೆ ಸರಕಾರಿ ನವುಕರಿಯಲ್ಲೇನೂ ಇಷ್ಟವಿಲ್ಲ. ಅದು ಗುಲಾಮಗಿರಿ ಕೆಲಸ. ಆದ್ದರಿಂದ ದುಡ್ಡಿಗೇನಾದರೂ ಮಾರ್ಗ ಮಾಡು, ಬೊಂಬಾಯಿಗೆ ಹೊರಡುತ್ತೇನೆ.'

'ಅಲ್ಲಿಯೂ ನೀವು ಮದ್ರಾಸಿನಲ್ಲಿ ಮಾಡಿದ ಹಾಗೆ ದುಡ್ಡು ಹಾಳುಮಾಡಲಾರಿರಷ್ಟೆ. ಆಗಲಾದರೂ ನನ್ಮಪ್ಪನಿಗೆ ಕೆಲಸವಿತ್ತು. ಈಗ ಪೆನ್‌ಶನ್, ನೆನಪಿರಲಿ!'

(ರಾಯರ ಅಳಿಯ ಬೊಂಬಯಿಯಲ್ಲೇನು ಮಾಡಿದರೆಂದು ಮುಂದೆ ನೋಡಿ!)

ನರಸಿಂಹ ಲೇಹಂ

(ಸ್ವರ್ಣ ಸಹಿತ) ನಿಶ್ಶಕ್ತರಿಗೊಂದು ವರಪ್ರದಾನ.

ರಕ್ತ, ಶಕ್ತಿ, ಚೈತನ್ಯ, ತ್ರಾಣ ಮತ್ತು ಮನುಷ್ಯತ್ವವನ್ನು ವೃದ್ಧಿಗೊಳಿಸುತ್ತದೆ. ಉಷ್ಣ ಮತ್ತು ಬಹುಮೂತ್ರವನ್ನು ಗುಣಪಡಿಸುತ್ತದೆ. 2 ಕರಡಿಗೆಗಳು ಸಾಕು.

20 ತೊಲೆಗಳ ಕರಡಿಗೆಯೊಂದರ ರೂ. 2—8—0.

ವಿ. ಪಿ. ಪ್ರತ್ಯೇಕ.

P. C. A. & Co., Ayurvedic Samaj,
Peridepi, Nellore Dt.

ದಿಲ್‌ಕುಷ್ ಲೇಹಂ.

ಒಂದೇ ಸಾರಿಯ ಸೇವನೆಯಿಂದ ಗುಣ. ಇಲ್ಲವಾದರೆ ಹಣ ಪರತ.

ಈ ಔಷಧರಾಜ, ಚುನಾಯಿತ ಔಷಧ, ಮೂಲಿಕೆ, ಲೋಹ ಮತ್ತಿತರ ನವಚೈತನ್ಯದಾಯಕ ಪದಾರ್ಥಗಳ ಶಾಸ್ತ್ರೀಯ ಸಮ್ಮಿಳನವಾಗಿದ್ದು, ನಮ್ಮ ಪೂರ್ವಿಕರು ಬಹಳ ಖರ್ಚಿನಿಂದ ಮಹಾರಾಜರು ಮತ್ತು ನವಾಬರುಗಳಿಗಾಗಿ ಪೂರ್ವದಲ್ಲಿ ತಯಾರಿಸುತ್ತಿದ್ದರು. ಈಗ ನಾವು ಈ ಲೇಹವನ್ನು ಗಂಡಸರ ಮತ್ತು ಹೆಂಗಸರ ಸಾರ್ವಜನಿಕ ಉಪಯೋಗಕ್ಕಾಗಿ ತಯಾರಿಸುತ್ತಿದ್ದೇವೆ. ಅದು ಅವರನ್ನು ಯಾವಾಗಲೂ ಯೌವನವಂತರಾಗಿರಿಸುತ್ತದೆ. ಅವರ ಪ್ರಕೃತಿಯನ್ನು ಅದು ನವಚೈತನ್ಯಗೊಳಿಸುತ್ತದೆ ಮತ್ತು ಗುಣವನ್ನು ಆರಂಭದಿಂದಲೇ ಕಾಣಬಹುದು. ದಿನೇ ದಿನೇ ಅವರ ಸಾಮರ್ಥ್ಯವೂ ವೀರ್ಯವೂ ವರ್ಧಿಸುವುದು. ಸಂಕ್ಷೇಪತಃ ದಿಲ್‌ಕುಷ್ ಲೇಹದ ಸ್ವಲ್ಪ ಸೇವನೆಯು ಶರೀರಬಲವನ್ನೂ, ಆರೋಗ್ಯವನ್ನೂ ಮತ್ತು ನವಚೈತನ್ಯವನ್ನೂ ಕೊಡುವುದು.

ಒಮ್ಮೆ ಪರೀಕ್ಷಿಸಿರಿ ಮತ್ತದರ ವರಪ್ರದಾನವನ್ನು ಪಡೆಯಿರಿ.

ಕ್ರಯ: ಹದಿನೈದು ದಿನಗಳ ಸೇವನೆಯ ಡಬ್ಬಿಯೊಂದರ ರೂ. 1—12—0. ಒಂಭತ್ತು ತಿಂಗಳ ಸೇವನೆಯ ಡಬ್ಬಿಯೊಂದರ ರೂ. 3—0—0.

ಬರೆಯುವರೆ ನಿಳಾಸ:—

Dr. K. Siva Prasada Rao,
Rajahmundry,
East Godavary Dt.
4, 26-6

ಹಳೆಯದೆಲ್ಲ ತ್ಯಾಜ್ಯವೆ?

(ಲೇಖಕ:—ಶ್ರೀ. ಕಟೆಸಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ.)

ಹಳತಾದುದೆಲ್ಲ ತ್ಯಾಜ್ಯವೇ?–ಅಲ್ಲವೆಂದೇ ಹೇಳಬೇಕಾಗುತ್ತದೆ. ಆದರೆ ಅರ್ವಾಚೀನ ಪಾಶ್ಚಾತ್ಯ ನಾಗರಿಕತೆ–ಸಂಸ್ಕೃತಿಗಳ ಮಾಯಾ ಜಾಲದಲ್ಲಿ ಸಿಕ್ಕಿಬಿದ್ದು ಸುಧಾರಕರೆನ್ನಿಸಿಕೊಳ್ಳುವ ಅನೇಕ ಮಂದಿ ಭಾರತೀಯರು ತಮ್ಮ ಪ್ರಾಚೀನ ನಾಗರಿಕತೆ–ಸಂಸ್ಕೃತಿ ಎಲ್ಲವನ್ನೂ ತೆಗಳುತ್ತಾರೆ. ಯಾಕೆ?—ಅದು ಹಳತಾಗಿರುವ ದೆಂದು; ಮತ್ತು ಅವರು ಪಾಶ್ಚಾತ್ಯ ನಾಗರಿಕತೆ–ಸಂಸ್ಕೃತಿ ಎಲ್ಲವನ್ನು ಹೊಗಳುತ್ತಾರೆ. ಯಾಕೆ?–ಅದು ಹೊಸತಾಗಿರುವದೆಂದು. ಚೆನ್ನಾಗಿ ವಿಚಾರ ಮಾಡಿ ನೋಡಿದವರಿಗೆ ಹೊಸತಾಗಿ ಹೊಳೆಯುವದೆಲ್ಲ ಚಿನ್ನವಲ್ಲವೆಂದೂ, ಹಳತಾಗಿ ಮಂಕಾಗಿರುವದೆಲ್ಲ ಹಿತ್ತಾಳೆಯಲ್ಲವೆಂದೂ ಸುಲಭವಾಗಿ ಗೊತ್ತಾಗಬೇಕಾದೀತು. ಪುರಾತನ–ನವೀನ ಎಂಬ ಭೇದಬುದ್ಧಿಯನ್ನಿಟ್ಟುಕೊಳ್ಳದೆ ಪ್ರತಿಯೊಂದನ್ನು ವಿವೇಕ ಬುದ್ಧಿ–ವಿಚಾರಶಕ್ತಿಯ ಒರೆಗಲ್ಲಿಗೆ ಹಚ್ಚಿ ಸತ್ಯವೆಂದು ತೋರಿದುದನ್ನು ಸ್ವೀಕರಿಸುವದು ನಮ್ಮ ಧರ್ಮವು. ಯಾವ ವಿಷಯದಲ್ಲಿ ಯಾದರೂ ಸರಿಯೇ—ತನ್ನ ಮರಿ ಹೊನ್ನ ಮರಿ, ಅನ್ಯರ ಮರಿ ಕಾಗೆ ಮರಿ ಎನ್ನುವ ದುರಭಿಮಾನವು ತ್ಯಾಜ್ಯವಾಗಿರುವಂತೆ, ಪ್ರತಿಯೊಂದು ವಿಷಯದಲ್ಲಿಯೂ ತನ್ನ ಮರಿ ಕಾಗೆ ಮರಿ, ಪರರ ಮರಿ ಹೊನ್ನ ಮರಿ ಎನ್ನುವ ನಿರಭಿಮಾನವು ಕೂಡ ನಿಷೇಧನೀಯವಾಗಿರುವದು. ತ್ಯಾಜ್ಯವಾದ–ಸ್ವೀಕಾರ್ಯವಾದ ವಿಷಯಗಳು ಪ್ರಾಚೀನ ಅರ್ವಾಚೀನ, ಪೌರ್ವಾತ್ಯ ಪಾಶ್ಚಾತ್ಯ ನಾಗರಿಕತೆ ಸಂಸ್ಕೃತಿಗಳೆರಡರಲ್ಲಿಯೂ ಇರುತ್ತವೆ. ಸಂಪೂರ್ಣ ತ್ಯಾಜ್ಯವೆಂದು ಒಂದನ್ನು ಬಿಡಲಿಕ್ಕೂ ಇಲ್ಲ; ಸಂಪೂರ್ಣ ಸ್ವೀಕಾರ್ಯವೆಂದು ಇನ್ನೊಂದನ್ನು ಹಿಡಿಯಲಿಕ್ಕೂ ಇಲ್ಲ. ನಾವು ಹೀಗೆಲ್ಲ ಮಾಡದೆ ಹೊಸತಾದುದನ್ನು ಸಂಪೂರ್ಣ ಸತ್ಯವೆಂದು ನಂಬುತ್ತ ಹೋದರೆ, ಅಲ್ಲಾವುದ್ದೀನನ ಕಥೆಯಲ್ಲಿ ಹಳೆ ದೀಪವನ್ನು ಕೊಟ್ಟು, ಹೊಸ ದೀಪವನ್ನು ಕೊಂಡುಕೊಂಡವನಂತೆ, ಅಪಹಾಸ್ಯಕ್ಕೂ ಅಪಾರವಾದ ಕಷ್ಟನಷ್ಟಗಳಿಗೂ ಗುರಿಯಾಗಬೇಕಾದೀತು.

ಮಹಾಭಾರತವು ಒಂದು ಪ್ರಾಚೀನ ಗ್ರಂಥ. ವಾಸ್ತವವಾಗಿ ಅದು ಒಂದು ಐತಿಹಾಸಿಕ ಗ್ರಂಥವಾಗಿರುವದಾದರೂ ಕೆಲವರಿಗೆ ಮಾತ್ರ ಅದು ರೂಪಕವೆಂದು ತೋರುತ್ತದೆ. ಅವರಿಗೆ ಹಾಗೆ ತೋರಲಿಕ್ಕೆ ಕಾರಣ ಇಷ್ಟೆ—ಅದು ಹಳತಾಗಿದೆ, ಅದರಲ್ಲಿ ವರ್ಣಿತವಾಗಿರುವ ಕೆಲವು ಸಂಗತಿಗಳನ್ನು ಸತ್ಯವೆಂದು ನಂಬಲಿಕ್ಕಾಗುವದಿಲ್ಲ, ಅವುಗಳು ಸಂಭವನೀಯ ಎಂದು ಪಾಶ್ಚಾತ್ಯರು ಹೇಳಿಲ್ಲ. ಆದ್ದರಿಂದ ಮಹಾಭಾರತದಲ್ಲಿ ಹೇಳಿರುವದೆಲ್ಲ ಕವಿಕಲ್ಪನೆ, ಐತಿಹಾಸಿಕ ತಥ್ಯವು ಅದರಲ್ಲಿಲ್ಲ. ಉದಾಹರಣೆಗಾಗಿ ಈ ಒಂದು ಸಂಗತಿಯನ್ನು ಕೊಡಬಹುದು—ಕುರುಕ್ಷೇತ್ರದಲ್ಲಿ ಮಹಾಭಾರತ ಯುದ್ಧವು ನಡೆಯುತ್ತಿರುವ ಕಾಲದಲ್ಲಿ ಅಂಧನಾದ ಧೃತರಾಷ್ಟ್ರ ಮಹಾರಾಜನು ರಾಜಧಾನಿಯಾದ ಹಸ್ತಿನಾವತಿಯಲ್ಲಿಯೇ ಇದ್ದುಕೊಂಡು ಸಂಜಯನಿಂದ ಯುದ್ಧಕ್ರಮವನ್ನೂ ಯುದ್ಧಸಮಾಚಾರಗಳನ್ನೂ ಕೇಳುತಿದ್ದನಾಗಿಯೂ, ಸಂಜಯನು ಹಸ್ತಿನಾವತಿಯಲ್ಲಿಯೇ ಇದ್ದುಕೊಂಡು ಯುದ್ಧವನ್ನು ನೋಡಿದಂತೆ, ಕೇಳಿದಂತೆ ಧೃತರಾಷ್ಟ್ರನಿಗೆ ವರ್ಣಿಸುತಿದ್ದನಾಗಿಯೂ ಮಹಾಭಾರತದಲ್ಲಿ ಉಲ್ಲೇಖವಿದೆ. ಮಹಾಭಾರತಾಂತರ್ಗತ ಶ್ರೀ ಮದ್ಭಗವದ್ಗೀತೆಯ ಅಧ್ಯಯನದಿಂದಲೂ ಈ ಮಾತಿನ ಸ್ಪಷ್ಟೀಕರಣವಾಗುತ್ತದೆ. ಕೂತಲ್ಲಿಂದ ದೂರದ ದೃಶ್ಯಗಳನ್ನು ನೋಡುವ ಮತ್ತು ಶಬ್ದಗಳನ್ನು ಕೇಳುವ ದಿವ್ಯಶಕ್ತಿಯನ್ನು ಶ್ರೀ ವೇದವ್ಯಾಸ ಮಹರ್ಷಿಗಳು ಸಂಜಯನಿಗೆ ದಯಪಾಲಿಸಿದ್ದರಾಗಿಯೂ ಮಹಾಭಾರತದಿಂದ ಗೊತ್ತಾಗುತ್ತದೆ. ಹೀಗೆ ದೂರದಲ್ಲಿದ್ದು ನೋಡುವ ಕೇಳುವ ದಿವ್ಯಶಕ್ತಿಯು ಯಾರಿಗಾದರೂ ಪ್ರಾಪ್ತವಾಗುವದಿದೆಯೆ? ಅಂಧಶಕ್ತಿಯು ಪ್ರಾಪ್ತವಾದ ಮನುಷ್ಯನು ಅದನ್ನು ಬೇರೊಬ್ಬನಿಗೆ ದಯಪಾಲಿಸುವದಿದೆಯೆ? ಸರ್ವಥಾ ಅಸಂಭವನೀಯ. ಆದ್ದರಿಂದ ಹಳೆಯದಾದ ಮಹಾಭಾರತವು ಒಂದು ರೂಪಕವಲ್ಲದೆ ಐತಿಹಾಸಿಕ ಗ್ರಂಥವಾಗಿರುವದಿಲ್ಲವೆಂದು ಆ ಕೆಲವರು ಸಾಧಿಸುತ್ತಾರೆ. ಈಗ ಇದು ತ್ಯಾಜ್ಯವೇ ಸ್ವೀಕಾರ್ಯವೇ ಎಂದು ನೋಡೋಣ.

ಅರ್ವಾಚೀನ ಪಾಶ್ಚಾತ್ಯ ನಾಗರಿಕತೆಯ ವ್ಯಾಮೋಹವು ಕೆಲವರ ಮೈಯಲ್ಲಿ ಎಷ್ಟು ಬಲವಾಗಿ ಅಂಟಿಕೊಂಡಿರುವದೆಂದರೆ, ಯಾವದಾದರೊಂದು ವಿಷಯವನ್ನು ಅವರು ಸತ್ಯವೆಂದು ನಂಬಬೇಕಾದರೆ ಅದನ್ನು ಮೊದಲು ಪಾಶ್ಚಾತ್ಯರು—ಅಥವಾ ಅವರ ಅನುಯಾಯಿಗಳು ಸತ್ಯವೆಂದು ಹೇಳಬೇಕು! ಸ್ತ್ರೀಪುರುಷಸಂಯೋಗವಿಲ್ಲದೆ ಒಬ್ಬನು ಮಕ್ಕಳನ್ನು ಹುಟ್ಟಿಸುತ್ತಾನೆಂದರೆ, ಅದು ಸತ್ಯ; ಕಣ್ಣಿನ ಸಹಾಯವಿಲ್ಲದೆ ಇನ್ನೊಬ್ಬನು ಬರೇ ಮೂಗಿನಿಂದ ನೋಡುತ್ತಾನೆಂದರೆ, ಅದು ಸತ್ಯ; ಕಿವಿಯ ಸಹಾಯವಿಲ್ಲದೆ ಮಗದೊಬ್ಬನು ಕಣ್ಣಿನಿಂದ ಕೇಳುತ್ತಾನೆಂದರೆ, ಅದೂ ಸತ್ಯ; ಕೆಲವು ದ್ರಾವಕಗಳ ಉಪಯೋಗದಿಂದ ನಾಲ್ಕನೆಯವನೊಬ್ಬನು ಅದೃಶ್ಯನಾಗುತ್ತಾನೆಂದರೆ, ಅದು ಕೂಡ ಸತ್ಯವೇ ಆಗಿರಬೇಕು. ಯಾಕಂದರೆ ಈ ಎಲ್ಲ ವರ್ತಮಾನಗಳು ಪಾಶ್ಚಾತ್ಯರಿಂದ ನಮಗೆ ಬರುತ್ತವೆ; ಅವು ಶೀರ ಹೊಸತಾಗಿಯೂ ಇರುತ್ತವೆ. ಹಾಗೆಯೇ ಸಾವಿರಾರು ಮೈಲುಗಳ ದೂರದಿಂದ ಒಬ್ಬನು ನೋಡುತ್ತಾನೆಂದೂ, ಇನ್ನೊಬ್ಬನು ಕೇಳುತ್ತಾನೆಂದೂ ಪಾಶ್ಚಾತ್ಯರು ಹೇಳಿದರೆ, ಅದು ಸತ್ಯವೇ ಆಗಿರಬೇಕು. ಯಾಕಂದರೆ ವಿಜ್ಞಾನಕ್ಕೆ ಅಸಾಧ್ಯವಾದುದು ಯಾವುದೂ ಇಲ್ಲ. ಪರಂತು ವೇದವ್ಯಾಸರಿಂದ ಸಂಜಯನಿಗೆ ದಿವ್ಯಶಕ್ತಿಯು ಪ್ರಾಪ್ತವಾಗಲು, ಅವನು ಹಸ್ತಿನಾವತಿಯಲ್ಲಿದ್ದು ಕುರುಕ್ಷೇತ್ರದ ಯುದ್ಧದ ನೋಟಗಳನ್ನು ನೋಡುತಿದ್ದನು, ಅಲ್ಲಿಯ ಗಲಭೆ–ಗಲಾಟೆಗಳನ್ನು ಕೇಳುತಿದ್ದನು ಎಂದು ಮಹಾಭಾರತದಲ್ಲಿ ಬರೆದಿದ್ದರೆ, ಅದು ಸಂಪೂರ್ಣ ಸುಳ್ಳು, ಅವಿಶ್ವಸನೀಯ, ಅಸಂಭವ, ಕವಿಕಲ್ಪಿತ—ಯಾಕಂದರೆ ಅದು ಹಳತು! ಇಂಥ ಮನೋವೃತ್ತಿಯುಳ್ಳವರು ಕೆಳಗಿನ ಕೆಲವು ಮಾತುಗಳನ್ನು ವಿಶೇಷ ಲಕ್ಷ್ಯ ಕೊಟ್ಟು ಓದಬೇಕು.

ಸಾವಿರಾರು ಮೈಲು ದೂರದ ಶಬ್ದಗಳನ್ನು ಇಲ್ಲಿದ್ದು ಕೇಳಲಿಕ್ಕೆ ನಮಗೆ ಸಾಧ್ಯವುಂಟು, ಮಾತ್ರವಲ್ಲ, ನಿತ್ಯವೂ ನಾವು ರೇಡಿಯೋದ ಮೂಲಕ ಕೇಳಿಯೂ ಇದ್ದೇವೆ. ಹಾಗೆಯೇ ವಿದ್ಯುಚ್ಛಕ್ತಿಯ ಯಂತ್ರಸಾಧನಗಳ ಮೂಲಕ ಒಂದು ಪ್ರದೇಶದಲ್ಲಿ ತೆಗೆದ ಚಿತ್ರವನ್ನು ಸಾವಿರಾರು ಮೈಲು ದೂರದಲ್ಲಿರುವ ಇನ್ನೊಂದು ಪ್ರದೇಶಕ್ಕೆ ನಿಮಿಷಾರ್ಧದಲ್ಲಿ ಕಳುಹಿಸಿಕೊಡಲಿಕ್ಕೆ ಸಾಧ್ಯವುಂಟು; ಕಳುಹಿಸಿಕೊಡುತ್ತಾರೆ. ಆದರೆ ಹೀಗೆ ಮಾಡಲಿಕ್ಕೆ ಯಂತ್ರಸಾಧನಗಳು ಬೇಕು.

ಯಂತ್ರಸಾಧನಗಳಿಲ್ಲದೆ ಬರೇ ಶಾರೀರಿಕ ಕ್ರಿಯೆ ಮತ್ತು ಕೆಲವು ಶಾರೀರಿಕ ಸಾಧನಗಳ ಮೂಲಕ ದೂರದ ನೋಟವನ್ನು ನೋಡುವ, ದೂರದ ಶಬ್ದವನ್ನು ಕೇಳುವ ಶಕ್ತಿಯು ಪ್ರಾಪ್ತವಾಗಬಲ್ಲುದು ಎಂದು ಪಾಶ್ಚಾತ್ಯರೇ ಹೇಳುತ್ತಾರೆ. ಹೀಗೆ ನೋಡುವದನ್ನೂ ಕೇಳುವದನ್ನೂ ವಿಜ್ಞಾನದ ಎರಡು ಅಂಗಗಳಾಗಿರುವವೆಂದು ತಿಳಿದು ಪಾಶ್ಚಾತ್ಯರು ಅವುಗಳಿಗೆ ಕ್ರಮವಾಗಿ Clairvoyance ಮತ್ತು Clairaudience ಎಂಬ ಹೆಸರುಗಳನ್ನು ಕೊಟ್ಟಿದ್ದಾರೆ. ಅಭ್ಯಾಸಬಲದಿಂದ ಈ ಶಕ್ತಿಗಳು ಮನುಷ್ಯನಿಗೆ ಪ್ರಾಪ್ತವಾಗುತ್ತವೆಂದು ಅವರು ಹೇಳುತ್ತಾರೆ. ಹಾಗೆಯೇ ಒಬ್ಬ ಮನುಷ್ಯನನ್ನು ಸ್ವಪ್ನಾವಸ್ಥೆಗೆ ತಂದು ಅವನ ಮೂಲಕ ಅಜ್ಞಾತ ಸಂಗತಿಗಳನ್ನು ತಿಳಿಕೊಳ್ಳುವದೂ (Hypnotism), ಪರಕಾಯಪ್ರವೇಶ ಮೊದಲಾದವೂ (Spiritualism) ಸುಳ್ಳೆಂದು ಅವರು ಹೇಳುವದಿಲ್ಲ. ಮಾತ್ರವಲ್ಲ, ಈ ಎಲ್ಲ ವಿಜ್ಞಾನಾಂಗಗಳ ಅಧ್ಯಯನ ಮಾಡಿ ಅನೇಕ ಆತ್ಯಾಶ್ಚರ್ಯಕರ ಪರಿಶೋಧನೆಗಳನ್ನು ಕೂಡ ಪಾಶ್ಚಾತ್ಯರು ಮಾಡಿರುತ್ತಾರೆ. ಈ ಎಲ್ಲ ವಿದ್ಯೆಗಳಿಗೆ ತಮ್ಮ ದೇಶೀ ಭಾಷೆಯ ಹೆಸರುಗಳನ್ನು ಕೊಟ್ಟು ಹೊಸ ರೂಪದಲ್ಲಿ ಅವುಗಳನ್ನು ಪಾಶ್ಚಾತ್ಯರು ನಮ್ಮ ಮುಂದೆ ಇಟ್ಟಿರುವದರಿಂದ ಅವುಗಳು ಸತ್ಯ. ಆದರೆ ಇಂದ್ರಜಾಲ, ಮಹೇಂದ್ರಜಾಲ, ದರ್ಶನ, ಆವೇಶ, ಮಾಟವೋಡಿ ಇವುಗಳು ಅಸತ್ಯ! ಪರಂತು ಇವುಗಳಿಗೇ ಪಾಶ್ಚಾತ್ಯರು ಆ ಹೆಸರುಗಳನ್ನು ಇಟ್ಟಿದ್ದಾರೆಂಬುದು ಪ್ರಾಯಶಃ ಎಲ್ಲರೂ ತಿಳಿದಿರುವದಿಲ್ಲ.

(ಉನೇ ಪುಟಕ್ಕೆ ಮುಂದರಿಸಿಯದೆ.)

ಹೊಲಿಗೆ ಕೆಲಸ ಮಾಡುವವರಿಗೂ, ಕಲಿಯುವವರಿಗೂ ಇದೊಂದು ಅಲಭ್ಯ ಲಾಭ!

ಹೆಸರಾದ ಹೊಲಿಗೆಯ ಶಾಲೆಗಳಲ್ಲಿ ಪಠ್ಯ ಪುಸ್ತಕವೆಂದು ಮಾನ್ಯತೆಪಟ್ಟ

ಸಚಿತ್ರ ಕರ್ತನಕಲಾ-ವಿಜ್ಞಾನ.

(ಭಾಗ ೧ — ಮರಾಠಿ.)

ಈ ಮೊದಲನೇ ಭಾಗದಲ್ಲಿ ೬ ತರದ ಪೈರಣ, ೧೯ ತರದ ಶರ್ಟುಗಳು, ೨ ನಮೂನೆಯ ಸೆಪರೇಟ ಕೊಲರು, ೨ ಜಾತಿಯ ಬನಿಯನ್‌ಗಳು ಮತ್ತು ೪ ತರದ ಇಜಾರುಗಳು ಕತ್ತರಿಸುವ ಶಾಸ್ತ್ರೀಯ ಪದ್ಧತಿಯು ಅಗದೀ ಸುಲಭ ರೀತಿಯಿಂದ ವಿವರಿಸಲ್ಪಟ್ಟಿದೆ. ಈ ವಿನಹ ೨೬ ಜಾತಿಯ ಫ್ಯಾಶನ್ನು ಆರ್ಟ ಫೋಟೋಗಳಿವೆ. ಈ ಪುಸ್ತಕದ ಸಹಾಯದಿಂದ ಯಾರೂ ವಸ್ತ್ರ ಕತ್ತರಿಸುವ (ಕಟಿಂಗ್) ಕಲೆಯನ್ನು ಸುಲಭವಾಗಿ ಕಲಿಯಬಹುದು.

ವಸ್ತ್ರದ ಬ್ಯಾಂಡಿಂಗ ಸಮೇತ ಪ್ರತಿ ಗಿಕ್ಕೆ ರೂ. ೨—೮—೦. (ಅಂಚೆ ಹಾಸಲು ಬೇರೆ).

ಸೂಚನೆ:— ಈ ಪುಸ್ತಕವನ್ನು ಕನ್ನಡಿಸಿ ಪ್ರಕಟಿಸುವ ಸಂಕಲ್ಪವಿದೆ. ಕನ್ನಡದಲ್ಲಿ ಇಂಥ ಪುಸ್ತಕವು ಇದೇ ಮೊದಲನೇದಾದ್ದರಿಂದ ಬೇಕಷ್ಟೇ ಪ್ರತಿಗಳನ್ನು ತೆಗೆಯುವೆವು. ಕಟಿಂಗ ಕಲೆಯನ್ನು ಶಾಸ್ತ್ರೀಯ ಪದ್ಧತಿಯಿಂದ ಕಲಿಯಬಯಸುವವರು ಈ ಪುಸ್ತಕಕ್ಕಾಗಿ ಇಂದೀಗಲೇ ರೂ. ೨—೮—೦ ಕಳಿಸಿ ಹೆಸರು ದಾಖಲೆಪಡಿಸಿಕೊಳ್ಳುವುದು. ಜೂನ್ ತಿಂಗಳ ಕೊನೆಯೊಳಗೆ ಹೆಸರು ದಾಖಲೆಪಡಿಸುವವರಿಗೆ ಅಂಚೆ ವೆಚ್ಚ ಮಾಫಿಯಿಂದ ಜುಲ್ಯಾ ತಿಂಗಳಲ್ಲಿ ಪುಸ್ತಕವನ್ನು ಕಳಿಸಿಕೊಡುತ್ತೇವೆ.

ಟೇಲರ್ಸರಿಗೆ ಬೇಕಾಗುವ ಫ್ಯಾಶನ್ ಬೂಕುಗಳನ್ನೂ, ಫ್ಯಾಶನ್ ಪ್ಲೇಟುಗಳನ್ನೂ, ಬಾಗಲಿಗೆ ಹಚ್ಚುವ ದೊಡ್ಡ ರಂಗೀತ ಚಿತ್ರಗಳನ್ನೂ, ಇತರೇ ಅವಶ್ಯಕ ಸಾಮಾನುಗಳನ್ನೂ ಯೋಗ್ಯ ದರದಿಂದ ಕಳಿಸಿಕೊಡುವೆವು. ಈ ಮುಂದಿನ ಎರಡು ಭಾಗಗಳನ್ನು ಅದಷ್ಟು ಬೇಗನೇ ಪ್ರಸಿದ್ಧಿಸುವವರಿದ್ದೇವೆ.

ವಿಶೇಷ ಮಾಹಿತಿ ಬೇಕಾದರೆ ಈ ಕೆಳಗಿನ ಪತ್ತೆಗೆ ಬರೆಯಿರಿ:—

ROYAL ART PUBLISHERS,
Amir Building, Tribhuvan Road,
BOMBAY, 4.

ರೋಯಲ್ ಆರ್ಟ್ ಪಬ್ಲಿಶರ್ಸ್,
ಅಮೀರ ಬಿಲ್ಡಿಂಗ್, ತ್ರಿಭುವನ ರೋಡ್,
ಮುಂಬಯಿ, 4.

THE DECCAN CO.,
Cantonment, :: MANGALORE,
Agents for
"Mohini Coffee Powder"
and
"Kelagur Tea"
ಡೆಕ್ಕಾನ್ ಕಂಪೆನಿ
ಕೆಂಟೋನ್‌ಮೆಂಟ್—ಮಂಗಳೂರು.

ಕಾಫಿ ತೋಟಗಳಿಗೂ, ತೆಂಗು ಇತ್ಯಾದಿ ಫಲವಸ್ತುಗಳ ಮರಗಳಿಗೂ, ಅಡಕೆ ತೋಟಗಳಿಗೂ ಬೇಕಾಗುವ ಗೊಬ್ಬರಗಳು ಇವರಲ್ಲಿ ಯಾವಾಗಲೂ ದೊರೆಯುತ್ತವೆ.

ಪ್ರಸಿದ್ಧ "ಮೋಹಿನಿ ಕಾಫಿ ಹುಡಿ" ಮತ್ತು "ಕೆಳಗೂರ್ ಟೀ" ಇದರ ವಿಜಂಟೆರು.

— ಸಣ್ಣಪರ —
ಸುಬೋಧಶತಕ
ಟಿಕ್ಸ್‌ಟ ಬುಕ್ ಕಮಿಟಿಯಲ್ಲಿ
ಮಂಜೂರಾದ
ಪಾಠಶಾಲಾ—ಪಠ್ಯಪುಸ್ತಕ.

ತಿದ್ದಿ ಬೆಳೆಸಿದ 2ನೇ ಆವೃತ್ತಿ–ಬೆಲೆ: 0-2-6.
ಎಲ್ಲ ಪುಸ್ತಕವ್ಯಾಪಾರಿಗಳಲ್ಲೂ ಸಿಗುವುದು.
ಒಂದಾಣೆಯ ಅಂಚೆಚೀಟನ್ನು ನಮಗೆ ಕಳುಹಿಸುವ ಉಪಾಧ್ಯಾಯರಿಗೆ ಒಂದು ಪ್ರತಿ ಮಾದರಿಗಾಗಿ ಕಳುಹುವೆವು.

ವಿಳಾಸ:—
ವಿಕ್ಟೋರಿಯಾ ಮುದ್ರಾಶಾಲೆ,
ಬಂಟ್ವಾಳ, ದ. ಕನ್ನಡ.
12, 8-5.

ಡಾಕ್ಟರ್ ಸಿ. ಮತಾಯಸರ ಸಿದ್ಧೌಷಧಗಳು.

ಮಸ್ಕ್ ಪಿಲ್ಸ್—ಈ ಮಾತ್ರೆಗಳು ಮಕ್ಕಳ ಚೇಷ್ಟೆಯ ವ್ಯಾಧಿಗೆ ಅದ್ಭುತಕರ ಔಷಧ. ಮಕ್ಕಳು ಯಾವಾಗಲೂ ಕೂಗುತ್ತಾ ಇರುವದು, ಕೈಕಾಲು ನಡುಗುವದು, ಮೂರ್ಛೆಯಾಗುವದು ಮುಂತಾದ ರೋಗಗಳನ್ನು ಗುಣಪಡಿಸುತ್ತದೆ. ರೋಗವಿಲ್ಲದವರಿಗೆ ಕೊಟ್ಟರೂ ಸುಖವಾಗಿರುವರು. ಒಳ್ಳೇ ತ್ರಾಣ ಕೊಡುವ ಶಕ್ತಿ ಇದೆ. ಕೇವಲ ಹಸುಮಗುವಿಗೂ ನಿರ್ಭಯವಾಗಿ ಕೊಡಬಹುದು. ಬೆಲೆ, 100 ಮಾತ್ರೆ I ಕ್ಲಾಸ್ 4 ರೂ; II ಕ್ಲಾಸ್ 1½ ರೂ.

ಇದಲ್ಲದೆ ಟಿಸ್ಯೂ ಮದ್ದುಗಳೂ, ಹೊಮ್ಯೋಪೆತಿಕ್ ಔಷಧಗಳೂ, ಹೊಮೊ ಕೊಂಬಿನೊ ಔಷಧಗಳೂ ದೊರಕುತ್ತವೆ. ಹೆಚ್ಚಿನ ಮಾಹಿತಿಗೆ ಮತ್ತು ಇಂಗ್ಲಿಷ್ ಕ್ಯಾಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಡಾಕ್ಟರ್ ಸಿ. ಮತಾಯಸ್, ಎಂ. ಡಿ. (ಹೊಮ್ಯೋ.) ಎಂ. ಬಿ. (ಆಯುರ್)
ಪೂವರ್ ಸರ್ವಿಸ್ ಲೋಜ್, ಮಂಗಳೂರು.

QUALITY IS THE BEST SELLING STORY!
THAT IS WHY
"RAJA CYCLE"
IS THE BEST SELLING BICYCLE.



The Specification
includes the best of everything
in materials, construction
and finish.

STOCKISTS:-
MESSRS.
The City Cycle Co.,
Mangalore.

(೩ನೇ ಪುಟದಿಂದ.)

ಮನಸ್ತತ್ವಜ್ಞಾನದ ಅಧ್ಯಯನ ಮಾಡಿದವರು ಕಣ್ಣು ಕಿವಿ ಮೊದಲಾದ ಇಂದ್ರಿಯಗಳು ಏನನ್ನೂ ಮಾಡುವದಿಲ್ಲವೆಂದೂ, ನೋಡುವ ಕೇಳುವ ಮೊದಲಾದ ಕ್ರಿಯೆಗಳು ಮನಸ್ಸಿನಲ್ಲಿ ಮಾತ್ರ ನಿಜವಾಗಿ ನಡೆಯುವಂಥವುಗಳಾಗಿರುವವೆಂದೂ ಶೋಧನೆಗಳ ಮೂಲಕ ತಿಳಕೊಂಡಿದ್ದಾರೆ. ಜನ್ಮಜನ್ಮಾಂತರದ ಅಭ್ಯಾಸಬಲದಿಂದ ಮಾತ್ರ ನೋಡುವ ಕೇಳುವ ಮೊದಲಾದ ಕಾರ್ಯಗಳು ಕಣ್ಣು ಕಿವಿ ಮೊದಲಾದ ಇಂದ್ರಿಯಗಳ ಮೂಲಕ ಆಗುತ್ತಿರುತ್ತವೆ. ನಿಜವಾಗಿ ನೋಡಹೋದರೆ, ಕಣ್ಣು ನೋಡುವದೂ ಇಲ್ಲ, ಕಿವಿ ಕೇಳುವದೂ ಇಲ್ಲ. ಅಂದರೆ, ಮನುಷ್ಯನು ಅಭ್ಯಾಸ ಮಾಡಿದರೆ ಕಣ್ಣಿಲ್ಲದೆ ನೋಡಬಲ್ಲನು, ಕಿವಿಯಿಲ್ಲದೆ ಕೇಳಬಲ್ಲನು. ಇನ್ನೊಂದು ರೀತಿಯಿಂದ ಹೇಳುವದಾದರೆ, ಮೂಗಿನ ಸ್ವಾಭಾವಿಕ ಧರ್ಮವು ಮೂಸುವದಾಗಿದ್ದರೂ, ಅದರ ಮೂಲಕ ನೋಡಲಿಕ್ಕೂ ಕಣ್ಣಿನ ಸ್ವಾಭಾವಿಕ ಧರ್ಮವು ನೋಡುವದಾಗಿದ್ದರೂ, ಅದರ ಮೂಲಕ ಕೇಳಲಿಕ್ಕೂ ಆಗುತ್ತದೆ. ವಿಜ್ಞಾನಿಗಳು ಯಂತ್ರ ಸಾಧನಗಳ ಮೂಲಕವೂ, ಆತ್ಮವಿದ್ಯಾಪಾರಂಗತರು (Spiritualists) ಶರೀರಾಭ್ಯಾಸ ಸಾಧನಗಳ ಮೂಲಕವೂ ಇಂಥ ಶಕ್ತಿಗಳನ್ನು ಸಂಪಾದಿಸುತ್ತಾರೆ.

ಆತ್ಮವಿದ್ಯಾಪಾರಂಗತರ ಶರೀರಾಭ್ಯಾಸ ಸಾಧನಕ್ಕೆ ಯೋಗವೆಂದು ಹೆಸರುಂಟು. ದೂರ ಶ್ರವಣ, ದೂರದೃಷ್ಟಿ, ಪರಕಾಯಪ್ರವೇಶ ಮೊದಲಾದವು ಯೋಗದ ನಿಕೃಷ್ಟ ಮತ್ತು ತ್ಯಾಜ್ಯ ಸಿದ್ಧಿಗಳಾಗಿರುವವವು. ಇವುಗಳಿಗಿಂತ ಉತ್ಕೃಷ್ಟವಾದ ಬೇರೆ ಅನೇಕ ಸಿದ್ಧಿಗಳಿರುತ್ತವೆ. ಸಂಪೂರ್ಣ ಯೋಗಸಾಧನೆಯಿಂದ ಮನೋಶಕ್ತಿಯು ಪೂರ್ಣ ವಿಕಾಸವಾಡಿಕೊಂಡವರು ಪಾಶ್ಚಾತ್ಯ ವಿಜ್ಞಾನಿಗಳಂತೆ ಯಂತ್ರಸಾಧನೆಗಳ ಉಪಯೋಗ ಮಾಡದೆಯೂ, ಕನಿಷ್ಟ ತರಗತಿಯ ಆತ್ಮವಿದ್ಯಾಭ್ಯಾಸಿಗಳಂತೆ ಶರೀರಸಾಧನೆಗಳ ಉಪಯೋಗ ಮಾಡದೆಯೂ ಬರೇ ಮನೋಶಕ್ತಿಯ ಬಲದಿಂದ ದೂರದ ನೋಟಗಳನ್ನು ನೋಡುವರು, ದೂರದ ಶಬ್ದಗಳನ್ನು ಕೇಳುವರು. ಅಷ್ಟು ಮಾತ್ರವಲ್ಲ, ನಮಗೆ ಅಸಾಧ್ಯವೆಂದು ತೋರುವ ಇನ್ನೂ ಅನೇಕಾನೇಕ ಸಿದ್ಧಿಗಳನ್ನು ಸಂಪಾದಿಸಿಕೊಳ್ಳುವರು. ವಿಜ್ಞಾನದಿಂದ ಸಾಧ್ಯವಾಗುವದಕ್ಕಿಂತಲೂ ಹೆಚ್ಚು ಯೋಗದಿಂದ ಸಾಧ್ಯವಾಗುವದೆಂದು ಮಹಾಯೋಗಿಗಳು ಹೇಳಿದ್ದಾರೆ. ಅವರು ಹೇಳಿದ ಮಾತು ಸತ್ಯವಾಗಿರುವದೆಂಬುದಕ್ಕೆ ಬೇಕಾದಷ್ಟು ಪ್ರಮಾಣಗಳೂ ದೊರೆತಿವೆ.

ಆದ್ದರಿಂದ ದೂರದ ನೋಟವನ್ನು ನೋಡುವ, ದೂರದ ಶಬ್ದವನ್ನು ಕೇಳುವ ಮೊದಲಾದ ಶಕ್ತಿಗಳು ವಿಜ್ಞಾನಿಗಳಿಗೆ ಯಂತ್ರಸಾಧನಗಳ ಮೂಲಕವಾಗಿಯೂ, ಕನಿಷ್ಟ ತರಗತಿಯ ಆತ್ಮವಿದ್ಯಾಭ್ಯಾಸಿಗಳಿಗೆ ದೇಹಸಾಧನಗಳ ಮೂಲಕವಾಗಿಯೂ, ಉತ್ಕೃಷ್ಟ ತರಗತಿಯ ಯೋಗಿಗಳಿಗೆ ಮನೋಬಲದ ಮೂಲಕವಾಗಿಯೂ ಬರುತ್ತದೆಂದು ಸಿದ್ಧವಾದ ಹಾಗಾಯಿತು. ತೈರೀರಬಂಧನ, ದೇಶಬಂಧನ, ಕಾಲಬಂಧನಗಳನ್ನು ಮುರಿಯುವದು ಕೂಡ ಯೋಗಿಗಳಿಗೆ ಸಾಧ್ಯವುಂಟು. ತ್ರಿಕಾಲದರ್ಶಿ, ತ್ರಿಲೋಕದರ್ಶಿ ಎಂಬ ಮಾತುಗಳು ಅರ್ಥಹೀನವಾದವುಗಳೂ ಅಲ್ಲ, ಅಸಂಭವಗಳೂ ಅಲ್ಲ. ಪರಂತು ವೇದವ್ಯಾಸರಂತೆ ಸಂಜಯನು ಮಹಾಯೋಗಿಯಾಗಿರಲಿಲ್ಲ; ಸಾಮಾನ್ಯ ಮನುಷ್ಯನಾಗಿದ್ದನು. ವೇದವ್ಯಾಸರು ತಮ್ಮ ದಿವ್ಯಶಕ್ತಿಯನ್ನು ಸಂಜಯನಿಗೆ ಕೊಟ್ಟಿದ್ದೆಂದು ಹೇಳಲ್ಪಟ್ಟಿದೆ. ಹೀಗಾಗುವದು ಸಾಧ್ಯವೇ? ಯೋಗಿಗಳಿಗೆ ಎಲ್ಲವೂ ಸಾಧ್ಯವೆಂದು ಹೇಳಿ ಸಂದೇಹನಿವಾರಣೆ ಮಾಡಬಹುದಾಗಿದ್ದರೂ ನಾವಿಲ್ಲಿ ಒಂದು ಪ್ರತ್ಯಕ್ಷ ಪ್ರಮಾಣವನ್ನು ಕೊಡುತ್ತೇವೆ. ಬಿ. ಎ. ಕಲಿತ ನರೇಂದ್ರನಾಥರಿಗೆ ದೇವರ ಅಸ್ತಿಕ್ಯದಲ್ಲಿ ಸ್ವಲ್ಪವೂ ವಿಶ್ವಾಸವಿರಲಿಲ್ಲ. ಅವರು ಆ ಕಾಲದ ದೊಡ್ಡ ನಾಸ್ತಿಕರೆನ್ನಿಸಿಕೊಂಡಿದ್ದರು. ಅವರಿಗೆ ಯೋಗದ ಆರಂಭಜ್ಞಾನವು ಕೂಡ ಇರಲಿಲ್ಲ. ಅಂಥವರ ಮಸ್ತಕದ ಮೇಲೆ ಶ್ರೀ ರಾಮಕೃಷ್ಣ ಪರಮಹಂಸರು ತಮ್ಮ ವರದ ಹಸ್ತವನ್ನು ಇಟ್ಟು ಆಶೀರ್ವದಿಸಿದೊಡನೆ ಆ ಮೊದಲು ಅನುಭವಿಸದ ಪರಮಾತ್ಮಸಾಕ್ಷಾತ್ಕಾರದ ಅಪೂರ್ವ, ಸಾಮಾನ್ಯರಿಗೆ ಅಲಭ್ಯವಾದ ಮಹತ್ಸುಖವನ್ನು ಅವರು ಉಂಡರೆಂದೂ, ಅವರ ನರನಾಡಿಗಳಲ್ಲಿ ಒಂದು ದಿವ್ಯ ಶಕ್ತಿಯ ಸಂಚಾರವಾಯಿತೆಂದೂ, ಆ ಮೇಲೆಯೇ ಅವರು ಸ್ವಾಮಿ ವಿವೇಕಾನಂದರೆಂದು ಅಜರಾಮರವಾದ ಸತ್ಕೀರ್ತಿಯನ್ನು ಸಂಪಾದಿಸಿದರೆಂದೂ ಅವರ ಜೀವನಚರಿತ್ರೆಯಿಂದ ಗೊತ್ತಾಗಬಹುದು. ಹೀಗೆ ಒಬ್ಬರಿಗಿದ್ದ ದಿವ್ಯಶಕ್ತಿಯನ್ನು ಅವರು ಇನ್ನೊಬ್ಬನಿಗೆ ಕೊಡಬಲ್ಲರು. ಮಹಾಯೋಗಿಗಳಾದ ವೇದವ್ಯಾಸರು ಸಂಜಯನಿಗೆ ಅಂಥ ಶಕ್ತಿಯನ್ನು ಕೊಟ್ಟುದರಲ್ಲಿ ಆಶ್ಚರ್ಯಪಡಲಿಕ್ಕೇನೂ ಇರುವದಿಲ್ಲ. ಆದ್ದರಿಂದ ತ್ಯಾಜ್ಯ-ಸ್ವೀಕಾರ್ಯವಾದವುಗಳು ಹಳತು ಹೊಸತು ಎಂಬ ಬೇಧವಿಲ್ಲದೆ ಎಲ್ಲವುಗಳಲ್ಲಿಯೂ ಇರುತ್ತವೆ. ನಿನ್ನೆ ಸತ್ಯವೆಂದು ತೋರಿದ ಸಿದ್ಧಾಂತಗಳು ಈ ಹೊತ್ತು ಸುಳ್ಳಾಗಿ ಪರಿಣಮಿಸಿವೆ. ಈ ಹೊತ್ತು ಸುಳ್ಳೆಂದು ತೋರಿದವು ನಾಳೆ ಪುನಃ ಸತ್ಯವಾಗಲೂ ಬಹುದು.

ಇಷ್ಟಾದ ಮೇಲೆ ನಾವು ತಿಳಕೊಳ್ಳಲಿಕ್ಕಿರುವದು ಇಷ್ಟು ಮಾತ್ರ—ಕೆಲವರು ಆಲೋಚಿಸುವ ಪ್ರಕಾರ ಹಳತಾಗಿರುವದೆಲ್ಲ ತ್ಯಾಜ್ಯವಾಗಿರುವದಿಲ್ಲ. ಹೊಸತಾಗಿರುವದೆಲ್ಲ ಸ್ವೀಕಾರ್ಯವಾಗಿಯೂ ಇರುವದಿಲ್ಲ. ಅಂಧಾನುಸರಣೆ, ಅಂಧಭಕ್ತಿ, ಅಂಧವಿಶ್ವಾಸವನ್ನು ನಾವು ತ್ಯಜಿಸಬೇಕು; ಪ್ರತಿಯೊಂದನ್ನು ವಿವೇಕ-ವಿಚಾರಶಕ್ತಿಯ ಒರೆಗಲ್ಲಿಗೆ ಹಚ್ಚಿದ ಮೇಲೆ ಸತ್ಯವೆಂದು ಪ್ರತೀತವಾದುದನ್ನು ಪೌರ್ವಾತ್ಯ—ಪಾಶ್ಚಾತ್ಯ, ಹಳತು—ಹೊಸತು, ನಮ್ಮದು ಅವರದು ಎಂಬ ಯಾವದೇ ತರಹದ ದ್ವಂದ್ವ ಭಾವನೆಯನ್ನಿಟ್ಟುಕೊಳ್ಳದೆ ಸ್ವೀಕರಿಸುವ ವಿಮರ್ಶಕಬುದ್ಧಿ (critical spirit) ಉದಾರಬುದ್ಧಿ (liberal spirit)ಯನ್ನು ಸಂಪಾದಿಸಬೇಕು. ಆ ಬುದ್ಧಿ ಇರುವವರು ಮಾತ್ರ ನಿಜವಾದ ಸುಧಾರಕರೂ, ಸಮಾಜಧರ್ಮೋದ್ಧಾರಕರೂ ಆಗುವರು. ಅಂಥವರಿಂದಲೇ ಲೋಕ ಕಲ್ಯಾಣವಾಗುವದು.

ಈ ಲೇಖವನ್ನು ಬರೆಯಲಿಕ್ಕೆ ಮಹರ್ಷಿ ಅರವಿಂದ ಘೋಷರ 'ಶ್ರೀ ಭಗವದ್ಗೀತಾ ಭೂಮಿಕೆ' ಯಿಂದ ಬೇಕಾದ ಸಹಾಯವನ್ನು ತೆಗೆದುಕೊಂಡಿದೆ—ಲೇಖಕ.

ಕಾಮತ್‌ರವರ ದಿವ್ಯ ಸಿದ್ಧೌಷಧ!

ಉನ್ಮಾದ ಸಂಜೀವನ!!

ಉಗ್ರವಾಗಿರುವ ಹುಚ್ಚು; ಮೌನವಾಗಿರುವ ಹುಚ್ಚು; ದೀರ್ಘ ಕಾಲದ ಹುಚ್ಚು; ಅಲ್ಪ ಕಾಲದ ಹುಚ್ಚು ನಿದ್ರಾ ನಾಶ, ಮನೋವಿಕಾರ, ಅಪಸ್ಮಾರ, ಹೆಂಗಸರಿಗುಂಟಾಗುವ ಸೂತಿಕಾವಾಯು, ಹಿಸ್ಟೇರಿಯಾ—ಎಂತಹ ಹುಚ್ಚು, ಬುದ್ಧಿಭ್ರಮಣೆಗಳಿಗೂ ಅವಶ್ಯ ಉಪಯೋಗಿಸಿ.

ಇದರಲ್ಲಿ ಅಮಲುಪದಾರ್ಥಗಳಿಲ್ಲ; ಶುದ್ಧ ವನಸ್ಪತಿಗಳಿಂದ್ಲೇ ತಯಾರಿ.

60 ಮಾತ್ರೆಗಳ ಬಾಟಲಿಯೊಂದಕ್ಕೆ ಬೆಲೆ ರೂ. 3/- ಮಾತ್ರ.

ವಿ. ಪಿ. ಚಾರ್ಜು ಪ್ರತ್ಯೇಕ.

ವಿಳಾಸ:—ಸಿ. ವೈಕುಂಠ ಕಾಮತ್,
'ಇನ್‌ಸೇನಿಟಿ ಎಕ್ಸ್‌ಪರ್ಟ್',
ಪೋಸ್ಟ್, ಉಡುಪಿ, ದ. ಕನ್ನಡ.

ಅಪೂರ್ವ ಗ್ರಂಥಗಳು.

ಪುರಂದರ ದಾಸರ ಕೀರ್ತನೆಗಳು 5 ಭಾಗಗಳು ಪೂರ್ತಿ 3—7—0. ಋಗ್ವೇದ ಅಥವಾ ಯಜುರ್ವೇದ ವೈಷ್ಣವ ಅಹ್ನಿಕ ಮಂಜರಿ ಕರ್ತಾ ನಾರು ಬೈಂಡು 2—8—0. ಪಂಚದಶೀ ತತ್ವಾರ್ಥ (ಚಿದಂಬರಯ್ಯ) 2—0—0. ಭಗವದ್ಗೀತಾ ಸಾರ ವಿಚಾರ (ಚಿದಂಬರಯ್ಯ) 1—8—0. ಶ್ರೀವೇದಾಂತ ಪಂಚದಶೀ 5—0—0. ನವನಾಥ ಭಕ್ತಿಸಾರ 2—8—0.

ಟಪಾಲು ಖರ್ಚು ಪ್ರತ್ಯೇಕ.

ಅಡ್ವಾನ್ಸಿಲ್ಲದ ಆರ್ಡರ್‌ಗಳಿಗೆ ಗಮನ ಕೊಡಲಾಗುವುದಿಲ್ಲ.

ಸಂಪೂರ್ಣ ಕನ್ನಡ ಕೆಟಲಾಗು ಅಪೇಕ್ಷಿಸುವವರಿಗೆ ಮುಫತ್ತಾಗಿ ರವಾನಿಸಲಾಗುವುದು.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕ ವ್ಯಾಪಾರಿಗಳು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

Weldon & Co.,

KARANJE (SADANAND) BUILDINGS, HAMPANKATTA,

MANGALORE

Beg to announce to their numerous customers, and well-wishers that they have taken over as a going concern

THE

South Kanara Milk Supply Society, Mangalore

and pure and fresh milk, curds, butter and ghee will be available at all times at most favourable prices.

A TRIAL WILL CONVINCE YOU.

The Premier Bank of India, Ltd.,

ದಿ ಪ್ರೀಮಿಯರ್ ಬೇಂಕ್ ಒಫ್ ಇಂಡಿಯಾ, ಲಿಮಿಟೆಡ್,

ಹೆಡ್ ಆಫೀಸ್—ಮದ್ರಾಸ್.

ಚಾಲ್ತಿ ಲೆಕ್ಕಾಚಾರ, ಸೇವಿಂಗ್ಸ್ ಬ್ಯಾಂಕ್ ಮತ್ತೂ ಫ್ಯಾವಿಡೆಂಟ್ ಠೇವಣಾತಿ ಲೆಕ್ಕಾಚಾರಗಳನ್ನು ತೆರೆಯಲಾಗುತ್ತದೆ. ಒಂದು ವರ್ಷ ಹಾಗೂ ಎರಡು ವರ್ಷಗಳ ಕಾಲಾವಧಿಯ ನಿರಖು ಠೇವಣಾತಿಗಳನ್ನು ಅನುಕೂಲವಾದ ಬಡ್ಡಿ ದರಗಳೊಡನೆ ಸ್ವೀಕರಿಸಲಾಗುತ್ತದೆ. ಸಾಲಗಳನ್ನು ಯೋಗ್ಯವಾದ ಭದ್ರತೆಗಳ ಮೇಲೆ ಕೊಡಲಾಗುವುದಲ್ಲದೆ, ಎಲ್ಲ ಬಗೆಯ ಬ್ಯಾಂಕಿಂಗ್ ವ್ಯವಹಾರಗಳನ್ನೂ ಕೈಕೊಳ್ಳಲಾಗುತ್ತಿವೆ. ಹೆಚ್ಚಿನ ವಿವರಗಳ ಬಗ್ಗೆ ಹೆಡ್ ಆಫೀಸಿಗೆ ಬರೆದು ಕೇಳಿ.

S. V. RAO, D. Com.,
Managing Director.

ಅತ್ಯುತ್ಕೃಷ್ಟ ತರಗತಿಯ

ಹೊಮಿಯೊಪತಿಕ್ ಮತ್ತು ಬಾಯೊಕೆಮಿಕ್

ಔಷಧಗಳಿಗಾಗಿ

ಇವರಿಗೆ ಬರೆಯಿರಿ—

INDIAN HOMOEOPATHIC STORES,

10/11 Upper Circular Road, :: CALCUTTA.

ಕೆಟಿಲಾಗು ಇತ್ಯಾದಿ ಅಪೇಕ್ಷಿಸಿದಲ್ಲಿ ಕಳುಹಲಾಗುವದು.

8, 19—6.

ಶುದ್ಧ ರಕ್ತವು ಸಂಪೂರ್ಣ ಆರೋಗ್ಯವನ್ನೂ ದೇಹವ್ಯಾಪಾರವು ಯೋಗ್ಯವಾಗಿದೆ ಎಂಬುದನ್ನೂ ದೃಢಪಡಿಸುತ್ತದೆ.

NIMBIN

ಕಬ್ಬಿಣ, ಟಾನಿಕುಗಳು ಮತ್ತೂ ಜೀರ್ಣಕಾರಿ ಪದಾರ್ಥಗಳೊಡನೆ ಕೂಡಿರುವ ಬೇವಿನ ಆಪ್ತಿಕೀಯವಾದ ಸಿದ್ಧೌಷಧ. ನಿಂಬಿನ್ ರೋಗದ ಮೂಲದ ವರೆಗೂ ಹೋಗಿ, ನಿಮ್ಮನ್ನು ಸಶಕ್ತರನ್ನಾಗಿಯೂ, ಉತ್ಸಾಹಿಗಳನ್ನಾಗಿಯೂ ಇರಿಸುತ್ತದೆ. ನಿಂಬಿನ್ ಎಲ್ಲ ಅಶುದ್ಧತೆಗಳನ್ನೂ ನಿರ್ಮೂಲಿಸಿ, ದೇಹವ್ಯಾಪಾರವು ಕ್ರಮವಾಗಿಯೂ, ಸಮತೂಕವಾಗಿಯೂ ಇರುವಹಾಗೆ ಮಾಡುತ್ತದೆ.

ದೀರ್ಘಜೀವನಕ್ಕೆ, ಯಾವ ರೋಗವು ಇಲ್ಲದ ಶರೀರ ಸ್ಥಿತಿಗೆ, ಸಂಪೂರ್ಣ ಆರೋಗ್ಯಕ್ಕೆ, ದೇಹವ್ಯಾಪಾರದ ಯೋಗ್ಯ ಕೆಲಸಕಾರ್ಯಗಳಿಗೆ ಬೇವಿಗೆ ಸರಿಯಾದುದು ಇನ್ನೊಂದಿಲ್ಲ.

ರಕ್ತದ ಕೊರತೆ.

ರಕ್ತದ ಅಶುದ್ಧತೆ ಮತ್ತೂ ಶರೀರದ ಸಾಮಾನ್ಯ ನಿಶ್ರಾಣ. ಎಲ್ಲ ಸಂದರ್ಭಗಳಲ್ಲಿಯೂ, ಡಾಕ್ಟರರು ವಿವೇಕ ಬುದ್ಧಿಯಿಂದ ಶಿಫಾರಸು ಮಾಡುವುದು ಇದನ್ನೇ. ಬೆಲೆ ಬಾಟಲಿ 1ಕ್ಕೆ ರೂ. 1—10—0

ಪ್ಯಾಕಿಂಗ್ ಮತ್ತು ಪೋಸ್ಟೇಜ್ ಪ್ರತ್ಯೇಕ.

SOLE DISTRIBUTORS:

VARIETY TRADING CORPORATION, 257, Chickpet, Bangalore City.

Stockists: APPAH & CO., China Bazaar Road, Madras.

ವಿಶ್ವವಿಚಾರ

(ವಿಮಾನಪತ್ರ)

ಲೀಗ್ ಒಫ್ ನೇಶನ್ಸಿನ ಪರ್ವತಪ್ರಸವ:-ಲೀಗ್ ಒಫ್ ನೇಶನ್ಸಿನ ಎಸೆಂಬ್ಲಿಯಲ್ಲಿ ಸ್ವತಃ ಅಬಿಸ್ಸೀನಿಯದ ಚಕ್ರವರ್ತಿಯು ತನ್ನ ಪರಿಸ್ಥಿತಿಯನ್ನು ಕುರಿತು ಗಂಭೀರವಾದ ಮತ್ತು ತೀಕ್ಷ್ಣವಾದ ನುಡಿಗಳಿಂದ ಇಟೆಲಿಯ ದುಷ್ಟ ವರ್ತನೆಯನ್ನು ವಿವರಿಸುವಾಗ ೯ರಿಂದ ೧೮ರ ವರೆಗಿನ ಸಂಖ್ಯೆಯಲ್ಲಿ ವಿಮಾನಗಳು ಜತೆಕೂಡಿ ಊರುಗಳ ಮೇಲೆ ಬೊಂಬುಗಳ ಮೂಲಕ ವಿಷದ ವಾಯುವನ್ನು ಪ್ರಯೋಗಿಸಿ, ಸೈನಿಕರೊಂದಿಗೆ ಜನಜಾನುವಾರುಗಳನ್ನೂ ಹುಲ್ಲುಗಾವಲುಗಳನ್ನೂ ಕುಡಿಯುವ ನೀರನ್ನೂ ಹಾಳು ಮಾಡಿದ ಆಸುರೀ ವರ್ತನೆಯನ್ನು ಖಂಡಿಸಿ, ಈ ವಿಷಯವನ್ನು ಲೀಗ್ ಒಫ್ ನೇಶನ್ಸ್ ಮುಂದಿಡುವುದಕ್ಕೆ ತಾನ್ನೆಲ್ಲಬಂದಿರುವುದಾಗಿ ತಿಳಿಸಿದನು. ಇದಲ್ಲದೆ ಎತಿಯೋಪಿಯದ ಬೇರೆ ಬೇರೆ ಚಿಕ್ಕ ಪ್ರದೇಶಗಳ ಅರಸುಗಳನ್ನು ಒಂದುಗೂಡಿಸಿ, ಒಂದೇ ರಾಜ್ಯವಾಗಿ ಮಾಡುವ ತನ್ನ ಪ್ರಯತ್ನದಲ್ಲಿ ಇಟೆಲಿಯವರು ಕುಹಕ ನಡಿಸಿ, ಈಗ ೧೪ ವರ್ಷಗಳಿಂದಲೂ ಯುದ್ಧದ ತಯಾರಿ ನಡಿಸುತ್ತ ಇದ್ದು, ಈ ರೀತಿಯಾಗಿ ಎತಿಯೋಪಿಯದ ಮೇಲೆ ಬೀಳುವಾಗ ಯುರೋಪಿನ ಒಂದು ರಾಜ್ಯವು ಇಟೆಲಿಯೊಡನೆ ಗುಟ್ಟಿನಿಂದ ಒಪ್ಪಂದ ಮಾಡಿದ ಕಾರಣ, ಯುರೋಪಿನ ರಾಜಕಾರಣವೇ ಬದಲಾಯಿಸಿ ಹೋಯಿತೆಂದು ಹೇಳಿದನು. ಕಳೆದ ೧೯೩೫ನೆ ಒಕ್ಟೋಬರ ತಿಂಗಳಲ್ಲಿ ೫೨ ರಾಜ್ಯಗಳು ಏಕಕಂಠದಿಂದ ಇಟಲಿಯ ದುರಾಗ್ರಹಕ್ಕೆ ತಾವು ಬೆಂಬಲವಾಗಿರಲಾರೆವು ಎಂದು ಹೇಳಿ ಈಗ ಕಾಲು ಹಿಂತೆಗೆಯುವುದು ಅಪಮಾನಾಸ್ಪದವೆಂದು ಒತ್ತಿಹೇಳಿದನು. ಇದಲ್ಲದೆ ಇಟಲಿಗೆ ಯುದ್ಧದ ಸರಂಜಾಮುವು ಧಾರಾಳವಾಗಿ ಸಿಗುತ್ತಿರುವ ಕಾಲದಲ್ಲಿ ತನಗೆ ಸಿಗದಂತೆ ನಿರ್ಬಂಧ ಹಾಕಿದ್ದಲ್ಲದೆ ಶರ್ತಗಳ ಮೇರೆಗೆ ಈ ೫೨ ರಾಜ್ಯಗಳು ಯಾವ ರೀತಿಯಿಂದ ಸಹಾನುಭೂತಿಯನ್ನು ತೋರಿಸಿದವು ಎಂದು ಪ್ರಶ್ನಿಸಿದನು. ಅದಕ್ಕೆ ಬದಲಾಗಿ ಕೆಲವು ರಾಜ್ಯಗಳು ಪ್ರತಿಬಂಧಕ ಧರಾವುಗಳ ಜಾರಿಯನ್ನು ಅರೆಮನಸ್ಸಿನಿಂದ ಮಾಡಿದವು, ಕೆಲವು ರಾಜ್ಯಗಳು ಅವನ್ನು ಜಾರಿಗೆ ತರಲೇ ಇಲ್ಲ, ಇನ್ನು ಕೆಲವು ರಾಜ್ಯಗಳು ದೊಡ್ಡ ದೊಡ್ಡ ಮಾತುಗಳ ಕಂಥೆಯನ್ನು ಬಿಚ್ಚಿ 'ಕಿವಿ ಕುಶಾಲು' ಮಾಡಿದರು, ತನ್ನ ಸ್ವಾರ್ಥವನ್ನು ತಾನು ಕಾಪಾಡುವುದಾದರೆ ಇಟಲಿಯೊಡನೆ ಒಪ್ಪಂದ ಈ ಮೊದಲೆ ಮಾಡಬಹುದಿತ್ತು, ಹಾಗೆ ಮಾಡದೆ ತಾನು ಸಣ್ಣ ರಾಜ್ಯಗಳ ಸ್ವಾತಂತ್ರ್ಯರಕ್ಷಣೆಯ ಉದ್ದೇಶದಿಂದಲೇ ಇಟಲಿಯನ್ನು ಎದುರಿಸಿದೆನು, ಫ್ರೆಂಚರ ಜಿಬೂಟಿ ರೈಲ್ವೆಯನ್ನು ನನಗೆ ಉಪಯೋಗಿಸಲು ಬಿಡದಿದ್ದರೂ ಇಟಲಿಯು ಉಪಯೋಗಿಸುತ್ತಿದೆ ಎಂದಿತ್ಯಾದಿಯಾಗಿ ಹೃದಯ ಭೇದಕವಾದ ಮಾತುಗಳನ್ನು ನುಡಿದನು, ಆದರೆ ಪೊಸಳೆಯ ಕಣ್ಣೀರಂತೆ ಕಣ್ಣೀರು ಸುರಿಸುವುದಕ್ಕೂ ರಾಜ್ಯಗಳು ತಯಾರಾಗಿದ್ದಿಲ್ಲ, ಆ ನೀರಿನ ಊಟೆಯೇ ಬತ್ತಿ ಹೋಗಿತ್ತು. ಚರ್ಚೆ ಬಹಳ ನಡೆದು ಕೊನೆಗೆ ಪರ್ವತಪ್ರಸವವೇ ಆಯಿತು. ಅಬಿಸ್ಸೀನಿಯದ ಬಗ್ಗೆ ಯುರೋಪಿನಲ್ಲಿ ಯುದ್ಧದ ಕಿಚ್ಚನ್ನು ಹಚ್ಚಲಿಕ್ಕೆ ಯುರೋಪಿನ ರಾಜ್ಯಗಳು ಸಿದ್ಧರಾಗಿರಲಿಲ್ಲ. ಹೀಗಾಗಿ ಪ್ರಸವವೇದನೆಯಿಂದ ಲೀಗ್ ಒಫ್ ನೇಶನ್ಸ್ ಪ್ರಾಣಾಂತಿಕ ಸಂಕಟದಲ್ಲಿದೆ. 'ಇಂದೊ ನಾಳೆಯೊ' ಎಂಬ ಸ್ಥಿತಿಯಲ್ಲಿದೆ.

ಚಕ್ರವರ್ತಿಯು ಕೇಳಿದ ಹತ್ತು ಮಿಲ್ಲಿಯ ಪೌಂಡು ಸಾಲವನ್ನು ಕೊಡುವುದಕ್ಕಾಗಲಿ, ಇಟಲಿಯು ತನ್ನ ಪಾದವನ್ನು ಅಬಿಸ್ಸೀನಿಯದ ಕೊರಳಿನ ಮೇಲೆ ಇಟ್ಟದ್ದು ತಮಗೆ ಸಮ್ಮತವಿಲ್ಲ ಎಂದು ಹೇಳುವುದಕ್ಕಾಗಲಿ ಲೀಗ್ ಒಫ್ ನೇಶನ್ಸ್ ತಯಾರಾಗಿದ್ದಿಲ್ಲ.

ಆಫ್ರಿಕದ ವಿಭಜನೆ:—ಇಟಲಿಯು ಅಬಿಸ್ಸೀನಿಯವನ್ನು ನುಂಗಿದ್ದಾಗ ಪ್ರಕಟಿಸಿದಾಗ ಈಗ್ಗೆ ೪ ಶತಮಾನಗಳಿಂದಲೂ ಆಫ್ರಿಕದ ವಿಭಜನೆಯ ಹಂಚಿಕೆಗೆ ಪಾಶ್ಚಾತ್ಯ ಜನಾಂಗಗಳು ಮಾಡುತಿದ್ದ ಏರ್ಪಾಡು ಸಾರ್ಥಕವಾಯಿತು. ಅಂದರೆ ೧೨ ಮಿಲ್ಲಿಯ ಚದರ ಮೈಲು ವಿಸ್ತೀರ್ಣದ ಪ್ರದೇಶ ಮತ್ತು ೧೫೦ ಮಿಲ್ಲಿಯ ಜನಸಂಖ್ಯೆಯು ಬೇರೆ ಬೇರೆ ಪಾಶ್ಚಾತ್ಯ ರಾಜ್ಯಗಳೊಳಗೆ ಹರಿಹಂಚಾಗಿಹೋಯಿತು. ಅಟ್ಲಾಂಟಿಕದ ಕರಾವಳಿಯಲ್ಲಿರುವ ಚಿಕ್ಕ ನಿಗ್ರೊರಾಜ್ಯ ಹೊರತು ಉಳಿದುವೆಲ್ಲ ಬಿಳೀ ಜನಾಂಗಗಳ ಅಧೀನವಾದುವು. ಇಡೀ ಆಫ್ರಿಕ ಖಂಡದಲ್ಲಿ ೨/೩ನೆ ಅಂಶವು ಬ್ರಿಟಿಷ ಮತ್ತು ಫ್ರೆಂಚರ ವಶದಲ್ಲಿದೆ. ಇಟಲಿ, ಬೆಲ್ಜಿಯಮ್, ಪೋರ್ತುಗಲ್ ಮತ್ತು ಸ್ಪೇನ್ ಇವುಗಳು ಉಳಿದ ಭಾಗವನ್ನು ಹಂಚಿಕೊಂಡಿದ್ದಾವೆ. ಇಡೀ ಖಂಡದ ಕಾಲಂಶವು ಮರುಭೂಮಿ. ಉತ್ತರದಲ್ಲಿ ಸಹಾರಾ ೪॥ ಮಿಲ್ಲಿಯ ಚದರ ಮೈಲು—ಅಂದರೆ ಸಾಧಾರಣ ಯುರೋಪ ಖಂಡದಷ್ಟೆ ವಿಸ್ತೀರ್ಣವಾಗಿದೆ. ದಕ್ಷಿಣದಲ್ಲಿ ಕಲಾಹಾರಿ ಎಂಬ ಮರುಭೂಮಿ ಇದೆ. ಬ್ರಿಟಿಷರ ವಶದಲ್ಲಿರುವ ಭಾಗದಲ್ಲಿಯೇ ಉತ್ಪನ್ನವೂ ಜನಸಂಖ್ಯೆಯೂ ಹೆಚ್ಚು. ಆದರೆ ಫ್ರೆಂಚರ ಸ್ವಾಸ್ಥ್ಯದ ವಿಸ್ತೀರ್ಣ ಹೆಚ್ಚು ಸುಮಾರು ೪॥ ಮಿಲ್ಲಿಯ ಚ. ಮೈಲು. ಪೂರ್ವದಲ್ಲಿ ಮಡಗಾಸ್ಕರ ದ್ವೀಪ, ಉತ್ತರದಲ್ಲಿ ಭೂಮಧ್ಯಸಮುದ್ರದ ದಂಡೆಯಲ್ಲಿ ಮೊರೊಕೊ, ಆಲ್ಜೀರ್ಸ್, ಟ್ಯೂನಿಸ, ಇವು ಫ್ರೆಂಚರ ಪ್ರದೇಶಗಳು. ಎರಿಟ್ರಿಯಾ ಸೊಮಾಲಿಲೆಂಡ್, ಲಿಬಿಯಾ, ಎತಿಯೊಪಿಯಾ ಕೂಡಿ ಸುಮಾರು $1\frac{1}{4}$ ಮಿಲ್ಲಿಯ ಚ. ಮೈಲು ಜನಸಂಖ್ಯೆ ಸುಮಾರು ೧೫॥ ಮಿಲ್ಲಿಯ. ಬೆಲ್ಜಿಯಮಿಗೆ ಕೊಂಗೊ ಪ್ರದೇಶ, ಪೊರ್ತುಗಲ್ಲಿಗೆ ಎಂಗೊಲಾ (ಪಶ್ಚಿಮದಲ್ಲಿ), ರುಹಾಂಬಿಕ (ಪೂರ್ವದಲ್ಲಿ) ಒಟ್ಟಿಗೆ ಸುಮಾರು ೮ ಲಕ್ಷ ಚ. ಮೈಲು, ಜನಸಂಖ್ಯೆ ೭ ಮಿಲ್ಲಿಯಕ್ಕಿಂತ ಸ್ವಲ್ಪ ಹೆಚ್ಚು. ಸ್ಪೇನಿಗೆ ಆಫ್ರಿಕದ ಉತ್ತರದಲ್ಲಿ ಮೊರೊಕೊ, ೧,೪೦,೦೦೦ ಚ. ಮೈಲು, ೯ ಲಕ್ಷ ಜನಸಂಖ್ಯೆ. ಈ ಪ್ರಜೆಗಳೆಲ್ಲ ವಿಶೇಷವಾಗಿ ಕರಿಜನರು.

ಸಾಯ್ರಿಯಾ:—ಇಲ್ಲಿ ಜನರಲ್ಲಿ ಅಸಮಾಧಾನವಿದ್ದುದರಿಂದ ಈ ಪ್ರದೇಶಕ್ಕೆ ಸ್ವಾತಂತ್ರ್ಯ ಕೊಟ್ಟು ಇದನ್ನು ಪ್ರತ್ಯೇಕ ಪ್ರಜಾಪ್ರಭುತ್ವವಾಗಿ ಮಾಡಿ ಲೀಗ್ ಒಫ್ ನೇಶನ್ಸಿನ ಮೆಂಬರನಾಗಿ ಮಾಡಬೇಕೆಂದು ಈಗಿನ ಫ್ರೆಂಚ ಮಂತ್ರಿಕೂಟದ ಅಭಿಪ್ರಾಯ. ಇದು ಮಹಾಯುದ್ಧದ ನಂತರ ತುರ್ಕಿಯಿಂದ ಪ್ರತ್ಯೇಕಿಸಲ್ಪಟ್ಟು ಫ್ರೆಂಚರ ಆಶ್ರಿತರಾಜ್ಯವಾಗಿತ್ತು.

ಪೆಲೆಸ್ತೀನ್:—ಇದರಲ್ಲಿ ಗಲಾಟೆ ಎಬ್ಬಿಸುತ್ತಿರುವ ಅರಬ್ಬಿಯರಿಗೆ ಇರಾಖ್ ಪ್ರದೇಶದ ಅರಬ್ಬಿಯರು ಯುದ್ಧಸರಂಜಾಮನ್ನು ಗುಟ್ಟಿನಿಂದ ಒದಗಿಸಿ ಸಹಾಯಮಾಡುತಿದ್ದಾರಂತೆ.

ಶ್ರೀ. ಜಿ. ಎನ್. ಲಕ್ಷ್ಮಣ ಪೈಗಳವರಿಂದ ರಚಿತವಾದ ಪುಸ್ತಕಗಳು.

೧. **ಸಚಿತ್ರ ಅಭಿನಯಗೀತಾವಳಿ**—ಮದರಾಸು, ಮುಂಬಯಿ, ಮೈಸೂರು ಟಿಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾಗಿರುವುದಲ್ಲದೆ ದಕ್ಷಿಣ ಕನ್ನಡ ಜಿಲ್ಲಾ ಎಡ್ಯುಕೇಶನಲ್ ಕಾನ್ಫರೆನ್ಸವರಿಂದ ತಯಾರಿತವಾದ ಪಾಠಪಟ್ಟಿಯಲ್ಲಿ ೧, ೨, ೩ನೆ ದರ್ಜೆಗಳ ಪದ್ಯಪಾಠಕ್ಕೆ ನಿಯಮಿತವಾಗಿದೆ.
ಕ್ರಯ ೩ ಆಣೆ.

೨. **ಸಚಿತ್ರ ಪದ್ಯರತ್ನಾವಳಿ** (ಪ್ರಥಮ ಭಾಗ)—ಮದರಾಸು, ಮುಂಬಯಿ, ಮೈಸೂರು ಟಿಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾಗಿರುವುದಲ್ಲದೆ ದಕ್ಷಿಣ ಕನ್ನಡ ಜಿಲ್ಲಾ ಎಡ್ಯುಕೇಶನಲ್ ಕಾನ್ಫರೆನ್ಸವರಿಂದ ತಯಾರಿತವಾದ ಪಾಠಪಟ್ಟಿಯಲ್ಲಿ ೪, ೫ನೆ ದರ್ಜೆಗಳ ಪದ್ಯಪಾಠಕ್ಕೆ ನಿಯಮಿತವಾಗಿದೆ.
ಕ್ರಯ ೩ ಆಣೆ.

೩. **ಕೀರ್ತನಾಂಜಲಿ** (ಪ್ರಥಮ ಭಾಗ)—ಮುರಾಟಿ, ದಕ್ಷಿಣಾದಿ ಚಾಲುಗಳಿಂದ ಕೂಡಿದ ಭಜನಾಗೀತಗಳನ್ನುಳ್ಳ ಈ ಪುಸ್ತಕವು ಮಕ್ಕಳ 'ಪ್ರಾರ್ಥನೆ'ಯ ಪಾಠಕ್ಕೆ ಯೋಗ್ಯವಾಗಿದೆ.
ಕ್ರಯ ೨ ಆಣೆ ೬ ಪೈ.

೪. **ಯದ್ವಾತದ್ವ**—ಒಂದು ಲಘುಕಥಾ ಪದ್ಯ. ಕ್ರಯ ೧೦ ಆಣೆ.

೫. **ಕರ್ಣಾಟಕ ಸಂಗೀತ ಭಕ್ತವರೇಣ್ಯ ದಾನಾಜಿಪಂತ ನಾಟಕ.**
(ಆಚ್ಚಿನಲ್ಲಿದೆ.)

ಹರಿಹರ ಪುಸ್ತಕಾಲಯ, ಪುತ್ತೂರು.
☞ ಎಲ್ಲಾ ಪ್ರಸಿದ್ಧ ಪುಸ್ತಕವ್ಯಾಪಾರಿಗಳಲ್ಲಿ ಪುಸ್ತಕದ ಪ್ರತಿಗಳು ಸಿಗುವವು.

ಹೊಟ್ಟೆ ಮತ್ತು ಪಿತ್ತಕೋಶಗಳ ಎಲ್ಲ ಬಗೆಯ ಬೇನೆಗಳಿಗೂ ಅಲೆಂಬಿಕ್ ಫ್ರೂಟ್ ಲ್ಯಾಕ್ಸೆಟಿವ್ ಸೇವಿಸಿ.

ಫ್ರೂಟ್ ಲಾಕ್ಸೆಟಿವ್

ಪ್ರತಿದಿನವೂ ಉಪಯೋಗಿಸಿ

ಅಲೆಂಬಿಕ್ ಕೆಮಿಕಲ್ ವರ್ಕ್ಸ್, ಲಿಮಿಟೆಡ್.
ಮುಂಬಯಿ ಬರೋಡಾ ಮದರಾಸು

೧೯೩೫ನೇ ಇಸ್ವಿಯಲ್ಲಿ ವಿಮಾ ಉದ್ಯಮವನ್ನು ಪ್ರಾರಂಭಿಸಿ ವರ್ಷ ವರ್ಷಕ್ಕೆ ಅಭಿವೃದ್ಧಿಯನ್ನು ತೋರಿಸುತ್ತಾ ಈಗ ಜೀವವಿಮೆಯನ್ನೂ ಕೈಕೊಂಡು ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದ

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಧಾರವಾಡ.

ಕರ್ನಾಟಕದ ಮುಂದಾಳುಗಳಾದ ದೇಶಭಕ್ತ
ಶ್ರೀಯುತ ಎಸ್. ಕೆ. ಹೊಸಮನಿ, ಬಿ. ಎ., ಎಲ್.ಎಲ್. ಬಿ., ಎಂ. ಎಲ್. ಎ.,
ಮತ್ತು ಚೆಯರ್ಮ್ಯಾನ್
ಶ್ರೀಯುತ ವಿ. ವಿ. ಹಾಲಭಾವಿ, ಬಿ. ಎ., ಎಲ್.ಎಲ್. ಬಿ.,
ರಿಟಾಯರ್ಡ್ ಫಸ್ಟ್ ಕ್ಲಾಸ್ ಸಬ್ ಜಡ್ಜ್, ಧಾರವಾಡ
ಇವರ ನೇತೃತ್ವದ ಕೆಳಗೆ ನಡೆದಿರುವ ಮತ್ತು ಕರ್ನಾಟಕದ ವ್ಯಾಪಾರ ಉದ್ಯೋಗಗಳನ್ನು ಬೆಳಿಸಲಿಚ್ಛಿಸುವ ಸ್ವದೇಶೀ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ.

ಧಾರವಾಡ, ಬೆಳಗಾಂವ, ಬಿಜಾಪುರ, ಕಾರವಾರ, ಬಳ್ಳಾರಿ, ರಾಯಚೂರ ಮತ್ತು ಮೈಸೂರ ಸ್ಟೇಟಿನಲ್ಲಿಯೂ, ಅಭಿಮಾನದಿಂದ ಕೆಲಸ ಮಾಡುವ ಕುಶಲ ಏಜಂಟರು ಬೇಕಾಗಿದ್ದಾರೆ.

ವಿಶೇಷ ಮಾಹಿತಿಯನ್ನು ಸಮಕ್ಷವು ಇಲ್ಲವೇ ಪತ್ರದ್ವಾರದಿಂದ ತಿಳಿಕೊಳ್ಳಬೇಕು.

The Manager,
The Swaraj Banking & Insurance Co., Ltd., Dharwar.

ದೇಶಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕಾದ ದೇಶೀಯ ಕೈಗಾರಿಕೆ.

ದಿ ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್, ಮದರಾಸು.

ಇವರ ಉತ್ಕೃಷ್ಟ, ನಾಜೂಕಾದ ಹಾಗೂ ಬಹಳ ಬಾಳಿಕೆಯ ತ್ರಿಲೋಕ (ನಾರದ) ಮಾರ್ಕಿನ ಸ್ಟೀಲ್ ಟ್ರಂಕುಗಳು ಮತ್ತು ಸೂಟ್‌ಕೇಸುಗಳು.



ಈ ಕಾರ್ಖಾನೆಯಲ್ಲಿ ತಯಾರಾಗುವ ಪ್ರತಿ ಒಂದು ಸಾಮಾನು ಬಹುವರ್ಷಗಳಲ್ಲಿ ತರಬೇತು ಹೊಂದಿದ ಕೆಲಸಗಾರರಿಂದಲೇ ತಯಾರಾಗುತ್ತಿವೆ. ಅದುದರಿಂದಲೇ ಇಲ್ಲಿನ ವಸ್ತುಗಳು ಅಂದಚಂದದಲ್ಲೂ ಬಂದೋಬಸ್ತಿನಲ್ಲೂ ಕುಂದಿಲ್ಲವೆಂಬುದು ನಿಸ್ಸಂದೇಹ. ಇಲ್ಲಿ ಬಗೆಬಗೆ ಆಳತೆಯ ಟ್ರಂಕುಗಳು, ಸೂಟ್‌ಕೇಸುಗಳು, ಹಣದ ಪೆಟ್ಟಿಗೆಗಳು, ಆಭರಣಗಳನ್ನಿರಿಸುವ ಕೈಪೆಟ್ಟಿಗೆಗಳು, ಟೇಬಲಿಗೆ ಫಿಕ್ಸ್ ಮಾಡುವ ಕ್ಯಾಷ್‌ಬೋಕ್ಸ್‌ಗಳು ಮುಂತಾದುವು ಸರ್ವಕಾಲವೂ ವಿಕ್ರಯಕ್ಕೆ ಸಿದ್ಧವಿರುತ್ತವೆ.

ವ್ಯಾಪಾರಸ್ಥರಿಗೆ ಸುಸಂದರ್ಭ. ನಮ್ಮ 'ಸೊ'ರೂಮಿಗೆ ಒಮ್ಮೆ ಸಂದರ್ಶಿಸಿ ಅಥವಾ ಒಂದು ಸಣ್ಣ ಆರ್ಡರು ಕೊಟ್ಟು ಇದರ ನಿಜತ್ವವನ್ನು ಪರೀಕ್ಷಿಸಿರಿ. ನಿಮಗೆ ಖಚಿತವಾಗುವುದು.

ಹೆಚ್ಚಿನ ವಿವರಕ್ಕೆ ಮತ್ತು ಕ್ರಯದ ಪಟ್ಟಿಗೆ ಈ ವಿಳಾಸಕ್ಕೆ ಬರೆಯಿರಿ.

ದಿ ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್,
ಪ್ರೊಪ್ರೈಟರ್:—ಜಿ. ಟಿ. ಮಾಣಿಕ ನಾಯಗರ್.
ಹೆಡ್ ಆಫೀಸು:—22, ಬೇಕರ್ ಸ್ಟ್ರೀಟ್, ಜಿ. ಟಿ. ಮದ್ರಾಸು.
ಬ್ರಾಂಚ್ ಆಫೀಸು:—ರೈಲ್ವೇ ಗುಡ್ಸ್‌ಶೆಡ್ ಬಳಿ, ಮಂಗಳೂರು, ದ. ಕ.

ಜಾತಕಫಲ.

ಮುಂದಿನ 12½ ತಿಂಗಳುಗಳ ಜಾತಕಫಲ ಇಂಗ್ಲೀಷಿನಲ್ಲಿ—ಕೊಚ್ಚಿಯ ದಿವಂಗತ ಮಹಾರಾಜರಿಂದ **ಪ್ರೊಫೆಸ್ಸರ್** ಎಂಬ ಬಿರುದನ್ನೂ ಭಂಗಾರದ ಪದಕವನ್ನೂ ಪಡೆದಿರುವ ಪ್ರಸಿದ್ಧ ಮಲೆಯಾಳಿ ಜ್ಯೋತಿಷ್ಯರಿಂದ—ರೂ. 2/-. ಸಂಪೂರ್ಣ ಜಾತಕಫಲ ರೂ. 10/-. ಭವಿಷ್ಯದ ಕುರಿತು 5 ಪ್ರಶ್ನೆಗಳಿಗೆ ರೂ. 1/-.

ಮಂತ್ರಗಳು.

ಜೀವನ, ಪ್ರಣಯ, ಪರೀಕ್ಷೆ, ವ್ಯಾಜ್ಯ, ನಂಬ್ರ ಇತ್ಯಾದಿಗಳಲ್ಲಿ ಜಯ, ಮತ್ತು ಅನಿಷ್ಟ ಗ್ರಹಗಳ, ಭೂತಪ್ರೇತಾದಿಗಳ ಬಾಧೆಯನ್ನು ನಿವಾರಿಸಲಿಕ್ಕಾಗಿ ಬೆಳ್ಳಿಯ ತಾಯಿತ ರೂ. 2—8—0; ಇನ್ನಷ್ಟು ಉತ್ತಮ ಪರಿಣಾಮಕಾರಿಯಾದುದು ರೂ. 5/- (ಹೆಚ್ಚಿನ ವಿವರಗಳಿಗೆ ಸ್ಟ್ಯಾಂಪಿಟ್ಟು ಬರೆಯಿರಿ.)

ಜನನದ ತಾರೀಕನ್ನೂ, ಸಮಯವನ್ನೂ ನಿರೀಕ್ಷಿಸಿರಿ. ಗೊತ್ತಿಲ್ಲದಿದ್ದರೆ, ಬರೆಯುವ ಸಮಯವನ್ನು ನಮೂದಿಸಿರಿ. ಪೋಸ್ಟೇಜ್ 6 ಆಣೆಗಳು ಪ್ರತ್ಯೇಕ.

Prof. KOCHUPARET, Z., Kottayam P. O., S. India.

ESTD: 1906.

CANARA BANK

LIMITED.

HEAD OFFICE: MANGALORE.

Subscribed Capital	....	....	6,00,000.
Paid up Capital	....	....	3,33,000.
Reserves	....	....	4,50,000.
Deposits	....	....	61,92,000.
Working Capital	....	....	73,40,000.

OFFICES

Bombay-Fort, Bombay-Mandvi, Hubli, Calicut Cochin, Ernakulam, Alleppey, Bangalore, Chikmagalur, Mangalore-Bunder, Mangalore-City, Kasaragod, Puttur, Udipi, Karkala, Coondapoor, Ganguli, Bantval, Davangere & Moolky.

ALL KINDS OF BANKING BUSINESS UNDERTAKEN.

ಕಂಠೀರವ

XVIII] ಮಂಗಳೂರು, ತಾರೀಕು ೧೦—೭—೧೯೩೬ [೩೦

೧೮೫೮ ಧಾತು ಸಂವತ್ಸರದ ಆಷಾಢ ಬ ೬ ಶುಕ್ರವಾರ.

(ವಸಂತತಿಲಕವೃತ್ತಮ್)

ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು ।
ಲಕ್ಷ್ಮೀಃಸಮಾವಿಶತು ಗಚ್ಛತು ವಾ ಯಥೇಷ್ಟಮ್ ॥
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ ।
ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥

[ಭರ್ತೃಹಂ.

(ಚೌಪದಿ)

ನಿಂದಿಸಲಿ ವಂದಿಸಲಿ, ಸಂದ ಧೀರರು ತಾ- ।
ವೆಂದಿರೆಯು ಹೊಂದಿರಲಿ ಸಂಪತ್ತಿರಲಿ, ಮತ್ತಾ ॥
ಇಂದಿಗೊ ಯುಗಾಂತರಕೊ ಬಂದಿರಲಿ ಮರಣಂ, ।
ಹಿಂದಿಡರು ನ್ಯಾಯಪಥದಿಂದೊಂದು ಚರಣಂ! ॥

[M. N

ಉಡುಪಿ ಮುನಿಸಿಪಾಲಿಟಿಯ ಚುನಾವಣೆ.

ಹಾಗೂ ಹೀಗೂ ಕೆಲ ಕಾಲದಿಂದ ನಿರೀಕ್ಷಿಸಲ್ಪಟ್ಟಿದ್ದ ಉಡುಪೀ ಮುನಿಸಿಪಾಲಿಟಿಯ ಚುನಾವಣೆಯು ಈಗಲೀಗ ಸವಿೂಪಿಸಿ ಬಂದಂತಾಯಿತು. ಚುನಾವಣೆಗೆ ಸಂಬಂಧಪಟ್ಟ ಕಾರ್ಯಾಂಗಗಳೂ, ತಾರೀಖುಗಳೂ ಈಗಲೀಗ ಪ್ರಕಟಿಸಲ್ಪಟ್ಟು, ಒಮ್ಮೆ ಉತ್ಸಾಹವು ಏರಿ, ತಣ್ಣಗಾಗಿ ಹೋದ ಚುನಾವಣೆಯ ಉಮೇದ್ವಾರರಲ್ಲಿ ಪುನಃ ಹೊಸ ಹುರುಪು ಹುಟ್ಟಲು ಅವಕಾಶವಾಯಿತು. ಈ ಸಲ, 'ಹುಲಿ ಬಂತು, ಹುಲಿ ಬಂತು' ಎಂಬ ಕೂಗಲ್ಲ; ಹುಲಿ ಬರುವುದು ನಿಜ; ಖಂಡಿತ!

ಉಡುಪಿ ಮುನಿಸಿಪಾಲಿಟಿಯು, ಇದುವರೆಗೆ, ಒಬ್ಬ ಸ್ಪೆಶಲ್ ಆಫೀಸರರ ಕಾರ್ಯಭಾರಗಳಿಗೆ ಒಳಪಟ್ಟಿದ್ದು, ಅದು, ಅವರ ಮೂಲಕ, ಈ ಚುನಾವಣೆಗೆ ಪೂರ್ವದಲ್ಲಿ ನಡೆಯಬೇಕಾದ ಎಲ್ಲ ಕಾರ್ಯಗಳನ್ನೂ ನೆರವೇರಿಸಿಕೊಂಡಿದೆ. ದೂರುಗಳೇನೋ, ಗಟ್ಟಿಯಾಗಿಯೂ ಮೆಲ್ಲಗೂ ಕೇಳಬರುತ್ತಿದ್ದುವಾದರೂ, ತಾಯಿ ಇಲ್ಲದ ಮಗುವಿನಂತೆ ಉಡುಪಿ ಮುನಿಸಿಪಾಲಿಟಿಯ ಕೆಲವು ರಸ್ತೆಗಳು, ಮುಖ್ಯವಾಗಿ ಕಲ್ಲುಸಂಕದಿಂದ ಸಾರಸ್ವತ ದೇವಸ್ಥಾನದ ವರೆಗಿನ ಭಾಗವು, ದುರಸ್ತಿ ಸಾಲದೆ, ಅನಾಥವಾಗಿದ್ದರೂ, ಆರಂಭದ ಕೆಲಸವು ಶ್ರಮಸಾಧ್ಯವೆಂಬುದನ್ನೂ, ಅದರಲ್ಲಿ ನಮ್ಮ ಸ್ಪೆಶಲ್ ಆಫೀಸರರು ಸಕಾರಣವಾಗಿಯೋ, ಅಕಾರಣವಾಗಿಯೋ ಕಷ್ಟನಿಷ್ಠುರಗಳಿಗೆ ಗುರಿಯಾಗಿದ್ದರೂ ಸಹಜವೆಂಬುದನ್ನೂ ನಾವಿಲ್ಲಿ ಪ್ರಸ್ತಾವಿಸದಿರಲಾಗುವುದಿಲ್ಲ.

ಈಗ ಚುನಾವಣೆಗೆ ಎಲ್ಲವೂ ಸಿದ್ಧವಾಗಿದೆ. ಒಬ್ಬರಿಗಿಂತ ಇಬ್ಬರು ಲೇಸೆಂದು ಇಬ್ಬರು ಆಫೀಸರರ ಕೈಯೇ ಈ ಮುನಿಸಿಪಾಲಿಟಿಯ ನಿರ್ಮಾಣದಲ್ಲಿಯೂ ಬಿದ್ದಿದೆ. ಅದರ ಪರಿಣಾಮವಾಗಿ ಒಂದು ಆಡಳಿತದ ವ್ಯವಸ್ಥೆಯನ್ನು ಆಚರಣೆಗೆ ತರಲಾಗಿದೆ. ಕನ್ನೆಯು ಕನಕಾಭರಣಭೂಷಿತೆಯಾಗಿ ಧಾರಾಮಂಟಪದಲ್ಲಿ ನಿಂತಂತೆ, ಉಡುಪೀ ಮುನಿಸಿಪಾಲಿಟಿಯು ಕೌನ್ಸಿಲಿನ ಕೊರಳಿಗೆ ಮಾಲೆ ಹಾಕಲು ಮುಹೂರ್ತವನ್ನು ಎದುರು ನೋಡುತ್ತಿದೆ.

ಇನ್ನು ಕೇಳಬರುವುದೆಂದರೆ, ಚುನಾವಣೆಯು ಗಲಭೆ; ಉಮೇದುವಾರರೊಳಗಿನ ಮೇಲಾಟ. ಜಿಲ್ಲೆಯೊಳಗೆ ಎರಡನೆಯ ಮುನಿಸಿಪಾಲಿಟಿಯಾದ ಉಡ್ಪಿಯಲ್ಲಿ ಈ ಮೇಲಾಟವೇನಾದರೂ ಕಡಿಮೆಯಾಗುವ ಲಕ್ಷಣ ತೋರುವುದಿಲ್ಲ. ತಮ್ಮಿಂದಲೂ ಯೋಗ್ಯರಾದವರು ಈ ಸ್ಥಾನಕ್ಕೆ ಮತ್ತೊಬ್ಬರಿಲ್ಲವೆಂದು ತಾವೇ ತಿಳಿದುಕೊಂಡ ಪ್ರತಿಯೊಬ್ಬ ಉಮೇದುವಾರರೂ, ವಾನಾ ಉಪಾಯಗಳಿಂದ, ಆ ಸ್ಥಾನವನ್ನು ಸಂಪಾದಿಸಲು ನೋಡುವುದು ಎಲ್ಲ ಮುನಿಸಿಪಾಲಿಟಿಗಳಲ್ಲಿಯೂ ಕಂಡು ಬರುವಾಗ, ಉಡುಪಿಯಾದರೂ ಇದಕ್ಕೊಂದು ನಿಷೇಧವಾದೀತೆಂದು ನಾವು ತಿಳಿಯುವುದಿಲ್ಲ. ದುಡ್ಡಿನ ಚೆಲ್ಲಾಟ, ಏಜಂಟರುಗಳ ಹೋರಾಟ, ಉಮೇದುವಾರರ ಹಾರಾಟ ಇವೆಲ್ಲಾ ಆಗಿ ತೀರತಕ್ಕುದೇ. ಉಡುಪಿಗೂ ಇದರ ಹೊಸ ಅನುಭವವು ಚೆನ್ನಾಗಿ ಆಗಬಹುದೆಂದು ತೋರುತ್ತದೆ.

ಆದರೆ ತೆರಿಗೆದಾರರು ಮಾತ್ರ ತಮ್ಮ ಮತದಾನದ ಜವಾಬುದಾರಿಯನ್ನು ಮರೆಯುವುದಲ್ಲ. ಉಡುಪೀ ನಗರದ ಮುಂದಿನ ಏಳಿಗೆಯೂ, ಹಿತರಕ್ಷಣೆಯೂ ಅವರು ಆರಿಸುವ ಕೌನ್ಸಿಲರರ ಮೇಲೆಯೇ ಹೊಂದಿಕೊಂಡಿದೆ. ಮುಂದೆ ಬರುವ ಉಮೇದ್ವಾರರೆಲ್ಲರೂ ಕೌನ್ಸಿಲ್ ಕೆಲಸಕ್ಕೆ ಯೋಗ್ಯರೆನ್ನಬರುವುದಿಲ್ಲ. ಚುನಾವಣೆಯಾದ ಬಳಿಕ ಹಾಯಾಗಿ ನಿದ್ರಿಸುವ ಕೌನ್ಸಿಲರರು ಅನೇಕರಿದ್ದಾರೆ. ಅಂತಹವರಿಗೆ ಮತದಾನ ಮಾಡಬಾರದು. ದಾಕ್ಷಿಣ್ಯ, ಹಂಗು, ಜಾತಿಯ ಅಭಿಮಾನ ಇವುಗಳಿಂದ ಪ್ರೇರಿಸಲ್ಪಟ್ಟು ಮಾಡುವ ಮತದಾನವಾದರೂ ಸಾರ್ಥಕವೆನಿಸದು. ಮುಖ್ಯ, ಯೋಗ್ಯರಾದ ಪ್ರತಿನಿಧಿಗಳನ್ನಾರಿಸುವಲ್ಲಿ ಮತದಾರರು ಒಂದಿಷ್ಟು ಸ್ವನಿರ್ಧಾರವನ್ನೂ, ಸ್ವತಂತ್ರಬುದ್ಧಿಯನ್ನೂ ತೋರಲಾರದವರಾದರೆ, ಮುಂದೆ ಈ ಸ್ಥಳೀಯ ಸ್ವರಾಜ್ಯಭಾರದ ಕೀರ್ತಿ-ಅಪಕೀರ್ತಿಗಳಲ್ಲಿ, ಪರಿಣಾಮದಲ್ಲಿ ಎಲ್ಲರಿಗೂ ಒಂದು ಪಾಲು ಉಂಟೆಂಬುದನ್ನು ಅವರು ಮರೆಯದಿರಲಿ.

ಇಂಡಿಯನ್ ಸಿವಿಲ್ ಸರ್ವೀಸು.

ಇಂಡಿಯನ್ ಸಿವಿಲ್ ಸರ್ವೀಸಿಗೆ ಹೆಚ್ಚು ಮಂದಿ ಇಂಗ್ಲೀಷ್ ಜನರು ಬಂದು ಸೇರುವ ಹಾಗೆ, ಪ್ರಬಲವಾಗಿ ನಡೆಸಿದ್ದ ಆ ಉಪಚಾರದ ಪ್ರಚಾರಕಾರ್ಯವು ಈಗ ಫಲ ಬಿಟ್ಟಿದೆ. ಲಾರ್ಡ್ ವಿಲ್ಲಿಂಗ್‌ಡನ್‌ರವರು, ಇಲ್ಲಿಂದ ಅಲ್ಲಿಗೆ ಹೋದವರು ಮೊದಲು ಮಾಡಿದ ದೊಡ್ಡ ಕೆಲಸವೇ ಅದು. 'ಹೊಸ ರಾಜ್ಯರಚನೆಯನ್ನು ಕಂಡು ನೀವು ಭಯಪಡಬೇಡಿ. ಅದರ ಗುಟ್ಟು ಬೇರೆ ಇದೆ. ಬ್ರಿಟಿಶರ ಆಳಿಕೆಯ ಅಧಿಕಾರದ ಮಟ್ಟಿಗೆ ಆಗ್ಲೂ, ಈಗ್ಲೂ ಏನೂ ಬದಲಾಗಿಲ್ಲ; ಅಳಿಯನಲ್ಲ—ಮಗಳ ಗಂಡ' ಎಂದು ಅವರು ಅವರ ತರುಣರಿಗೆ ಜೆನ್ನಾಗಿ ಕಿವಿಯೂದಿ, ಬೆನ್ನು ತಟ್ಟಿ ಸಮಾಧಾನ ಹೇಳಿದ್ದರೆ ಮೇಲೆಯೂ, 'ನಾಮಕರಣ'ದ ಮೂಲಕ, ಈ ಚುನಾವಣೆ ಯಾಗಬೇಕೆಂಬ ಇದೊಂದು ಹೊಸ ಪದ್ಧತಿಯನ್ನು, ಅವರ ಸೌಕರ್ಯಕ್ಕಾಗಿ, ಜಾರಿಗೆ ತಂದ ಮೇಲೆಯೂ, ನಮ್ಮ ಯುರೋಪೀಯ ವಿದ್ಯಾರ್ಥಿಗಳೀಗ, ಈ ಸರ್ವೀಸಿನ ಸಮಾರಾಧನೆಗೆ, ಆಮಂತ್ರಣದ ಅತಿಥಿಗಳಾಗಿ ಬಂದು, ಹಾಕಿಟ್ಟ ಮಣೆಗಳ ಮೇಲೆ ಕಾಲು ನೀಡಿ ಕುಳಿತುಕೊಳ್ಳುತ್ತಿದ್ದಾರೆ. ಹೋದ ವರ್ಷ, ಈ ಸರ್ವೀಸಿನಲ್ಲಿ ಇವರ ಸಂಖ್ಯೆ ಒಂದು ಪಾಲಿದ್ದರೆ, ಈ ವರ್ಷ ದೇವತಾನುಗ್ರಹದಿಂದ ಅದರ ದುಬಾರಿಯಷ್ಟಾಗಿದೆ. ಹನ್ನೊಂದು ವರ್ಷಗಳಿಂದ, ಇಷ್ಟೊಂದು ದೊಡ್ಡ ಯುರೋಪೀಯ ವಿದ್ಯಾರ್ಥಿಗಳ ಸಂಖ್ಯೆಯನ್ನು, ಈ ಸಮಾರಾಧನೆಯ ಮಂದಿರದಲ್ಲಿ ಯಾರೂ ಕಂಡವರಿಲ್ಲ. ಈ ಬಾರಿ ನಮ್ಮ ವಿದ್ಯಾರ್ಥಿಗಳು ೨೪ಳ; ಅವರ ವಿದ್ಯಾರ್ಥಿಗಳು ೫೫೫!

ಇಷ್ಟರ ವರೆಗೆ, ಈ ಸಮಾರಾಧನೆಗೆ ಯುರೋಪೀಯ ವಿದ್ಯಾರ್ಥಿಗಳು ಇಷ್ಟು ಹೆಚ್ಚಾಗಿ ಬಾರದಿರಲು ಇನ್ನೂ ಒಂದು ಕಾರಣವಿದ್ದಿತು. ಮೊದಲು, ಈ ಯುರೋಪಿಯನ್ ಗ್ರಾಜುವೇಟರಾದವರು, ಈ ಐ. ಸಿ. ಎಸ್. ಸ್ಪರ್ಧೆಯಲ್ಲಿ, ಇತರರೊಂದಿಗೆ ಈಜಾಡಿ, ಹೋರಾಡಿ, ಜೆನ್ನಾಗಿ ತಲೆ ಖರ್ಚುಮಾಡಿ ಮೇಲಕ್ಕೆ ಬರಬೇಕಾಗಿದ್ದಿತು. ಆಗ ಆ ಸ್ಪರ್ಧೆಯಲ್ಲಿ, ನಮ್ಮ ಹಿಂದೀ ವಿದ್ಯಾರ್ಥಿಗಳು, ಇವರನ್ನು ದೆಸೆಗೆಡಿಸಿ ಓಡಿಸಿ, ಮೂಲೆ ಹಿಡಿದು ಕುಳ್ಳಿರುವಂತೆ ಮಾಡುತ್ತಿದ್ದರು! ಇದನ್ನು ದಷ್ಟಾಳುಗಳಾದ ನಮ್ಮ ಸ್ಪೇಟ್ ಸೆಕ್ರಟರಿಗಳು ತಿಳಿದರು. ರಿಕ್ರೂಟ್‌ಮೆಂಟಿನ ಪದ್ಧತಿಯನ್ನೇ ಬದಲಾಯಿಸಿಬಿಟ್ಟರು; ಅದರಲ್ಲಿ 'ನಾಮಿನೇಶನ್' ಕ್ರಮವನ್ನೂ ತಂದೊಡ್ಡಿದರು. ಇದರ ಪರಿಣಾಮವಾಗಿ, ಈಗಿರುವ ೫೫೫ ಮಂದಿ ಯುರೋಪೀಯ ವಿದ್ಯಾರ್ಥಿಗಳಲ್ಲಿ ೨೬೪ ಮಂದಿಯೂ ತಮಗೆ 'ನಾಮಿನೇಶನೇ' ಆಗಬೇಕೆಂದು ಹಾರೈಸುತ್ತಿದ್ದಾರೆ. ಸ್ಪರ್ಧಾಪರೀಕ್ಷೆಯ ರಗಳೆ ಅವರಿಗೆ ಏಕೆ ಬೇಕಾಗಿದೆ?

ಈ ಪ್ರಕಾರ, ಇಂದಿನ ತನಕ, ವಿಶ್ವವಿದ್ಯಾಲಯದ ಗ್ರಾಜುವೇಟರುಗಳಿಂದ ನಡೆದುಕೊಂಡು ಬರುತ್ತಿದ್ದ, ಬ್ರಿಟಿಶ್ ರಾಜ್ಯದಾಡಳಿತೆಯ ಈ ಸರ್ವೀಸು, ಇನ್ನು ಮುಂದೆ, ಕೆಲವು ಮಟ್ಟಿಗೆ, ಇಂತಹ ನಾಮಕರಣದ ಮಹನೀಯರಿಂದಲೂ ನಡೆದುಕೊಂಡು ಬರುವಂತಾಗಿದೆ. ಭಾರತದ ಸಾಮ್ರಾಜ್ಯದ ಬಿಗಿಯಾದ ಉಕ್ಕಿನ ಚೌಕಟ್ಟಿಂಚರಿ—ಈ ಸಿವಿಲ್ ಸರ್ವೀಸು. ಅದಕ್ಕಿನ್ನು, ಇಂತಹ ನಾಮಕರಣದ ಒಡ್ಡಾಳುಗಳೇ ಚೌಕಟ್ಟಿನ ಆಣಿಗಳಾಗಿ ನಿಂತರೂ ಸಾಕೆಂದಾಗಿದೆ. ಪ್ರಾಯಶಃ, ಹೊಸ ರಾಜ್ಯಭಾರದಲ್ಲಿ, ವಿದ್ಯಾಪ್ರಭಾವಕ್ಕಿಂತಲೂ, ನಾಮಕರಣದ ಪ್ರಭಾವವುಳ್ಳ ಒಡ್ಡಾಳುಗಳಿಂದಲೇ ಹೆಚ್ಚು ಉಪಕಾರವಾಗಬಹುದೆಂದು ನಿರೀಕ್ಷಿಸಲಾಗಿದೆಯೋ ಏನೋ!

ಮಂಗಳೂರು

ನಮ್ಮ ಜಿಲ್ಲಾ ಬೋರ್ಡಿನ ಒಂದು ಸ್ಪೆಶಲ್ ವಿೂಟಿಂಗು ಇದೇ ತಿಂಗಳ ತಾ. ೨೫ನೇ ಶನಿವಾರ ಸಂಜೆ ಘಂಟೆ ೪ಗೆ ಡಿll ಬೋll ಆಫೀಸಿನಲ್ಲಿ ನಡೆಯುವುದು. ಈ ಬೋರ್ಡಿನ ಫರ್ಸ್ಟ್ ಎಂಡ್ ಕಮ್ಯುನಿಕೇಶನಿನ ಸ್ಟ್ಯಾಂಡಿಂಗ್ ಕಮಿಟಿಗೆ, ಡಿll ಬೋll ಮೆಂಬರರಲ್ಲದೆ ಹೊರಗಿನ ಒಬ್ಬರನ್ನು ಆಂದು ಆರಿಸಬೇಕಾಗಿದೆ.

ಇಲ್ಲಿನ ಮಾರ್ಕೆಟ್ ರಸ್ತೆಯ ಸುಪ್ರಸಿದ್ಧ ಜವುಳಿ ವ್ಯಾಪಾರಿಗಳಾದ ಶ್ರೀ. ಸೇಲಂಕಾರ್ ಎ. ವರದರಾಜು ಚೆಟ್ಟಿಯಾರರಲ್ಲಿ, ನಾಳೆಯಿಂದ ತಾ. ೨೦ರ ವರೆಗೂ, ನಿತ್ಯ ಸಂಜೆ ಗಂಟೆ ೫ಕ್ಕೆ, ಅನೇಕ ತರದ ಜವುಳಿಗಳನ್ನು ಬಹಿರಂಗವಾಗಿ ಏಲಂ ಮಾಡಲಾಗುವುದೆಂದು ಶ್ರೀಯುತರು ನಮಗೆ ತಿಳಿಸಿರುತ್ತಾರೆ.

ಇಲ್ಲಿಯ 'ದಿ ಏಕ್ರಿಯೇಶನ್ ಕ್ಲಬ್ಬಿ'ನ ಮಂದಿರದಲ್ಲಿ, ಶ್ರೀ. ವಿವೇಕೋದಯ ಯುವಕ ಸಂಘದ ಪ್ರಥಮ ವಾರ್ಷಿಕೋತ್ಸವವು ಇದೇ ಜುಲ್ಯಾ ತಾ. ೧೫ನೇ ಆದಿತ್ಯವಾರ ಸಾಯಂಕಾಲ ಘಂಟೆ ೪ಕ್ಕೆ ಶ್ರೀll ಬಿ. ಮೋಹನಸ್ವ ತಿಂಗಳಾಯರ ಅಧ್ಯಕ್ಷತೆಯಲ್ಲಿ ಜರಗಲಿದೆ. ಸರ್ವರಿಗೂ ಸುಸ್ವಾಗತವೆಂದು ಸಂಘದ ಅಧಿಕಾರಿಗಳು ತಿಳಿಸುತ್ತಾರೆ.

ಇಲ್ಲಿಯ ಶ್ರೀ। ವೆಂಕಟೇಶ ಶಿವಭಕ್ತಿಯೋಗ ಸಂಘವು ಯೋಗ್ಯರಾದ ಬಡ ವಿದ್ಯಾರ್ಥಿಗಳಿಗೆ ವೇತನ ಕೊಡುವದಕ್ಕೆ ಇದೇ ಜೂನು ತಿಂಗಳಿನಿಂದ ಶುರುಮಾಡಿ ಇಪ್ಪರ ತನಕ ೧೩ ವಿದ್ಯಾರ್ಥಿಗಳಿಗೆ ವೇತನ ಕೊಟ್ಟಿರುತ್ತದೆ. ಸಂಘಕ್ಕೆ ಪ್ರತಿ ತಿಂಗಳಿಗೆ ರೂಪಾಯಿ ೪೬—೮—೦ ವೇತನ ಕೊಡುವರೆ ಬೇಕಾಗುತ್ತದೆ. ವಂತಿಗೆ ಕೊಡಲು ವಾಗ್ದಾನ ಮಾಡಿರುವ ಸಕಲ ಗೃಹಸ್ಥರೂ ತಮ್ಮ ವಂತಿಗೆ ಕೊಟ್ಟು ಸಹಾಯ ಮಾಡಬೇಕಾಗಿ ಅಧ್ಯಕ್ಷರಾದ ಕಂಟಾಕ್ಟರ್ ಶ್ರೀ. ಎವಿ. ದೊಮಪ್ಪನವರು ವಿನಂತಿ ಮಾಡಿಕೊಳ್ಳುತ್ತಾರೆ.

ಇದೇ ೧೩ನೇ ಆದಿತ್ಯವಾರ ಪ್ರಾತಃ ಕಾಲ 8-30 ಘಂಟೆಗೆ ಕುದ್ರೋಳಿ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಶ್ರೀಯುತ ಬಿ. ಶಂಕರ್ ಭಟ್ ವಿದ್ವಾನ್‌ರವರು ಭಾಷಣವನ್ನೀಯಲಿರುವರು. ಸರ್ವರಿಗೂ ಸುಸ್ವಾಗತವಿದೆ.

ಶ್ರೀಯುತ ದತ್ತಾತ್ರೇಯರಾವ್ ಪಂಡಿತ್‌ರವರು ಇಲ್ಲಿಯ ಬೆಂಚ್ ಮ್ಯಾಜಿಸ್ಟ್ರೇಟರಾಗಿ ನೇಮಕ ಹೊಂದಿದ್ದಾರೆ.

ಕರ್ನಾಟಕ

ಮೈಸೂರು ಶ್ರೀರಂಗಪಟ್ಟಣದ ಬಳಿಯ ಗಂಜಾಮಿನಲ್ಲಿ ಒಳ್ಳೆಯ ಖರ್ಜೂರಗಳನ್ನು ಬೆಳೆಯಬಹುದೆಂದು ನಿದರ್ಶನಕ್ಕೆ ಬಂದಿದೆ. ಮೈಸೂರು ಸರಕಾರವು ಈ ಕೃಷಿಗೆ ಆಗತ್ಯವಿರುವ ನೀರಿನ ಸರಬರಾಯಿಯೇ ಮೊದಲಾದ ಹಲವು ಸೌಕರ್ಯಗಳನ್ನು ಏರ್ಪಡಿಸಿಕೊಡುವ ಯೋಚನೆಯಲ್ಲಿದೆ.

ನಮ್ಮ ಶ್ರೀಮನ್ಮಹಾರಾಜರವರು ಕುಂಭಕೋಣದ ಬಳಿಯಲ್ಲಿರುವ ಸ್ವಾಮಿಮಲೆಯ ಶ್ರೀ। ಸ್ವಾಮಿನಾಥ ದೇವಸ್ಥಾನಕ್ಕೆ ಒಂದು ಆನೆಯನ್ನು ಸಮರ್ಪಿಸಿರುತ್ತಾರೆಂದೂ ಆ ದೇವಸ್ಥಾನದ ಅಧಿಕಾರಿಗಳು ಅದನ್ನು ಈ ತಿಂಗಳು ರಾಜಧಾನಿಯಿಂದ ತೆಗೆದುಕೊಂಡು ಹೋಗುವರೆಂದೂ ತಿಳಿದುಬರುತ್ತದೆ.

ಲಕ್ಕವಳ್ಳಿ ಎಂಬಲ್ಲಿ ಭದ್ರಾನದಿಗೆ ಅಣೆಕಟ್ಟು ಕಟ್ಟುವುದರಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವುದಲ್ಲದೆ ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ೩೮ ಸಾವಿರ ಎಕರೆ ಜಮೀನು ತರಿ ಸಾಗುವಳಿ ಬರುತ್ತದೆ. ಈ ಏರ್ಪಾಡನ್ನು ಪರಿಶೀಲಿಸಲು ಗೊತ್ತಾಗಿದ್ದ ಕಮಿಟಿಯವರು ಕೆಲಸ ಪ್ರಾರಂಭಿಸಲು ೧೯೭ ಲಕ್ಷ ರೂಪಾಯಿಗಳ ಅಂದಾಜನ್ನು ಸರಕಾರಕ್ಕೆ ಒಪ್ಪಿಸಿರುತ್ತಾರೆ.

ಮಹಾತ್ಮಾ ಗಾಂಧಿಯವರ ಸಹೋದರರ ಮೊಮ್ಮಗನಾದ ಶ್ರೀ. ನವೀನ ಗಾಂಧಿಯೆಂಬವರು ಮೈಸೂರು ಚಾಮರಾಜೇಂದ್ರ ಕಲಾಶಾಲೆಯಲ್ಲಿ ವ್ಯಾಸಂಗ ಮಾಡಲು ಬಂದು ಸೇರಿರುತ್ತಾರೆ. ಇವರಿಗೆ ಸರಕಾರದವರು ೫೦ ರೂ.ಗಳ ಮಾಸಿಕ ವೇತನನ್ನು ಕೊಟ್ಟಿರುತ್ತಾರೆ.

ಅಖಿಲ ಭಾರತ ಚರಕಾ ಸಂಘದ ನಿಯಮಗಳಂತೆ ಕೃಷ್ಣರಾಜಪೇಟೆ ತಾಲೋಕು ಹೊಸ ಹೊಳಲು ಗ್ರಾಮದಲ್ಲಿ ಮೈಸೂರು ಸಿಲ್ಕ್ ಸೆಂಟರಿನ ಪ್ರಾರಂಭಮಹೋತ್ಸವವನ್ನು ಶ್ರೀಮತಿ ಲೇಡಿ ಲೋಕಸುಂದರಿ ರಾಮನ್‌ರವರು ನೆರವೇರಿಸಿದರು.

ಅಲ್ಲೂರಿನ ಸವಿೂಪ ಮೂರು-ನಾಲ್ಕು ವರ್ಷದ ಹಿಂದೆ ಒಂದು ಮರವು ಬೆರುಗಾಳಿಯ ದೆಸೆಯಿಂದ ಕೆಳಗೆ ಬಿದ್ದು ಪೂರಾ ಒಣಗಿಹೋಗಿತ್ತು. ಈಚೆಗೆ, ಬಿದ್ದ ಮರವು ಮತ್ತೆ ಚಿಗುರಿಕೊಂಡಿದೆ ಮಾತ್ರ ನಿಂತುಕೊಂಡಿದೆ. ಇದೊಂದು ಆಶ್ಚರ್ಯ.

(೭ನೇ ಪುಟಕ್ಕೆ ಮುಂದರಿಸಿಯದೆ)

ಹಿಂದೂದೇಶ

ರೋಬಿನ್ ಭಾಟರ್ಜಿ ಎಂಬ ಜಗತ್ಪ್ರಸಿದ್ಧರಾದ ಈಜುಗಾರರು, ೬೩ ಗಂಟೆಗಳ ಕಾಲ, ಕೈಕೋಳಗಳೊಡನೆ, ನೀರಿನಲ್ಲಿ ಒಂದೇ ಸಮನೆ ಈಜಾಡಿ ಅನೇಕ ಬಹುಮಾನಗಳನ್ನು ಪಡೆದಿರುವರೆಂದು ಲಾಹೋರಿನ ವಾರ್ತೆ.

ಬಾಪ್ಪಲಾ ಮುನ್ಸಿಫ್ ಕೋರ್ಟಿನಲ್ಲಿ ಕೋಪಿಸ್ಟ್‌ರಾಗಿದ್ದ ಲಕ್ಷ್ಮೀನರಸಿಂಹಯ್ಯ ಎಂಬವರನ್ನು ಅವರ ಪತ್ನಿ ಜ್ಞಾನಾಂಬಾ ಎಂಬಾಕೆಯು ಕೊಡಲಿಯಿಂದ ಹೊಡೆದು ಕೊಂದಿದ್ದಳು. ಆ ವೊಕದ್ದಮೆ ಈಗ ಗುಂಟೂರು ಜಡ್ಜರಲ್ಲಿ ತನಿಖೆಯಾಗಿ, ಆಕೆಗೆ ಬುದ್ಧಿಭ್ರಮಣೆ ಎಂದು ಮೇಲುಕೋರ್ಟಿಗೆ ಬರೆದುಕೊಳ್ಳಲಾಗಿದೆ.

ನಮ್ಮ ದಿವಂಗತ ಚಕ್ರವರ್ತಿಗಳ ಸ್ಮಾರಕವಾಗಿ, ಹಿಂದು ವೈದ್ಯಕೀಯ ಕಾಲೇಜನ್ನು ಮಹಾರಾಷ್ಟ್ರದಲ್ಲಿ ಸ್ಥಾಪಿಸಬಹುದೆಂಬ್ದಾಗಿ ಪೂನೆಯಲ್ಲಿನ ಆ ಸ್ಮಾರಕ ಮಂಡಲಿಯು ನಿರ್ಧರಿಸಿದೆ.

ನಮ್ಮ ವೈಸರಾಯರ ಸದುದ್ದೇಶದ ಆರಿಕೆಯನ್ನು ಅನುಸರಿಸಿ, ಕರಾಚಿಯಲ್ಲಿ ಮಹಾರಾಜ ಡೋಂಗರ್‌ಸಿ ಜೋಶಿಯವರು ಕರಾಚಿಯ ಪಿಂಜ್ರಾಪೋಲಿಗೆ, ಗವರ್ನರ್ ಲಾರ್ಡ್ ಗ್ರೆಹಮ್‌ರವರ ಸಮಕ್ಷಮ, ಮೂರು ಉತ್ತಮವಾದ ಬಸವಗಳನ್ನು ಕೊಟ್ಟರು.

ಕರಾಚಿಯ ಮುನಿಸಿಪಲ್ ಕ್ಲಬ್ಬಿನ ವಾರ್ಷಿಕ ವರ್ಧಂತಿಯ ಭೋಜನಕಾಲದಲ್ಲಿ, ಕೆಲವು ಮೆಂಬರಿಗೆ ವಾಂತಿ ಪ್ರಾರಂಭವಾಗಲು, ಔತನಸಾಮಗ್ರಿಗಳ ಪರೀಕ್ಷೆ ನಡೆದು, ಸಾರಿನಲ್ಲಿ ಹಲ್ಲಿಯೊಂದು ಬಿದ್ದಿತೆಂದು ಪ್ರಕಟವಾಯಿತು. ಹೇಗೂ ಮೆಂಬರರು ಯಾರಿಗೂ ವಿಶೇಷ ಹಾನಿಯಾಗಿಲ್ಲ.

ಬೊಂಬಯಿಯ ಕೋಟ್ಯಾಧೀಶ್ವರನಾದ ಶ್ರೀ. ಆನಂದಲಾಲ್ ಪೋತ್‌ದಾರ್ ಎಂಬ ಮಾರ್ವಾಡಿಗಳ ಮಗ, ಶ್ರೀ. ಆರ್. ಪೋತ್‌ದಾರ ಎಂಬವರು ವರ್ಲಿ ಸಮುದ್ರತೀರದಲ್ಲಿ ತಾವೇ ಕಾರ್ ಹಾಕಿಕೊಂಡು ಹೋಗುತ್ತಿದ್ದಾಗ, ಕಾರು ಹತೋಟಿ ತಪ್ಪಿ, ಒಂದು ಮರಕ್ಕೆ ಬಡಿದು ಸಮುದ್ರಕ್ಕೆ ಬಿತ್ತು. ಪೋತ್‌ದಾರರು ಮೃತರಾರು. ಜತೆಯಲ್ಲಿದ್ದ ಡ್ರೈವರನಿಗೂ ಪೂರಾ ಪೆಟ್ಟಾಗಿದೆ. ವಿಷಾದದ ಮಾತೇನೆಂದರೆ, ಇವರಿಗೆ ವಯಸ್ಸು ಬರೇ ೨೩; ಕಳೆದ ವರ್ಷ ತಾನೇ ಮದುವೆಯಾಗಿದೆ. ಪಾಪ! ಕಾಹಿಲೆಯಲ್ಲಿರುವ ತಮ್ಮ ತಾಯಿಯನ್ನು ನೋಡಲು, ಡಾಕ್ಟರರನ್ನು ಕರೆದು ತರಬೇಕೆಂದು ಇವರಿಷ್ಟು ಅವಸರದಿಂದ ಕಾರಲ್ಲಿ ಹೊರಟಿದ್ದರು!

ವಿಪರೀತ ಮಳೆಯಿಂದ ರಂಗೂನ್ ಪ್ರಾಂತದ ತಾರವಾಡಿ ಜಿಲ್ಲೆಯ ೧೮ ಗ್ರಾಮಗಳು ಪೂರಾ ಬಳಿದು ಹೋಗಿವೆ. ಸಾವಿರಾರು ಮಂದಿ ಅನಾಥರಾಗಿದ್ದಾರೆ.

ಹಿಂದೂ ಮಹಾಸಭೆಯ ೧೮ನೆಯ ವಾರ್ಷಿಕ ಅಧಿವೇಶನವು, ಲಾಹೋರಿನಲ್ಲಿ, ಇದೇ ಬರುವ ಆಕ್ಟೋಬರದಲ್ಲಿ ಜರುಗುವುದು. ಕೌನ್ಸಿಲ್ ಆಫ್ ಸ್ಟೇಟಿನ ಸದಸ್ಯರಾದ ರಾಯ್ ಬಹದೂರ್ ರಾಮಸರನ್ ದಾಸರವರೇ ಸ್ವಾಗತ ಕಮಿಟಿಯ ಅಧ್ಯಕ್ಷರು.

ಮುಂಬಾಯಿಯ ಫೋರ್ಟ್ ಆರ್ಯಸಮಾಜದಲ್ಲಿ ಇತ್ತೀಚೆಗೆ ಆದಿತ್ಯವಾರ ನಡೆದ ಸಾಪ್ತಾಹಿಕ ಅಧಿವೇಶನದಲ್ಲಿ ಶ್ರೀಮಾನ್ ಘನಶ್ಯಾಮ ಸಿಂಘ್ಜಿ ಗುಪ್ತರವರು ಲೆಜಿಸ್ಲೇಟಿನ್ ಎಸೆಂಬ್ಲಿಯಲ್ಲಿ ತಂದ 'ಆರ್ಯ ಮೇರಿಯೆಜ್ ವೆಲಿಡೇಶನ್ ಬಿಲ್'ನ ವಿಷಯವಾಗಿ ಮಾತಾಡಲಾಯಿತು. ಅಧ್ಯಕ್ಷರಾದ ಪಂಡಿತ ವಿಜಯ ಶಂಕರಜಿಯವರು ಆ ಮಸೂದೆಯ ವಿಶೇಷತೆ ಮತ್ತು ಅವಶ್ಯಕತೆಯ ವಿಷಯವಾಗಿ ಹೇಳಿ ಪ್ರಾಚೀನಾರ್ಯರಲ್ಲಿಯೂ ಇಂಥಾ ಅನುಲೋಮ, ಪ್ರತಿಲೋಮ, ಸಮಾನವೆಂಬೀ ೩ ರೀತಿಯ ವಿವಾಹಗಳು ಹಡೆದಿತ್ತೆಂದೂ ಉದಾಹರಣೆ ಕೊಟ್ಟು ವಿವರಿಸಿದರು.

ಹೊಸ ಡಿಲ್ಲಿಯ ಗಾಡಿವಾಲರ, ಟಾಂಗ್‌ವಾಲರ ಕೆಲವು ಕೇಳಿಕೆಗಳನ್ನು ಸಂಬಂಧಪಟ್ಟವರು ಮನ್ನಿಸಲಿರುವ ಕಾರಣ ಆ ಮುಷ್ಕರವೀಗ ನಿಂತಿದೆ ಎಂದು ಪ್ರಕಟವಾಗಿದೆ.

ಪಂಜಾಬಿನ ವಿದ್ಯಾಂಗದ ಮಂತ್ರಿಗಳಾದ ಸರ್-ಫಜ್ಲ್-ಹುಸೇನ್‌ರವರು ಕಾಹಿಲೆಯಲ್ಲಿದ್ದಾರೆ.

ಬೊಂಬಯಿಯ ಸೇವ್ರೀ ಕ್ಷೇತ್ರದಲ್ಲಿ ಒಂದು ಮಿಲ್ಲಿಗೆ ಬೆಂಕಿ ಬಿದ್ದು ೨ ಲಕ್ಷ ರೂಪಾಯಿಗಳು ಬೆಲೆ ಬಾಳುವ ಉಣ್ಣೆ, ಮಡ್ಡೀ ಹತ್ತಿ, ಯಂತ್ರಸಾಧನಗಳು ಸಪ್ಪಳವಾಗಿದೆ.

ಬೆಟ್ಟದ ಪ್ರಾಂತದ ಒಬ್ಬ ಹುಡುಗಿಯು ಅಪಹಾರದ ಆರೋಪದ ಮೇಲೆ ಬಿಹಾರಿನ ಎಂ. ಎಲ್. ಸೀ. ಗಳಾದ ರಾಯ್ ಬಹದೂರ್ ದಿಲೀಪ್ ನಾರಾಯಣ ಸಿಂಗ್ ಮೊದಲಾದವರ ಮೇಲೆ ಪ್ರಾಸಿಕ್ಯೂಶನ್ ಪ್ರಾರ್ಥಿಸಿರುವಳಿನಲ್ಲಿ ನಡೆಯುತ್ತಿದೆ.

ಕಲ್ಕತ್ತೆಯಲ್ಲಿ ಒಂದು ಬ್ಯಾಂಕಿಗೆ ಪಾವತಿ ಮಾಡಲು ಕೌಂಟರಿನ ಬಳಿ ನಿಂತಿದ್ದ ವಿ. ಗಲ್‌ಸ್ಟನ್ ಎಂಬವನಿಂದ ೫ ಸಾವಿರ ರೂಪಾಯಿಗಳ ನೋಟುಗಳ ಕಟ್ಟನ್ನು ಅಪಹರಿಸಿದ್ದರೆಂದು ಮಡ್ರಾಸಿನ ಇಬ್ಬರು ಯುವಕರ ದಸ್ತಗಿರಿಯಾಗಿದೆ.

ವಿದೇಶ

ಇದೇ ಜುಲ್ಯಾ ತಾ. ೧೫ರಿಂದ ಇಟಲಿಯ ಮೇಲಿನ ಸ್ಯಾಂಕ್ಶನುಗಳು ರದ್ದಾಗಬೇಕೆಂದು ಜನಾಂಗ ಸಂಘದ ಆಪ್ಪಣೆ. ಇದ್ದ ಒಂದು ಮೋಣದ ಗೂಟಗಳ ಬೇಲಿಯೂ ಈಗ ಕರಗಿದ ಹಾಗಾಯಿತು.

ಜಪಾನಿನಲ್ಲಿ ಕಳೆದ ಫೆಬ್ರುವರಿಯಲ್ಲಿ ಮಿಲಿಟರಿಯವರಲ್ಲಿ ಕೆಲವರು ದಂಗೆ ಎದ್ದು, ಮಂತ್ರಿಮಂಡಲದಲ್ಲಿ ಕೆಲವರ ಕೊಲೆಯಾಯಿತಷ್ಟೆ. ಈಗ ಆ ಸಂಬಂಧ ೧೩೩ ಮಂದಿ ಆಪರಾಧಿಗಳನ್ನು ಕೋರ್ಟ್ ಮಾರ್ಶಲ್ ವಿಚಾರಣೆಗೆ ಒಳಪಡಿಸಿದಲ್ಲಿ, ೫ ಜನ ಆಫೀಸರರಿಗೆ ಟಾಪು, ೧೩ ಮಂದಿ ಆಫೀಸರರಿಗೂ, ೪ ಮಂದಿ ಸಿವಿಲಿಯನರಿಗೂ ಫಾಸಿ; ಇತರರಿಗೆ ೧೫ ವರ್ಷಗಳ ಸಜೆ ಎಂದೂ ತೀರ್ಮಾನವಾಗಿದೆ.

ಇತಿಯೋಪಿಯದ ಪಶ್ಚಿಮ ಭಾಗವನ್ನು ಇಟಲಿಯವರ ಕೈಯಿಂದ ರಕ್ಷಿಸುವ ಕಾರ್ಯಕ್ಕಾಗಿ ತಮಗೆ ೩೦ ಲಕ್ಷ ಪೌಂಡುಗಳ ಧನಸಹಾಯವು ಬೇಕಾಗಿದೆ ಎಂದೂ ಅಷ್ಟು ತಮಗೆ ದೊರೆಯುವಂತಾಗಬೇಕೆಂದೂ ಲಂಡನಿನ ಇತಿಯೋಪಿಯನ್ ಲೀಗಿನವರು ಸಾರ್ವಜನಿಕವಾದ ಒಂದು ಆಪೀಲ್ ಮಾಡಿದ್ದಾರೆ.

ನೇಗಸರವರು ಲಂಡನಿಗೆ ಹಿಂದಿರುಗಿರುವರು.

ಡಾರ್ಡನೆಲ್ಸ್ ಕಾನ್ಫರೆನ್ಸು ನಡೆಯಲಾರಂಭಿಸಿದೆ. ಇಟಲಿ ಅದರಲ್ಲಿ ಭಾಗ ವಹಿಸುವುದಿಲ್ಲ.

ಅಮೇರಿಕದಲ್ಲಿ ಅನಾವೃಷ್ಟಿಯಿಂದ ಜನಗಳ ಸಂಕಷ್ಟವು ಹೆಚ್ಚುತ್ತಿದೆ. ಮಳೆಯು ಲಕ್ಷಣವಿಲ್ಲ. ಗೋಧಿಯು ಬೆಳೆ ಇಲ್ಲ. ಬೆಲೆಯಾದರೂ ಧಾನ್ಯದವಸಗಳಿಗೆ ವಿಪರೀತ. ಇದರ ನಿವಾರಣೆಯು ಕಾರ್ಯವೀಗ ಅಲ್ಲಿನ ಪ್ರಭುತ್ವದ ಮುಖ್ಯ ವಿಷಯವಾಗಿದೆ.

ರಾಜದ್ರೋಹಿಗಳೆಂದು, ಪ್ರಭುತ್ವದ ಮೇಲೆ ಒಳಸಂಚು ನಡೆಯಿಸಿದವರೆಂದು ಪೆಡ್ರಿಡಿನಲ್ಲಿ ೧ ಸಾವಿರ ಮಂದಿ ಫೇಶಿಯಿಸ್ಟರ ದಸ್ತಗಿರಿಯಾಗಿದೆ.

ಪ್ಯಾಲಸ್ತೈನಿನಲ್ಲಿ ಯಹೂದ್ಯರ ಮೇಲೆ ಬಾಂಬು ಬಿದ್ದಿತು. ಮಿಲಿಟರಿಯವರ ಮೇಲೆ ಗುಂಡು. ಈ ಸಂಬಂಧ ಅನೇಕ ಮಂದಿ ಅರಬರ ಕೈದಾಗಿದೆ.

ವಿದೇಶೀ ಕಾರ್ಯಭಾರಗಳ ಸೈಕಟರಿಗಳಾದ ಮಿ. ಎಂತೊನಿ ಏಡನ್‌ರವರು ಒಂದು ವಾರದ ವಿಶ್ರಾಂತಿ ಪಡೆಯುವುದರಿಂದ ಅವರ ಬದಲಿಗೆ ಲಾರ್ಡ್ ಹ್ಯಾಲಿಫಾಕ್ಸರು ಆ ಕೆಲಸ ನೋಡುವರು.

ಎಡಿಸ್ ಅಬಾಬದಿಂದ ಜಿಬ್ಯೂತ್ಯಕ್ಕೆ ಹೊರಟು ದಾರಿಯಲ್ಲಿ ಇಳಿದ ೩ ವಿಮಾನಗಳಲ್ಲಿ ೪ ಮಂದಿ ಇಟಲಿ ಆಫೀಸರರನ್ನು ಕೊಲೆ ಮಾಡಿದ್ದಾರೆ.

ರಾವೀ ನದಿಯ ಉಪನದಿಯಾದ ಮಾಸ್ರೂವಿನಲ್ಲಿ ಒಂದು ದೋಣಿ ಮಗುಚಿ ೪೦ ಮಂದಿ ನದೀ ಪಾಲಾದರು.

ಲಾಹೋರು ಪ್ರಾಂತದ ಕೆಲವು ಇನ್ಶ್ಯೂರೆನ್ಸ್ ಕಂಪೆನಿಗಳ ವಿಷಯದಲ್ಲಿ ಕೆಲವರು ಒಟ್ಟುಸೇರಿ ಸುಮಾರು ೨೫ ಸಾವಿರ ರೂಪಾಯಿಗಳ ಮಟ್ಟಿಗೆ ವಂಚನೆ ನಡೆಸಿರುವರೆಂದು ಪ್ರಕಟವಾಗಿದೆ. ಸುಳ್ಳು ಹೆಸರುಗಳನ್ನು ಕಲ್ಪಿಸಿ, ಆ ಹೆಸರುಗಳಲ್ಲಿ ಇನ್ಶ್ಯೂರ್ ಕ್ರಮ ನಡೆಸಿ, ಅನಂತರ ಅವರು ಮರಣಪಟ್ಟಂತೆ ದಾಖಲೆಗಳನ್ನು ಸೃಷ್ಟಿಸಿ ದುಡ್ಡು ಹೊಡೆದಿರುವ ಸುಮಾರು ೪೦ ವೊಕದ್ದಮೆಗಳು ಈಗ ಮುಂದೆ ಬಂದಿವೆ. ಅನೇಕ ಮಂದಿ ಲಂಬಾರ್ಡಿಗಳೂ, ಡಾಕ್ಟರರುಗಳೂ ಈ ಒಳಸಂಚಿನಲ್ಲಿ ಸೇರಿರುವಂತೆ ತಿಳಿದುಬರುತ್ತಿದೆ.

ನಮ್ಮ ಆಧಿಪತ್ಯದ ವಿದ್ಯಾಂಗದ ಡೈರೆಕ್ಟರರು, ಎಲಿಮೆಂಟರಿ ಶಾಲೆಗಳ ಕೆಳತರಗತಿಗಳಲ್ಲಿಯೂ, ಪಾಠಪಟ್ಟಿಯ ಹಲವು ಹದಿನೆಂಟು ವಿಷಯಗಳಿಗಾಗಿ, ಹಲವು ಹದಿನೆಂಟು ಪಠ್ಯಪುಸ್ತಕಗಳನ್ನು ಉಪಯೋಗಿಸುವ ಪದ್ಧತಿಯು ಕ್ರಮೇಣ ಸರಕಾರಕ್ಕೆ ಬರೆದಿದ್ದಾರೆ. ಈ ಪದ್ಧತಿಯಿಂದ ಕಲಿಸುವ ವೃತ್ತಿಗೆ ಬಾಧಕವಿದೆ ಎಂದೂ, ಇತರ ದುರುಪಯೋಗಗಳೂ ಆಗುತ್ತಿವೆ ಎಂದೂ ಅವರು ಅನ್ನುತ್ತಾರೆ. ದೇಶಭಾಷೆಯ ಪಠ್ಯಪುಸ್ತಕ ಅಲ್ಲದೆ ಮೊದಲಿನ ಮೂರು ತರಗತಿಗಳಿಗೆ ಬೇರೆ ಪಠ್ಯಪುಸ್ತಕಗಳು ಅಗತ್ಯವಲ್ಲ; ೩ನೆಯ ತರಗತಿಗೆ ಗಣಿತದ ಪುಸ್ತಕ ಒಂದಿರಲಿ;—ಎಂಬೀ ಅವರ ಅಭಿಪ್ರಾಯದಂತೆ, ನಮ್ಮ ಸರಕಾರವೂ ಅದೇ ರೀತಿ ನಮ್ಮ ಯಾವತ್ತೂ ಸ್ಥಳೀಯ ಸಂಸ್ಥೆಗಳಿಗೆ ಆಪ್ಪಣೆ ಕೊಟ್ಟಿದೆ. ಈ ಆಪ್ಪಣೆಯಂತೆ, ಎಲಿಮೆಂಟರಿ ತರಗತಿ ೧-೩ಕ್ಕೆ ದೇಶಭಾಷೆಯ ಪಠ್ಯಪುಸ್ತಕ; ೩ಕ್ಕೆ ಗಣಿತದ ಪಠ್ಯಪುಸ್ತಕ ಕೂಡ; ೪-೫ನೇ ತರಗತಿಗಳ ಪುಸ್ತಕಗಳು ಇನಸ್ಪೆಕ್ಟಿಂಗ್, ಆಫೀಸರರ ಸೂಚನೆಯಂತೆ ನಿಯಮಿಸಲ್ಪಡತಕ್ಕದ್ದು.

ಕಲ್ಕತ್ತೆಯ ಒಬ್ಬ ಮಾಜೀ ಸಾರ್ಜಂಟರು, ೨೫ ಥಾನು ರೇಶ್ಮೆ ಬಟ್ಟೆಯನ್ನು ಕದ್ದೂ, ತಾನು 'ಕಸ್ಟಮ್ಸ್' ಆಫೀಸರನೆಂದು ಹೇಳಿಕೊಂಡೂ ಇರುವ ಸಂಬಂಧ ಅತನಿಗೆ ೬ ತಿಂಗಳ ಕಠಿನ ಸಜೆ.

ಇಂಡಿಯದಿಂದ ಏಡನು ಬರುವ ಎಪ್ರಿಲ್ ನಿಂದ ಬೇಸ್ತಡಬೇಕೆಂದು ಸರಕಾರದ ಆಪ್ಪಣೆಯಾಗಿದೆ

(೬ನೇ ಪುಟದಿಂದ)

ನವೆಂಬರ್ ತಿಂಗಳಲ್ಲಿ ನಡೆಯುವ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೆ ೧೧೩ ಪದವೀಧರರು ಇರುತ್ತಾರೆ. ಎರಡು—ಮೂರು ಜನರಿಗೆ ಮಾತ್ರ ಚಾನ್ಸ್ ಇದೆ.

ಲೇಡೀ ಸಿ. ವಿ. ರಾಮನ್‌ರವರು, ಚೆನ್ನರಾಯಪಟ್ಟಣದಲ್ಲಿ, ಹಿಂದೀ ಕಾನ್ವಕೇಶನ್ ಸಮಾರಂಭವನ್ನು ಜರುಗಿಸುತ್ತ, ಉದಾತ್ತವಾದ ಒಂದು ಹಿಂದೀ ಭಾಷಣ ಮಾಡಿದರು.

ಶ್ರೀಮನ್ಮಹಾರಾಜರವರು ಹಡಗಿನಲ್ಲಿ ಸುಖವಾಗಿರುವರೆಂದೂ; ಉಳಿದ ಕೆಲವರಿಗೆಲ್ಲಾ ಪಿತ್ತವಿಕಾರ ಕಾಯಿಲೆಯಾಗಿರುವುದೆಂದೂ ತಿಳಿದುಬರುತ್ತದೆ.

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ ಮಾತ್ರೆಗಳು.

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಬಲಹೀನತೆ ಇವನ್ನು ಗುಣವಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಉಚಿತವಾಗಿ ಕೊಡುವ
"ಜೀವದ ವೃಕ್ಷಮೂಲ"

ಒಂದು ಡಬ್ಬಿ ಉಪಯೋಗಿಸಿ ನೋಡಿ, ಮೂವತ್ತೆರಡು ಮಾತ್ರೆಗಳ ಡಬ್ಬಿ ೧ಕ್ಕೆ ಒಂದು ರೂಪಾಯಿ ಮಾತ್ರ.

ಕ್ಯಾಟಲಾಗಿಗೆ ಬರೆಯಿರಿ:—

ಆತಂಕನಿಗ್ರಹ ಫಾರ್ಮೆಸಿ,
ಚಿಕ್ಕಪೇಟೆ, ಬೆಂಗಳೂರು ಸಿಟಿ.
ಏಜಂಟರು—
ಪರ್ಲ್ ಎಂಡ್ ಸನ್ಸ್, ಮಂಗಳೂರು.

FREE,—ಉಚಿತ್,—ಪುಕಸಟ್ಟೆ!

ಮಹನೀಯರೆ,

ವಾಚನಾಲಯಗಳಲ್ಲಿಡಲು ಯೋಗ್ಯವಾದ ಮತ್ತು ಅಂದವಾದ ಬೈಂಡಿನ ಪುಸ್ತಕಗಳು, ಪ್ರತಿಯೊಬ್ಬರು ಓದಬೇಕಾದ ಕನ್ನಡ ಕಥೆ ಪುಸ್ತಕ, ನಾಟಕ, ಕೀರ್ತನೆ ಲಾ ಪುಸ್ತಕಗಳು ಮತ್ತು ರಾಮಾಯಣ, ಭಾಗವತ, ಭಾರತ, ವಗೈರೆಗಳಿಂದ ನಿಬಿಡೀಕೃತನಾಗಿ ಈಗಲೆ ಹೊರಗೆ ಬಂದಿರುವ ಕ್ಯಾಟಲಾಗಿಗೆ ಕೂಡಲೇ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬೇಕಾಗಿ ವಿನಂತಿ.

ಶ್ರೀ ಸರಸ್ವತೀ ಭಂಡಾರ,
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು.
ಅವಿನ್ಯೂ ರೋಡ್, ಬೆಂಗಳೂರು, ಸಿಟಿ.

500 ರುಪಾಯಿಗಳ ಬಹುಮಾನ.

ಬಿಳೇ ಕುಷ್ಠಕ್ಕೆ (ತೊನ್ನಿಗೆ) ಅತ್ಯಾಶ್ಚರ್ಯಕರವಾದ ಔಷಧಿ.

ಈ ವನಸ್ಪತಿಯು ಕೆಲವು ದಿನಗಳ ಪ್ರಯೋಗದಿಂದಲೇ, ಬಿಳೇ ಕುಷ್ಠವು (ತೊನ್ನು) ನಿರ್ಮೂಲವಾಗಿ ಸಂಪೂರ್ಣ ಗುಣವಾಗುತ್ತದೆ. ಬರೇ ಕೆಲವು ಸಲ ಮಾತ್ರ ಉಪಯೋಗಿಸಿ, ಈ ಭಯಂಕರ ರೋಗವನ್ನು ಪರಿಹರಿಸಿಕೊಳ್ಳಿ. ಈ ವನಸ್ಪತಿಯು ಒಬ್ಬ ಮಹಾತ್ಮನಿಂದ ದತ್ತವಾಗಿರತಕ್ಕದ್ದು. ಯಾವತ್ತು ಔಷಧಗಳನ್ನೂ ಮಾಡಿ ನಿರಾಶರಾದವರು, ಇದನ್ನು ಪ್ರಯೋಗಿಸತಕ್ಕದ್ದು. ಇದು ಮೋಸಗಾರಿಕೆಯಿದೆಂದು ತೋರಿಸಿಕೊಟ್ಟರೆ 500 ರುಪಾಯಿಗಳ ಬಹುಮಾನವಿದೆ. ಬೆಲೆ ರೂ. 1—8—0. ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

S. N. SINHA,
No 36, P. O. Mirchaiganj (PATNA).

ಪಿತ್ತಕೋಶವನ್ನು ಕಲೋಮಲ್ ಇಲ್ಲದೆ-ಎಚ್ಚರಿಸಿರಿ.

ಮೋಟಾರು ಗಾಡಿಯನ್ನು ನೂಕುವಷ್ಟು ಉತ್ಸಾಹ ಉಂಟಾಗುವುದು.

ಪ್ರತಿ ದಿನವೂ ಎರಡು ಪೈಂಟನಷ್ಟು ಪಿತ್ತರಸವು ಪಿತ್ತಕೋಶದಿಂದ ಜೀರ್ಣಕೋಶಕ್ಕೆ ಹರಿಯಬೇಕು. ಹೀಗೆ ಹರಿಯದಿದ್ದರೆ, ನಿಮ್ಮ ಆಹಾರವು ಜೀರ್ಣಿಸದೆ ಮಲಕೋಶದಲ್ಲಿ ಕೊಳೆಯುತ್ತದೆ. ಇದರಿಂದ ಹೊಟ್ಟೆಯಲ್ಲಿ ವಾಯು ಉತ್ಪತ್ತಿಯಾಗಿ ಮೆಲಬದ್ಧತೆಯುಂಟಾಗುತ್ತದೆ. ನಿಮ್ಮ ಶರೀರ ಯಂತ್ರವೆಲ್ಲಾ ವಿಷಮಯವಾಗಿ, ಪ್ರಪಂಚವೇ ಬೇಡವೆಂಬ ಮನೋ ಜಿಗುಪ್ಸೆಯುಂಟಾಗುತ್ತದೆ.

ಲವಣಗಳು, ರುಚಿಕರವಾದ ಸೌಮ್ಯ ಮತ್ತು ಕಠಿನತರ ಜುಲಾಬುಗಳು, ಇವೆಲ್ಲಾ ತಾತ್ಕಾಲಿಕ ಕ್ರಿಯಮಾತ್ರ ಉಪಯೋಗವಾದವುಗಳಲ್ಲದೆ ಮೂಲ ಕಾರಣವನ್ನು ತಾಕುವುದಿಲ್ಲ. ಆರೀತಿ ಮಾಡಬೇಕಾದರೆ ಜಗತ್ಪ್ರಸಿದ್ಧವಾದ "ಕಾರ್ಟರ್ಸ್ ಲಿಟಲ್ ಲಿವರ್ ಪಿಲ್ಸ್"ಗಳು ಮೇಲೆ ಹೇಳಿದ ೨ ಪೈಂಟು ಪಿತ್ತವನ್ನು ತಪ್ಪದೆ ಸಲೀಸಾಗಿ ಉತ್ಪತ್ತಿಮಾಡುತ್ತದೆ. ನಿರಪಾಯ, ಸೌಮ್ಯ ಮತ್ತು ಪೂರ್ಣಗುಣಕಾರಿಯಿದೆ. ಯಾವಾಗಲೂ ಕಾರ್ಟರ್ಸ್ ಲಿಟಲ್ ಲಿವರ್ ಪಿಲ್ಸ್‌ಗಳನ್ನೇ ಕೇಳಿರಿ. ಪ್ರತಿಯೊಂದು ಕೆಂಪು ಪೊಟ್ಟಣದ ಮೇಲೆ ಕಾರ್ಟರರ ಹೆಸರನ್ನು ನೋಡಿರಿ. ಬೆಲೆ ೧೦ ಆಣೆ.

100 ರುಪಾಯಿಗಳ ಬಹುಮಾನ.

ಸಿದ್ಧ ಗುಪ್ತ ಮಂತ್ರ.

ಲಕ್ಷಾಂತರ ರುಪಾಯಿಗಳ ವೆಚ್ಚದಿಂದಲೂ ಸಾಧಿಸಲಾಗದ ಕೆಲಸವು, ಈ ಮಂತ್ರವನ್ನು ಬರೇ ಕೆಲವು ಸಲ ಪುನರುಚ್ಚರಿಸುವುದರಿಂದಲೇ ಸಾಧ್ಯವಾಗುವುದು. ಇದನ್ನು ಪರಿಣಾಮಕಾರಿಯಾಗಿ ಮಾಡಲು, ಯಾವ ವಿಧವಾಗಿಯೂ ಕಷ್ಟಪಡಬೇಕಾದ ಅವಶ್ಯಕತೆ ಇಲ್ಲ. ಯಾವ ಸಿದ್ಧತೆಯು ಇಲ್ಲದೇ ಅದು ಫಲಿಸುತ್ತದೆ. ನಿಮಗೆ ಬೇಕಾದವಳು ಎಷ್ಟೇ ಕಠಿನ ಹೃದಯಳೂ ಕ್ರೂರ ಬುದ್ಧಿಯವಳೂ ಆಗಿರಲಿ. ಅವಳು ನಿಮ್ಮಲ್ಲಿ ಆಶೆಯುಳ್ಳವಳಾಗಿ, ಎಂದೆಂದೂ ನಿಮ್ಮೊಡನೆಯೇ ವಾಸಿಸಲು ಕೂಡ ಬಯಸುವಳು. ಈ ಮಂತ್ರವೊಂದು 'ವಶೀಕರಣ'ದ್ದು. ಇದು ಉದ್ಯೋಗವನ್ನೂ ದೊರಕಿಸಿಕೊಡುತ್ತದೆ. ಉದ್ಯೋಗದಲ್ಲಿ ವೃದ್ಧಿಯನ್ನೂ ಕಲ್ಪಿಸಿಕೊಡುತ್ತದೆ. ಇದು ಕೆಟ್ಟ, ಕೋಪಾಕ್ರಾಂತ ಗ್ರಹಗಳ ಪರಿಣಾಮವನ್ನು ಶಾಂತರೀತಿಯಲ್ಲಿ ಮಾರ್ಪಡಿಸುತ್ತದೆ. ಪರೀಕ್ಷೆ, ವ್ಯಾಪಾರ, ಸೋಡ್ತಿ, ರೇಸ್, ಜಗಟು, ಸ್ಪರ್ಧೆ ಇಂಥವುಗಳಲ್ಲಿ ಜಯವನ್ನು ಇದು ಸ್ಥಂಪಾಡಿಸಿಕೊಡುವುದೂ ಅಲ್ಲದೆ ಮನುಷ್ಯರನ್ನು ಆದ್ಯಪ್ಪನಂತರನ್ನಾಗಿಯೂ ಮಾಡುತ್ತದೆ. ಶಕ್ತಿ ಮಂತ್ರ ೨೦ ಮಂತ್ರಗಳಿಂದ ಮೋಸ ಹೋದವರು, ಈ ಮಂತ್ರವನ್ನು ಉಪಯೋಗಿಸಿ. ಮನುಷ್ಯನ ಮೂಲಕವಾದ ದೇವರ ಸೃಷ್ಟಿಯ ಅದ್ಭುತ ಆಶ್ಚರ್ಯ ಪರಿಣಾಮವನ್ನು ನೋಡಿರಿ. ಪತ್ರವ್ಯವಹಾರ ಇಂಗ್ಲಿಷಿನಲ್ಲೇ. ಬೆಲೆ ರೂ. 1/8/ (ಮನಿಯಾರ್ಡರ್ ಮೂಲಕ). ರೂ. 2/- (ವಿ. ಪಿ ಮೂಲಕ).

Sarwarth Sidhi Mantr Ashram,
No. 39, P. O. Mirchai ganj (PATNA)

ಗುಣ ಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣ ಪರತ.

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ಶರಗಿಗೆ ಶತ್ರುವಾಗಿರುವದು! ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ, ಮೈಯಲ್ಲಿ ನೋವು, ಉಷ್ಣತಾ, ಕ್ಷೀಣತಾ, ಗರ್ಭಾಶಯದಲ್

ಶ್ರೀ ಪಿ. ಬಿ. ಶ್ರೀನಿವಾಸನ್‌ರಿಗೆ

ತಾಯಿನಾಡು ಸ್ಟಾಫ್‌ನವರ ಸತ್ಕಾರ ಕೂಟ

ಬೆಂಗಳೂರು, ಜುಲ್ಯಾ ೬.

ತಾಯಿನಾಡು ಕಛೇರಿಯಿಂದ ಯೂರೋಪಿನಲ್ಲಿ ಸಂಚರಿಸಿ ಪ್ರಖ್ಯಾತ ವೃತ್ತಪತ್ರಿಕೆಗಳಿಂದ ವೃತ್ತಪತ್ರಿಕಾ ವಿಜ್ಞಾನ ಮತ್ತು ಕಲೆಯಲ್ಲಿ ಅನುಭವ ಪಡೆಯಲು ಯೂರೋಪಿಗೆ ಪ್ರಯಾಣ ಮಾಡಿದ ತಾಯಿನಾಡು ಪತ್ರಿಕೆಯ ಉಪಸಂಪಾದಕರಾದ ಶ್ರೀ. ಪಿ. ಬಿ. ಶ್ರೀನಿವಾಸನ್‌ರವರನ್ನು ಸತ್ಕರಿಸುವ ಸಲುವಾಗಿ ನಿನ್ನೆ ಸಾಯಂಕಾಲ ಚಿಕ್ಕಪೇಟೆಯ ಬೊಂಬಾಯಿ ಆನಂದ ಭವನದಲ್ಲಿ ತಾಯಿನಾಡು ಕಚೇರಿಯ ಸ್ಟಾಫಿನವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು.

ಪ್ರಥಮದಲ್ಲಿ ಶ್ರಿ. ಜಿ. ಆರ್. ಸ್ವಾಮಿಯವರು ಮುಖ್ಯ ಅತಿಥಿಗಳಿಗೆ ಟೋಸ್ಟನ್ನು ಸೂಚಿಸಿ ಶ್ರೀ. ಶ್ರೀನಿವಾಸನ್‌ರವರನ್ನು ಮತ್ತು ತಾಯಿನಾಡು ಸಂಪಾದಕರಾದ ಶ್ರೀ. ಪಿ. ಆರ್. ರಾಮಯ್ಯನವರನ್ನು ಸ್ಟಾಫಿನ ಪರವಾಗಿ ಸ್ವಾಗತಿಸಿದರು.

ಅನಂತರ ಬೊಂಬಾಯಿ ಆನಂದಭವನದವರು ಸುವ್ಯವಸ್ಥಿತವಾಗಿ ಏರ್ಪಡಿಸಿದ್ದ ಉಪಾಹಾರವಾಯಿತು.

ಶ್ರೀ. ಶ್ರೀನಿವಾಸನ್‌ರವರಿಗೆ ವೃತ್ತಪತ್ರಿಕಾವಿಜ್ಞಾನ ಮತ್ತು ಕಲೆಯ ಸಂಬಂಧದಲ್ಲಿ ಅನುಭವವುಂಟಾಗಲು ಈ ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ತಾಯಿನಾಡು ಸಂಪಾದಕರಾದ ಶ್ರೀ. ಪಿ. ಆರ್. ರಾಮಯ್ಯನವರನ್ನು ಪ್ರಶಂಸಿಸಿ ಶ್ರೀ. ಶ್ರೀನಿವಾಸನ್‌ರವರಿಗೆ ಸ್ಟಾಫಿನ ವಂವಾಗಿ ಧನ್ಯವಾದಗಳನ್ನೂ, ಸುಖಪ್ರಯಾಣವನ್ನೂ ಮತ್ತು ಆಯುರಾರೋಗ್ಯವನ್ನೂ ಶ್ರೀ. ಜಿ. ಆರ್. ಸ್ವಾಮಿಯವರು ಕೋರಿದರು.

ಶ್ರೀ. ಪಿ. ಆರ್. ರಾಮಯ್ಯನವರು ಸ್ಟಾಫಿನವರೆಲ್ಲರನ್ನೂ ಅಭಿನಂದಿಸಿ ಭಾಷಣ ಮಾಡುತ್ತಾ ಸ್ಟಾಫಿನವರೆಲ್ಲರೂ ತಾಯಿನಾಡು ಪತ್ರಿಕೆಯಲ್ಲಿಟ್ಟಿರುವ ಅಮಿತ ಪ್ರೀತಿವಿಶ್ವಾಸಗಳನ್ನು ಕೊಂಡಾಡಿ, ತಾವು ಕೊಡುತ್ತಿರುವ ಸಂಬಳಸಾರಿಕೆಗಳಿಗಿಂತಲೂ ಸ್ಟಾಫಿನವರಿಗೆ ಪತ್ರಿಕೆಯ ಮೇಲೆ ಇರುವ ಪ್ರೀತಿ ವಿಶ್ವಾಸಗಳೇ ಮುಖ್ಯವಾದ್ದೆಂದೂ, ಇನ್ನೂ ಹೆಚ್ಚಾದ ಪ್ರೀತಿವಿಶ್ವಾಸಗಳನ್ನಿಟ್ಟಲ್ಲಿ ಇದಕ್ಕಿಂತಲೂ ಹೆಚ್ಚಿಗೆಯ ಅನೇಕ ಕೆಲಸಗಳನ್ನು ಮಾಡಬಹುದೆಂದೂ ಅದಕ್ಕೆಲ್ಲಾ ಸ್ಟಾಫಿನವರು ಸಹಕರಿಸಿ ಇನ್ನೂ ಪ್ರೀತಿವಿಶ್ವಾಸಗಳಿಂದ ಕೆಲಸ ಮಾಡುವುದಾಗಿಯೂ ಹಾರೈಸಿದರು. ಶ್ರೀ. ಶ್ರೀನಿವಾಸನ್‌ರವರ ವೃತ್ತಪತ್ರಿಕಾ ಶಿಕ್ಷಣವತ್ತು ಯೂರೋಪ್ ಪ್ರವಾಸವನ್ನು ಕುರಿತು ಕೆಲವು ಮಾತುಗಳನ್ನಾಡಿದರು.

ಅನಂತರ ಸ್ಟಾಫಿನ ಪರವಾಗಿ ಶ್ರೀ. ಬಿ. ಆರ್. ಅಣ್ಣಯ್ಯಪ್ಪನವರು ಶ್ರೀ. ಶ್ರೀನಿವಾಸನ್‌ರವರಿಗೂ ಮತ್ತು ಸಂಪಾದಕರಾದ ಶ್ರೀ. ಪಿ. ಆರ್. ರಾಮಯ್ಯನವರಿಗೂ ಧನ್ಯವಾದಗಳನ್ನರ್ಪಿಸುವ ಒಂದು ಭಾಷಣವನ್ನು ಮಾಡಿ ಶ್ರೀ. ಶ್ರೀನಿವಾಸ್‌ರವರ ಯುರೋಪ್ ಪ್ರಯಾಣವು ಸುಖಮಯವಾಗಿರಲೆಂದೂ ಭಗವಂತನು ಶ್ರೀ. ಶ್ರೀನಿವಾಸನ್‌ರವರಿಗೂ ಶ್ರೀ. ಪಿ. ಆರ್. ರಾಮಯ್ಯನವರಿಗೂ ಆಯುರಾರೋಗ್ಯವನ್ನು ಕೊಟ್ಟು ಸಲಹಿ ಪತ್ರಿಕೆಯು ಇತೋಪ್ಯತಿಶಯವಾದ ಏಳಿಗೆಯನ್ನು ಹೊಂದಲೆಂದು ಭಗವಂತನನ್ನು ಪ್ರಾರ್ಥಿಸುವುದಾಗಿ ಹೇಳಿ ಸ್ಟಾಫಿನಲ್ಲಿರುವ ಪ್ರತಿಯೊಬ್ಬರೂ ಇನ್ನೂ ಹೆಚ್ಚು ಅಮಿತ ಪ್ರೀತಿವಿಶ್ವಾಸಗಳಿಂದ ಕೆಲಸ ಮಾಡುವುದಾಗಿ ಹೇಳಿದರು.

ಶ್ರೀ. ಲಕ್ಷ್ಮಣರಾಯರು ಮತ್ತು ಶ್ರೀ. ಕೆ. ಅನಂತಸುಬ್ಬರಾಯರು ಸಂಪಾದಕರಾದ ಶ್ರೀ. ಪಿ. ಆರ್. ರಾಮಯ್ಯನವರಿಗೂ ಮತ್ತು ಶ್ರೀ. ಶ್ರೀನಿವಾಸನ್‌ರವರಿಗೂ ಹಾರಾತುರಾಯಿಗಳನ್ನರ್ಪಿಸಿದರು.

ಶ್ರೀನಿವಾಸನ್‌ರವರು ಕರತಾಡನಗಳ ಮಧ್ಯೆ ಎದ್ದು ಸತ್ಕಾರವನ್ನು ಏರ್ಪಡಿಸಿದ್ದಕ್ಕಾಗಿ ಸ್ಟಾಫಿನವರೆಲ್ಲರಿಗೂ ತಾವು ಕೃತಜ್ಞರಾಗಿರುವುದಾಗಿ ಹೇಳಿ ಸ್ಟಾಫಿನವರ ಐಕಮತ್ಯಕ್ಕಾಗಿ ತಮ್ಮ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುವ ಕೆಲವು ಮಾತುಗಳನ್ನಾಡಿ ತಮ್ಮ ಅಮಿತ ಸಂತೋಷವನ್ನು ತೋರ್ಪಡಿಸಿದರು. ಗ್ರೂಪ್ ಫೋಟೋ ಆದ ನಂತರ ಸಮಾರಂಭವು ಮುಕ್ತಾಯವಾಯಿತು.

ಶ್ರೀ. ಪಿ. ಬಿ. ಶ್ರೀನಿವಾಸನ್‌ರವರ ಪ್ರಯಾಣ

ಬೆಂಗಳೂರು, ಜುಲ್ಯಾ, ತಾ. ೬.

ತಾಯಿನಾಡು ಉಪಸಂಪಾದಕರಾದ ಶ್ರೀ. ಪಿ. ಬಿ. ಶ್ರೀನಿವಾಸನ್‌ರವರು ನಿನ್ನೆ ರಾತ್ರಿಯ ಮದರಾಸ್ ಮೇಲಿನಲ್ಲಿ ಮದರಾಸಿಗೆ ಪ್ರಯಾಣ ಮಾಡಿದರು. ಇವರು ಅಲ್ಲಿಂದ ಕೊಲಂಬೋ ಮಾರ್ಗವಾಗಿ ಯೂರೋಪಿಗೆ ಪ್ರಯಾಣ ಮಾಡುವರು.

ಇವರನ್ನು ಬೀಳ್ಕೊಡಲು ರೈಲ್ವೆ ನಿಲ್ದಾಣಕ್ಕೆ ತಾಯಿನಾಡು ಕಛೇರಿಯ ಸ್ಟಾಫಿನವರೂ ಶ್ರೀ. ಶ್ರೀನಿವಾಸನ್‌ರವರ ಬಂಧುಗಳೂ, ಸ್ನೇಹಿತರೂ ಬಂದಿದ್ದರು. ಮೇಲು ಹೊರಡುವುದಕ್ಕೆ ಮುಂಚೆ ಪ್ರತಿಯೊಬ್ಬರೂ ಶ್ರೀ. ಶ್ರೀನಿವಾಸನ್‌ರನ್ನು ಅಭಿನಂದಿಸಿದರು. ಅನಂತರ ಹಾರಾತುರಾಯಿಗಳನ್ನು ಅರ್ಪಿಸಲಾಯಿತು. ಜಯ ಜಯ ಕಾರಗಳು ಆಗುತ್ತಿರುವಾಗ್ಗೆ ಮೇಲು ಹೊರಟಿತು.

ಪಂಚಮ ಜಾರ್ಜ್‌ರ ಸ್ಮಾರಕನಿಧಿಗೆ ಧನಸಹಾಯವಿತ್ತವರ ಪಟ್ಟಿ.

(ಮುಂದರಿದುದು)

ಅಬ್ಬಾರಿ ಇನ್ಸ್‌ಪೆಕ್ಟರ್ ಮಿ. ಕೆ. ಕುಮಾರನ್ ಉಣ್ಣಿಯವರ ಮುಖಾಂತರ ರೂ. ೧೫೮. ಡಿ. ಎಫ್. ಓ. ಈ. ಕೆ. ಕೃಷ್ಣನ್‌ನವರ ಮುಖಾಂತರ ರೂ. ೫೩—೪—೦. ಉಡುಪಿ ಕೌಂಟಿ ಮೆಂಬರ್ ಆರ್. ಏ. ಸೈಮನ್ಸ್‌ರ ಮುಖಾಂತರ ರೂ. ೩೦. ಡಾ. ಹೆಚ್. ಆರ್. ಸದಾಶಿವ ರಾವ್ ರೂ. ೨೫. ಮಂಗಳೂರು ನೋರ್ತ್ ಫೋರೆಸ್ಟ್ ಆಫೀಸ್ ಸಿಬಂದಿಯಿಂದ ರೂ. ೧೮—೧—೦, ಮಂಗಳೂರು ಫೋರೆಸ್ಟ್ ರೇಂಜ್ ಆಫೀಸರರಿಂದ ರೂ. ೧೫—೪—೦, ಬಿ. ಎಮ್. ಬಾಕ್ ಡಿಪೊ ಮತ್ತು ಪ್ರೆಸ್‌ಗಳ ಮೇನೇಜರರಿಂದ ರೂ. ೧೫; ಡಿಪ್ಟಿ ರಿಜಿಸ್ಟ್ರಾರ್ ಒಫ್ ಕೋ ಒಪರೇಟಿವ್ ಸೊಸ್ಯಾಟಿ ಮತ್ತು ಸಿಬಂದಿ ರೂ. ೧೧—೧೦—೦; ರೂ. ೧೦ರ ಪ್ರಕಾರ ಕೊಟ್ಟವರು—ಬಾರ್ಕೂರಿನ ಮಿಸೆಸ್ ಸಿ. ವಿ. ಏಲಾಚಾರ್ರರ ಮುಖಾಂತರ, ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಮತ್ತು ಎಂ. ಕುಂಜಂಬು ಸಾಹೇಬ್; ಗವರ್ನ್‌ಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಪ್ಯೂಪಿಲ್ ಟೀಚರ್ ಅಸೋಸಿಯೇಶನಿನ ಸೆಕ್ರೆಟರಿ ರೂ. ೭—೫—೦; ಎಂ. ನರಸಿಂಗ ರಾವ್, ರಿಟಾಯರ್ಡ್ ಡಿ. ಜಜ್ ರೂ. ೬—೪—೦; ಬಲ್ಮಠ ಬಿ. ಯಂ. ಮಿಶನರಿಗಳು ರೂ. ೬; ರೂ. ೫ರಂತೆ—ಎಂ. ದಾಮೋದರ ಕಿಣಿ, ಜೆ. ನಾರೋಜಿ, ಕಂಕನಾಡಿ ಹುಸೇನ್ ಬ್ಯಾರಿ, ಕಮ್ಮಾಜೆ ಸುಬ್ಬಣ್ಣ ಭಟ್ಟ, ವಿಠ್ಠ, ಎತ್ತು ಕೆ. ಲಕ್ಷ್ಮಿನಾರಾಯಣಾಚಾರ್, ಸುಬ್ರಮಣ್ಯ; ರೂ. ೪ರಂತೆ— ಯು. ಅಲಿಯಬ್ಬ ಬ್ಯಾರಿ, ಮತ್ತು ಆರ್. ಶಿವರಾವ್; ರೂ. ೩—೮—೦ರಂತೆ—ಭಿಡೆ ನಾರಾಯಣ ಭಟ್, ಮುಂಡಾಜೆ; ರೂ. ೩ರಂತೆ—ಹಿರಿಯಣ್ಣ ಹೆಗ್ಗಡೆ, ಯು. ಜೀವರಾವ್, ಸಾವ್ಯಾರ್ ಲಕ್ಷ್ಮಣ ಪೈ, ಯು. ವೈಕುಂಠ ಕಿಣಿ, ಯು. ಬಾಬುರಾಯ ಕಿಣಿ, ಬಿ. ಶ್ರೀನಿವಾಸ ಬಾಳಿಗಾ, ಡಾ. ಏ. ಎಸ್. ಹೆಬ್ಬಾರ್, ಕೆಮ್ಮಾಲ್ ಪಂಚಾಯತ್ ಬೋರ್ಡ್ ಪ್ರೆಸಿಡೆಂಟ್, ಮತ್ತು ಜೆ. ಏ. ಪೆರಿಸ್; ರೂ. ೩-೮-೦ ರಂತೆ—ಕೆ. ಕೇಶವ ಕುಡ್ವ, ಟಿ. ಡಿ ವಲಿಯತ್, ಮತ್ತು ಎನ್. ಸುಬ್ಬರಾವ್; ರೂ. ೨—೨—೦ರಂತೆ—ಕೆ. ಎಸ್. ಅಮೃತ ರಾವ್; ರೂ. ೨—೦—೦ರಂತೆ—ಎಂ. ಅಪ್ಪುರಾವ್, ವಿ. ರಾಮುಲು, ವಿ. ಕೆ. ಅಬ್ದುಲ್ ಖಾದರ್ ಸಾಹೇಬ್, ಹುಸೇನ್ ಶರೀಫ್ ಸಾಹೇಬ್, ಯು. ಅಮ್ಮುಬ್ಯಾರಿ, ಮಿಸೆಸ್ ಕೊಬನ್ ಮತ್ತು ಮಿಸೆಸ್ ಪೆರಿಸ್, ತ್ಯಾಂಪು ಬುಡಾಲೆ, ಬಿ. ರಘುನಾಥ ಬಾಳಿಗಾ, ಹುಮುಪ್ಪ, ಬಿ. ನಾರಾಯಣ ರಾವ್, ಬಿ. ಸುಬ್ರಾಯ ಬಾಳಿಗಾ, ಎಂ. ಲಕ್ಷ್ಮಣ ರಾವ್, ಕೆ. ವಿಠಲ ನಾಯಕ್, ಡಾ. ಎಂ. ಆರ್. ಕಾಮತ್ ಕಾಂತಪ್ಪ ಶೆಟ್ಟಿ, ವ್ಯಾ ಭವಾನಿರಾವ್, ಸುಬ್ಬಯ್ಯ ಶೆಟ್ಟಿ, ಹೂವಯ್ಯ ಶೆಟ್ಟಿ, ರೆ. ಫಾದರ್. ಎಲ್. ಸಾಲ್ವಾನಾ, ಏ. ಅಹಮದ್ ಸಾಹೇಬ್, ಎಂಟೋನಿ ಎಫ್. ಕೊಹಿಲೊ, ಹರ್ಬರ್ಟ್ ಬ್ರಿಟೊ, ಕೆ. ಲಕ್ಷ್ಮೀನಾರಾಯಣರಾವ್ ಆದೂರು, ಯು. ತಿಮ್ಮಪ್ಪಯ್ಯ ಭಟ್ಟ, ಸುಳ್ಯ, ಕೆ. ಶಿವರಾಮಪ್ಪಯ್ಯ, ಬೆಳ್ಳಾರೆ, ಕ್ಲೆಮೆಂಟ್ ಡಿ'ಸೋಜಾ ಕೂಳೂರು, ಮೊಂತು ಮುಯಾಣ ಡಿ'ಸೋಜಾ ಬಂಗ್ರಕೂಳೂರು, ಕೋಚಣ್ಣ ಶೆಟ್ಟಿ ಮತ್ತು ರೆ ಫಾದರ್ ಎ. ಪಿಂಟೊ; ರೂ. ೧—೮—೦ ರಂತೆ—ಡಿ. ರಿಜಿಸ್ಟ್ರಾರ್ ಒಫ್ ಕೋ-ಒಪರೇಟಿವ್ ಸೊಸ್ಯಾಟಿಸ್‌ರವರ ಸಿಬಂದಿಯಿಂದ ಮತ್ತು ಕುಂಬಳೆ ಹೈಸ್ಕೂಲ್ ಹೆಡ್‌ಮಾಸ್ಟರರಿಂದ.

ದಿ ಬೊಂಬೆ ಕಮರ್ಶಿಯಲ್ ಏಜೆನ್ಸಿ.

ಸ್ಪರ್ಧೆ ನಂಬ್ರ 7.

ಪಡೆಯಿರಿ ರೂ. 9000

ಪೋಸ್ಟ್ ಮಾಡುವ ಕೊನೆಯ ತಾರೀಕು 20-7-36. ಉತ್ತರ ತಾ. 28-7-36ರಲ್ಲಿ.

ಮೊದಲನೆ ಬಹುಮಾನವಾದ ರೂ. 7700/— ಸರಿಯಾದ ಉತ್ತರವನ್ನು (ಇದು ಬ್ಯಾಂಕಿನಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವ ಉತ್ತರದೊಡನೆ ಪ್ರತಿಯೊಂದು ವಿಧದಲ್ಲೂ ಸರಿಹೋಲಬೇಕು) ಕಳುಹುವವರಿಗೆ ಕೊಡಲಾಗುವದು. ಸರಿಯಾದ ಉತ್ತರವನ್ನು ಒಬ್ಬರಿಗಿಂತಲೂ ಹೆಚ್ಚಾಗಿ ಕಳುಹಿದಲ್ಲಿ ಅದು ಅವರೊಳಗೆ ಸರಿಯಾಗಿ ಹಂಚಲಾಗುವದು. ತಾ. 12—7—36ರೊಳಗೆ ಸರಿಯಾದ ಮೂರು ಪ್ರಥಮ ಉತ್ತರಗಳನ್ನು ಕಳುಹುವವರಿಗೆ ರೂ. 300/—ರ ಮೂರು ಬಹುಮಾನಗಳ ಗ್ಯಾರಂಟಿಯಿದೆ. ಎಲ್ಲರಕ್ಕಿಂತಲೂ ಅತ್ಯಧಿಕವಾದ ಉತ್ತರಗಳನ್ನು ಕಳುಹುವವರಿಗೆ ರೂ. 400ರ ವಿಶೇಷ ಬಹುಮಾನವಿದೆ.

	11	

ಸೂಚನೆ ಮಾಡತಕ್ಕುದು:—ಚೌಕದಲ್ಲಿ ಕಾಣುವ ಎಂಟು ಖಾಲಿ ಅಂಕಣಗಳನ್ನು ಪೂರ್ಯದಿಂದ ಇಪ್ಪತ್ತೆರಡರ (0ದಿಂದ 22) ಅಂಕೆಗಳಿಂದ ನಡುವಿನ 11ನ್ನು ಬದಲಾಯಿಸದೆ ಮೇಲಿನಿಂದ ಕೆಳಕ್ಕಾಗಲಿ, ಅಡ್ಡವಾಗಲಿ, ಮೂಲೆಯಿಂದ ಮೂಲೆಗಾಗಲಿ, ಕೂಡಿಸುವಾಗ ಜುಮ್ಲಾ 33 ಬರುವ ಹಾಗೆ, ಒಂದು ಅಂಕೆಯು ಎರಡು ಸಾರಿ ಬಾರದಂತೆ, ಭರ್ತಿ ಮಾಡಬೇಕು.

ನಿಯಮಗಳು: ಪ್ರತಿಯೊಂದು ಉತ್ತರಕ್ಕೆ ಪ್ರವೇಶಧನ ರೂ. 1/—. ಬಹುಮಾನವು ಬಂದ ಉತ್ತರಗಳ ಪ್ರಮಾಣದ ಮೇಲೆ ಹೊಂದಿಕೊಂಡಿರುವದು. ಖಾಲಿ ಕಾಗದದ ಮೇಲಣ ಉತ್ತರಗಳೂ ಸ್ವೀಕರಿಸಲಾಗುವುವು. ವ್ಯವಸ್ಥಾಪಕರ ತೀರ್ಮಾನವು ಕೊನೆಯದೂ, ಎಲ್ಲ ವಿಷಯಗಳಲ್ಲೂ ಕಾನೂನು ಪ್ರಕಾರ ಸಿಂಧುವಾದುದೂ ಆಗಿರುತ್ತದೆ. ಸ್ಥಳೀಯ ಉತ್ತರಗಳೂ ಮಧ್ಯಾಹ್ನ 12ರಿಂದ 5ರ ವರೆಗೆ ಸ್ವೀಕರಿಸಲಾಗುವುವು. ಉತ್ತರದೊಡನೆ, ಒಂದಾಣೆಯ ಟಪ್ಪಾಲು ಚೀಟನ್ನು ಹಚ್ಚಿಸಿ ನಿಮ್ಮ ವಿಳಾಸವನ್ನು ಬರೆದಿರುವ ಲಕೋಟೆಯನ್ನು ಕಳುಹಿಸಿರಿ. ಎಲ್ಲ ಉತ್ತರಗಳನ್ನೂ, ಹಣವನ್ನೂ ಈ ವಿಳಾಸಕ್ಕೆ ಕಳುಹಿರಿ:—

THE ORGANIZER.
THE BOMBAY COMMERCIAL AGENCY,
EMPIRE BUILDING, FORT, BOMBAY.

ದಿ ಮುಲ್ಲಾಪುರ ಕಂಪೆನಿ, ಲಿಮಿಟೆಡ್, ಮಂಗಳೂರು.

ನೋಟೀಸು.

ಆಭರಣಗಳ ಅಡವಿನ ಮೇಲೆ ಸಾಲ ಪಡಕೊಂಡ ಈ ಕೆಳಗೆ ಕಾಣಿಸಿರುವ ಸಾಲಗಾರರಿಗೆ ರಿಜಿಸ್ಟ್ರಿ ನೋಟೀಸು ಪಾವತಿ ರಶೀದಿ ನಮಗೆ ಸಿಕ್ಕಿದ್ದಾಗ್ಯೂ ಬಡ್ಡಿ ಕೊಡುವ ಯಾ ಬಿಡಿಸುವ ವಿಲೇವಾರಿ ಮಾಡದೆ ಇರುವುದರಿಂದ ಸದರಿ ನಗಗಳನ್ನು ತಾ. 16—8—1936ಕ್ಕೆ ಯಾ ನಮಗೆ ಯುಕ್ತಕಂಡ ತಾರೀಕಿನಲ್ಲಿ ನಮ್ಮ ರಿಜಿಸ್ಟರ್ಡ್ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ನಮಗೆ ಸಲ್ಲತಕ್ಕ ಹಣವನ್ನು ಬರಮಾಡಿಕೊಳ್ಳಲಾದೀತು ಎಂಬುದನ್ನು ಈ ಮೂಲಕ ತಿಳಿಸಿರುತ್ತದೆ.

ಲೋ. ನಂ.			
	2505 / 15-4-1935	ಬಿ. ಮಂಜುನಾಥ ಕುಡ್ಪಿ, C/o. ಮಿಜಾರ ತಪ್ಪಣ್ಣಯ್ಯ, ರಿಜಿಸ್ಟ್ರಿ ನೋಟೀಸು ವಾಪಸು ಆಗಿಯದೆ	ರೂ. 20—0—0
,, ,,	2767 / 19-6-1935	ಸೋಡಾ ಕೃಷ್ಣಪ್ಪ, ಬೊಕ್ಕಪಟ್ಟಣ, ಕುದ್ರೋಳಿ, ಮಂಗಳೂರು	ರೂ. 14—0—0
,, ,,	1362 / 26-12-1933	ಎಚ್. ಬಿ. ಸೈಮನ್ಸ್, ಫೊಟೋಗ್ರಾಫರ್, C/o ಪೋಸ್ಟ್‌ಮಾಸ್ಟರ್, ಗೋಬಿ ಚೆಟ್ಟಿಪಾಲಯಂ, ಬಾಕಿ	ರೂ. 22—0—0
,, ,,	2534 / 23-4-1935	ಕೆ. ಅಬ್ದುಲ್ ಖಾದರ್ ಆಹ್ಮದ್ ಸಾಹೇಬರೆ ಮಗ, ಕುದ್ರೋಳಿ, ಮಂಗಳೂರು, ರಿಜಿಸ್ಟ್ರಿ ನೋಟೀಸು ವಾಪಸು ಆಗಿಯದೆ	ರೂ. 11—0—0
,, ,,	1948 / 23-8-1934	ಅಂಡಾಲಾ ಮಂಜಯ್ಯ ಸೆಟ್ಟಿ, ರೊಕ್ಕ ಸೆಟ್ರ ಅಳಿಯ, ಕುಬಾರ ಮರ್ಕಡ ಗ್ರಾಮದಲ್ಲಿರುವವರು ಜುಮುಲಾ	ರೂ. 353—0—0
,, ,,	2197 / 4-12-1934	ಉಚ್ಚಿಲ್ ಶ್ರೀನಿವಾಸ ರಾವ್, ಕೃಷ್ಣ ನಾವಡರ ಮಗ, ಉಚ್ಚಿಲ ದಲ್ಲಿರುವವರು, ಉಡ್ಪಿ ತಾಲೂಕು	ರೂ. 25—0—0
,, ,,	2320 / 29-1-1935	ಡಿ ಡಿ ಡಿ ಡಿ	ರೂ. 8—0—0
,, ,,	2524 / 22-4-1935	ಡಿ ಡಿ ಡಿ ಡಿ ಜುಮ್ಲ	ರೂ. 162—0—0
,, ,,	2269 / 2-1-1935	ಎಂ. ಕೊಗ್ಗಣ್ಣ, ಚುಡ್ಪೆಗಲ್ಲಿ, ಮಂಗಳೂರು	ರೂ. 24—0—0
,, ,,	2736 / 24-6-1935	ಬೊಟ್ಟಿಕೆರೆ ತಿಮ್ಮಪ್ಪ ಮೇಲಾಂಟ, ಸಂಕಪ್ಪ ರೈಗಳ ಅಳಿಯ, ಕೂಳೂರು ಮಾಗಣೆ ಕುಂಜತ್ತಬೈಲಿನಲ್ಲಿರುವವರು	ರೂ. 28—0—0
,, ,,	2736 / 5-7-1935	ಡಿ ಡಿ ಡಿ ಡಿ	ರೂ. 75—0—0
,, ,,	2873 / 24-8-1935	ಅಬ್ದುಲ್ ಮುತಾಲಿಬ್, ಗೋಳಿಕಟ್ಟೆ ಬಜಾರ್, ಮಂಗಳೂರು, ನೋಟೀಸು ವಾಪಸು ಆಗಿಯದೆ	ರೂ. 13—0—0
,, ,,	2981 / 8-10-1935	ಬಿ. ಅಬ್ಬುಬಕ್ಕರ, ಅಬ್ದುಲ್ ರಹೀಮಾನ ಸಾಹೇಬರ ಮಗ, ಬೋಳಾರ	ರೂ. 14—0—0

ಮಂಗಳೂರು,
7—7—1936.

Mulki Umanath,
Managing Director,

ಸ್ನಾನ

(ಆಶುತೋಷ)

'ಬಿಸಿನೀರಿನಿಂದ ಎಣ್ಣೆ ಹಚ್ಚಿ ಸ್ನಾನ' 'ತಣ್ಣೀರಿನ ಪ್ರಾತಃಸ್ನಾನ' 'ಸ್ವೇದಸ್ನಾನ' 'ಕಲಶ ಸ್ನಾನ' 'ಯಜ್ಞಾಂತ್ಯದಲ್ಲಿ ಅವಭೃತ ಸ್ನಾನ' ಮೊದಲಾದ ಸ್ನಾನದ ಹೆಸರುಗಳನ್ನು ನಾವು ಎಷ್ಟೋ ಬಾರಿ, ಏಕೆ? ನಿತ್ಯಲೂ, ಕೇಳುತ್ತೇವೆ. ಯಜ್ಞಾದಿ ಕರ್ಮಗಳಲ್ಲಿ ಕಲಶಸ್ನಾನ ಮಾಡಿಸುವಾಗ ಬರೇ ನೀರಿನಿಂದ ಸ್ನಾನ ಮಾಡಿಸುವುದಿಲ್ಲ ಚರ್ಮದ ಮೇಲೆ ಇರಬಹುದಾದ ರೋಗಾಣುಗಳನ್ನು ನಾಶಮಾಡತಕ್ಕ ಜೊಗರು ಗುಣವುಳ್ಳ, ಕ್ಷೀರಪ್ರಧಾನಗಳಾದ ಅತ್ತಿ, ಆಲ, ಅಶ್ವತ್ಥ, ಸಣ್ಣ ಆಲ ಮೊದಲಾದ ಮರದ ಕೆತ್ತೆಗಳನ್ನೂ ಎಲೆಗಳನ್ನೂ ಸೇರಿಸಿ ಮಾಡಿದ ಕಷಾಯವನ್ನು ತಾಮ್ರದ ಕಲಶಗಳಲ್ಲಿ ತುಂಬಿಸಿ ಅಭಿಮಂತ್ರಿಸಿ ಅದರಿಂದ ಸ್ನಾನ ಮಾಡಿಸುವರು. ಈ ಸ್ನಾನವು ರೋಗಪರಿಹಾರಕವೆಂಬದರಲ್ಲಿ ಸಂಶಯವಿಲ್ಲ. ನಮ್ಮ ಪೂರ್ವಜರು ಮಾಡಿದ ಕೆಲವು ಧಾರ್ಮಿಕ ಪದ್ಧತಿಗಳು ಆರೋಗ್ಯವನ್ನು ಕಾಪಾಡಲಿಕ್ಕಾಗಿಯೇ ಎಂಬುದರಲ್ಲಿ ಸಂಶಯವಿರಲಾರದು.

ಕೆಲವು ಪರ್ವದಿನಗಳಲ್ಲಿ ಸಮುದ್ರ ಸ್ನಾನ ಮಾಡಬೇಕೆಂದು ಹಿಂದುಗಳ ವಿಶ್ವಾಸ. ಈ ಸಮುದ್ರಸ್ನಾನದಿಂದ ಚರ್ಮದಲ್ಲಿ ಬರುವ ಒಂದು ರೀತಿಯ ಸಿಬ್ಬುಗಳು ನಾಶವಾಗುವುವಲ್ಲದೆ ಇನ್ನೂ ಎಷ್ಟೋ ಚರ್ಮರೋಗಗಳು ನಾಶವಾಗುತ್ತವೆ. ಸಮುದ್ರಸ್ನಾನ ಮಾಡಿದ ಮೇಲೆ ಬೇರೆ ನೀರಿನಿಂದ ಸ್ನಾನ ಮಾಡಬಾರದೆಂದು ಹಿರಿಯರು ಹೇಳುವುದರ ಗುಟ್ಟು ಇಲ್ಲಿದೆ—ಮೈಗೆ ಹತ್ತಿದ ಉಪ್ಪು ಕೂಡಲೆ ತೊಳೆದು ಹೋಗಬಾರದೆಂದೇ ಈ ಮಾತಿನ ತಾತ್ಪರ್ಯ.

ವಾರಕ್ಕೊಮ್ಮೆಯಾದರೂ ಮೈಗೆ ಎಣ್ಣೆ ಹಚ್ಚಿ ಸ್ನಾನ ಮಾಡುವುದರಿಂದ ರೋಮಕೂಪಗಳು ನಿರ್ಮಲವಾಗಿ ಮೈಯೊಳಗಿನ ಕೆಟ್ಟ ಬೆವರು ಧಾರಾಳವಾಗಿ ಹೊರಟು ಮಾಂಸಖಂಡಗಳಿಗೆ ವ್ಯಾಯಾಮವಾದಂತಾಗಿ ಶರೀರಪುಷ್ಟಿಯಾಗುತ್ತದೆ. ಮನಸ್ಸು ಸಂತೋಷಗೊಳ್ಳುತ್ತದೆ.

ಸಂಸರ್ಗಜನ್ಯ ರೋಗ ಉಳ್ಳವರಿಗೂ, ಕುಷ್ಠರೋಗಿಗಳಿಗೂ ಅನೇಕ ವಿಧವಾದ ಔಷಧಗಳನ್ನು ಹಾಕಿ ಕಾಯಿಸಿದ ಕಷಾಯದ ಆವಿಯನ್ನು ಹಿಡಿದು ಒಂದು ರೀತಿಯ ಸ್ವೇದಸ್ನಾನ ಮಾಡಿಸುತ್ತಾರೆ. ಈ ಸ್ನಾನದಲ್ಲಿ ಕಷಾಯದಲ್ಲಿದ್ದ ಔಷಧಸಾರವು ಕಷಾಯದ ಹಬೆಯ ಮೂಲಕ ರೋಮಕೂಪಗಳಿಗೆ ಸೇರಿ ರಕ್ತದೊಳಗಿನ ವಿಷಾಣುಗಳನ್ನು ಬೆವರಿನ ಮೂಲಕ ಹೊರ ಹೊರಡಿಸುತ್ತದೆ.

ಪ್ರಾತಃಸ್ನಾನವು ಹಿಂದುಗಳಿಗೆ ಪುಣ್ಯ ಕಾರ್ಯ. ಬೆಳಗ್ಗಿನ ಅರುಣಕಿರಣಗಳಿಂದಲೂ ರಾತ್ರಿಯ ನಕ್ಷತ್ರಗಳ ಕಿರಣದಿಂದಲೂ ನೀರಿನಲ್ಲಿ ಒಂದು ರೀತಿಯ ರೋಗಹಾರಕ ಗುಣವಿರುವುದರಿಂದಲೇ ಪ್ರಾತಃಕಾಲದ ತಣ್ಣೀರುಸ್ನಾನದಿಂದ ಶೀತ ಮೊದಲಾದ ಜಲದೋಷಗಳು ಬರುವುದಿಲ್ಲ. ಮಾತ್ರವಲ್ಲ ದುಃಸ್ವಪ್ನ ಮೊದಲಾದುವನ್ನು ಹೋಗಲಾಡಿಸಲಿಕ್ಕೂ ಶರೀರಾರೋಗ್ಯವರ್ಧನೆಗೂ ರಾತ್ರಿಯ ನಿದ್ರಾಜಡವನ್ನು ಹೋಗಲಾಡಿಸಲಿಕ್ಕೂ ಪ್ರಾತಃಸ್ನಾನಕ್ಕೆ ಮಿಕ್ಕಿದ ಉಪಾಯವಿಲ್ಲ.

ಆರೋಗ್ಯ ವಿಜ್ಞಾನ

ದೇವರಿಗೆ ಕ್ಷೀರಸ್ನಾನ, ಪಂಚಾಮೃತಸ್ನಾನಗಳು ನೆರವೇರುವ ವಿಷಯ ಎಲ್ಲರಿಗೂ ಗೊತ್ತಿದೆ. ಆದರೆ ರೋಮನ್ ಚಕ್ರವರ್ತಿಯಾದ ನೀರೊ ಮತ್ತು ಆತನ ಹೆಂಡತಿ ಎಪ್ಪಿಯಾ ಇವರು ಕಲ್ಲಿನ ತೊಟ್ಟಿಗಳಲ್ಲಿ ಹಾಲನ್ನು ತುಂಬಿಸಿ ಅದರಲ್ಲಿ ಸ್ನಾನ ಮಾಡುತ್ತಿದ್ದರಂತೆ. ಮುಗಲ ರಾಣಿಯೊಬ್ಬಳು ಗುಲಾಬಿಹೂಗಳನ್ನು ಹಾಕಿಟ್ಟ ನೀರಿನಲ್ಲಿ ಸ್ನಾನ ಮಾಡುತ್ತಿದ್ದಳೆಂಬುದು ಸರ್ವವಿದಿತ.

ಹದಿನಾರನೇ ಲೂಯಿಯ ರಾಜವೈದ್ಯನು ಶೀತಕಾಲದಲ್ಲಿ ತಣ್ಣೀರಿಂದಲೂ, ಬೇಸಿಗೆಯಲ್ಲಿ ಬಿಸಿನೀರಿಂದಲೂ ಸ್ನಾನ ಮಾಡಬೇಕೆಂದು ಹೇಳುತ್ತಿದ್ದನಂತೆ. ಇನ್ನು ಸ್ಪಂಜ್ ಬಾತ್, ಪೌಡರ್ ಬಾತ್ ಮೊದಲಾದ ಎಷ್ಟೋ ಆಧುನಿಕ ಸ್ನಾನ ಪದ್ಧತಿಗಳೂ ಇವೆ.

ಅಂಗಸಾಧನೆಯು ಹೇಗೆ ರೋಗಗಳನ್ನು ಜಯಿಸುವುದು.

ಆವ ವಿಧವಾದ ಅಂಗಸಾಧನೆಯನ್ನಾಗಲಿ, ಸರಿಯಾಗಿಯೂ, ಜಾಗ್ರತೆಯಾಗಿಯೂ ಮಾಡಿದ ಪಕ್ಷದಲ್ಲಿ ನಮ್ಮ ದೇಹದಲ್ಲಿ ರಕ್ತಚಲನೆಯನ್ನುಂಟುಮಾಡಿ, ಚರ್ಮರಂಧ್ರಗಳ ಮೂಲಕವಾಗಿ ಬೆವರೊಡನೆ ಕೂಡಿದ ಅನೇಕ ಕಶ್ಮಲ ಪದಾರ್ಥಗಳನ್ನು ನೀಗಿಸುವುದಲ್ಲದೆ ಸ್ನಾಯುಗಳನ್ನು ಗಟ್ಟಿಪಡಿಸಿ ಅನವಸರವಾಗಿಯೂ, ಅಧಿಕವಾಗಿಯೂ ಇರುವ ಕೊಬ್ಬನ್ನೂ ಕಡಿಮೆ ಮಾಡುವುದು. ಅಂಗಸಾಧನೆಯು ನಮ್ಮ ದೇಹದಲ್ಲಿರುವ ಎಲ್ಲಾ ಅವಯವಗಳಿಗೆ ಅಧಿಕ ಚಟುವಟಿಕೆಯನ್ನುಂಟುಮಾಡುವುದು. ಸಾಧನೆಯನ್ನು ಮಾಡುವ ಸಮಯದಲ್ಲಿ ನಮ್ಮ ಜೀವಿತದಲ್ಲಿ ಸಹಜವಾದ ಶರೀರಬಾಧೆಗಳನ್ನೂ, ಮನಃಕ್ಲೇಶಗಳನ್ನೂ ಮರೆತುಬಿಡುವೆವು. ಇದು ನಮ್ಮ ಜೀವಿತದಲ್ಲಿರುವ ವೈರಸ್ಯವನ್ನೂ ನೀಗಿಸುವುದು. ಅಂಗಸಾಧನೆಯು ನಾವು ಹತ್ತು ಹದಿನೈದು ವರ್ಷಗಳ ಕೆಳಗೆ ನಮ್ಮ ಯೌವನದಲ್ಲಿ ಅನುಭವಿಸಿದ ಸಂತೋಷಗಳನ್ನು ಜ್ಞಾಪಿಸಿಸುವುದು. ಇದು ನಮ್ಮ ಮನೋವಿಕಾರಗಳನ್ನು ತಪ್ಪಿಸಿ ಉಲ್ಲಾಸವನ್ನು ಕೊಡುವುದರ ಮೂಲಕವಾಗಿ, ನಮಗೆ ಅನುಭವೈಕವೇದ್ಯವಾದ ಒಂದು ಅಪೂರ್ವ ಶಾರೀರಶಕ್ತಿಯನ್ನೂ ತೋರಿಸುವುದು.

ಸ್ತನ್ಯ.

(ಆಶುತೋಷ)

ಮಗುವಿಗೆ ತಾಯ ಹಾಲಿನ ಬದಲಾಗಿ ದನದ ಹಾಲನ್ನೊ ಆಡಿನ ಹಾಲನ್ನೊ ಕುಡಿಸುವುದು ವಾಡಿಕೆಯಷ್ಟೆ. ಎಷ್ಟೊ ಮಕ್ಕಳಿಗೆ ತಾಯಿಯಿಂದ ಸಾಕಷ್ಟು ಹಾಲು ದೊರಕುವುದಿಲ್ಲ. ಕೆಲವಕ್ಕೆ ಹಾಲು ದೊರಕಿದರೂ ಹೊಟ್ಟೆಗೆ ಸೇರಿದೊಡನೆ ವಾಂತಿಯಾಗುವುದೂ. ಇನ್ನು ಕೆಲವಕ್ಕೆ ಹೊಟ್ಟೆಗೆ ಸೇರಿದರೂ ಮೈ ಬೆಳೆಯುವುದಿಲ್ಲ. ಇದರಿಂದಾಗಿ ಮಕ್ಕಳೂ ತಾಯಂದಿರೂ ವೈದ್ಯರನ್ನು ಯಾವಾಗಲೂ ಆಶ್ರಯಿಸಬೇಕಾಗುತ್ತದೆ. ಎಷ್ಟೋ ಸಾರಿ ಮಗುವಿನ ಅಸ್ವಸ್ಥತೆಗೆ ತಾಯ ಮೊಲೆಹಾಲೇ ಕಾರಣವಾಗುತ್ತದೆಂಬುದನ್ನು ಅನೇಕರು ಅರಿತಿರುವರು.

ಹೆತ್ತ ಹೆಂಗುಸಿನಲ್ಲಿ ಉತ್ಪತ್ತಿಯಾಗುವ ಹಾಲು ಹೆತ್ತು ಏಳನೇ ದಿನದಿಂದ ತೊಡಗಿ ಸರಾಸರಿ ದಿನವೊಂದಕ್ಕೆ ಹದಿನೈದು ಔನ್ಸುಗಳಂತೆ ಹುಟ್ಟಿ ಕ್ರಮೇಣ ಹೆಚ್ಚುತ್ತ ಹೋಗಿ ಒಂಬತ್ತನೇ ತಿಂಗಳಿಗಿತಾಗುವಾಗ ೫೦—೪೦ ಔನ್ಸುಗಳಷ್ಟು ಹಾಲು ಹುಟ್ಟುತ್ತದೆ. ಈ ಹಾಲಿನಲ್ಲಿ ಮಗುವು ಒಂದು ಸಲ ಕುಡಿಯುವಾಗ ಒಂದನೇ ತಿಂಗಳ ಕಡೆಯಲ್ಲಿ ಸುಮಾರು ೩ ಔನ್ಸಿನಷ್ಟು ಕುಡಿಯುವುದು. ಮತ್ತೆ ೩—೪ ತಿಂಗಳುಗಳಲ್ಲಿ ಸಲಕ್ಕೆ ೫ ಔನ್ಸುಗಳ ವರೆಗೂ ಆ ಮೇಲೆ ೭ ಔನ್ಸುಗಳ ವರೆಗೂ ಕುಡಿಯುತ್ತದೆ. ಈ ಪ್ರಮಾಣಗಳೆಲ್ಲಾ ಅಂದಾಜಿನಿಂದ ಕಂಡುಹಿಡಿದವುಗಳು.

ಸ್ತ್ರೀಯರ ಎದೆಹಾಲಿನಲ್ಲಿ ಅವರವರ ದೇಹಸ್ಥಿತಿಗಳನ್ನನುಸರಿಸಿ ಗುಣದೋಷಗಳುಂಟು. ಒಂದೇ ಹೆಂಗಸಿನ ಹಾಲಿನಲ್ಲಿ ಅವಳ ಆಹಾರವಿಹಾರಕ್ರಮವನ್ನನುಸರಿಸಿ ಹಾಲಿನ ಗುಣ ಹೆಚ್ಚು ಕಡಮೆಯಾಗಬಹುದು. ಸಾಧಾರಣವಾಗಿ ಹಾಲಿನಲ್ಲಿರುವ ಸಕ್ಕರೆ ಮತ್ತು ಲವಣಗಳು ಒಂದೇ ರೀತಿಯಿಂದಿರುತ್ತವಾದರೂ ಕೊಬ್ಬು ಮತ್ತು ಪ್ರೊಟೀಡ್ ಎಂಬ ದೇಹಪೋಷಣೆಗೆ ಅಗತ್ಯವಾದ ವಸ್ತುಗಳು ಕಡಮೆ ಕಾಣುವುವು. ಇವುಗಳ ಪ್ರಮಾಣ ಹೆಚ್ಚುಕಡಮೆಯಾದರೆ ಆ ಹಾಲು ಮಕ್ಕಳಿಗೆ ಒಗ್ಗುವುದಿಲ್ಲ.

ಪ್ರೊಟೀಡ್ ಮತ್ತು ಕೊಬ್ಬಿನ ಅಂಶವು ಹೆಚ್ಚುಕಡಮೆಯಾದಾಗ ಮಗುವಿಗೆ ಮಲಬದ್ಧತೆ, ಅಜೀರ್ಣ ಮೊದಲಾದ ಕರುಳಿಗೆ ಸಂಬಂಧಿಸಿದ ವ್ಯಾಧಿಗಳು ತಲೆದೋರಿ ಹಾಲು ಕುಡಿಯುತ್ತಿರುವ ಮಗುವಿನ ಶರೀರವು ಸಾಕಷ್ಟು ಬೆಳೆದಿರುವುದಿಲ್ಲ. ಇಂತಹ ಸಂದರ್ಭದಲ್ಲಿ ತಾಯಿಯು ಚಿಕಿತ್ಸೆಯ ಮೂಲಕ ಸ್ತನ್ಯವನ್ನು ಶುದ್ಧಪಡಿಸಿಕೊಳ್ಳುವುದು ಉತ್ತಮ.

ಮಗುವಿನ ಮಲವು ಬಿಳುಪಾಗಿದ್ದು, ಆಗಾಗ್ಗ ಅಜೀರ್ಣವಾಗಿ ಮೊಸರಿನಂತೆ ಕಕ್ಕುತ್ತಿದ್ದರೆ ಆಗ ಸ್ತನ್ಯದಲ್ಲಿ ಪ್ರೊಟೀಡು ಹೆಚ್ಚಾಗಿದೆಯೆಂದು ತಿಳಿಯಬಹುದು. ಕೆಲವು ಹೆಂಗುಸರ ಹಾಲಿನಲ್ಲಿ ಸ್ವಭಾವತಃ ಪ್ರೊಟೀಡು ಹೆಚ್ಚಾಗಿರುತ್ತದೆ. ಅಂತಹ ಹಾಲನ್ನು ಕೊಡಬಾರದು. ಮತ್ತು ಹೊತ್ತುಗೊತ್ತಿಲ್ಲದೆ ಹಾಲು ಉಣಿಸುವುದರಿಂದಲೂ ಈ ಸ್ಥಿತಿ ಬರುವುದು. ಪ್ರೊಟೀಡಿನ ಭಾಗವು ಹೆಚ್ಚಾಗಿ ಮೇಲೆ ಹೇಳಿದ ರೋಗ ಲಕ್ಷಣಗಳು ಕಂಡುಬಂದರೆ ಹಾಲು ಕೊಡುವ ಸಮಯವನ್ನು ಕುಸು ತಡ ಮಾಡಬೇಕು. ಒಂದು ಸಲಕ್ಕೂ ಮತ್ತೊಂದು ಸಲಕ್ಕೂ ಹೆಚ್ಚು ಹೊತ್ತು ಎಡೆಬಿಡಬೇಕು. ಅಲ್ಲದೆ ತಾಯಿಯು ಮೈಗೆ ವ್ಯಾಯಾಮವಾಗುವಂತೆ ಏನಾದರೂ ಕೆಲಸ ಮಾಡುತ್ತಿರಬೇಕು. ಮತ್ತು ನಂಜು ಇರುವ ಅಜೀರ್ಣಕಾರಕಗಳಾದ ಆಹಾರವನ್ನು ಸೇವಿಸಬಾರದು. ಹಾಲು ಕೊಡುವ ಮೊದಲು ಮಗುವಿಗೆ ಒಂದು ಚಮ್ಚೆ ನೀರನ್ನು ಕುಡಿಸುವುದು ಒಳ್ಳೆದು.

ಹಾಲು ನೀರಾಗಿದ್ದು ಅದನ್ನು ತಿಂದ ಮಗುವಿಗೆ ಹೊಟ್ಟೆಯುಬ್ಬರ ಉಂಟಾದರೆ ಅದರಲ್ಲಿ ಕೊಬ್ಬುಗಳು ಕಡಮೆಯಾಗಿವೆಯೆಂದು ತಿಳಿಯಬೇಕು. ಇದಕ್ಕೆ ದೇಹಾರೋಗ್ಯ ಸರಿಪಡಿಸಿಕೊಂಡು ತಾಯಿಯು ಒಳ್ಳೇ ಪುಷ್ಕಿಕರವಾದ ಆಹಾರವನ್ನು ಸೇವಿಸಿ ಸ್ತನ್ಯವನ್ನು ಸರಿಪಡಿಸಿಕೊಳ್ಳಬೇಕು. ಸ್ತನ್ಯದಲ್ಲಿ ಕೊಬ್ಬು ಹೆಚ್ಚಾಗಿದ್ದರೆ ಮಗುವಿಗೆ ವಿಶೇಷ ದೋಷವೇನೂ ಆಗದಿದ್ದರೂ ಮಗು ಒಮ್ಮೊಮ್ಮೆ ವಾಂತಿ ಮಾಡುವುದು. ಅದನ್ನರಿತುಕೊಂಡು ನಿವಾರಿಸಬೇಕು.

---

3 ಸಹಾಯಕಗಳು 1936ರ ನಿಮ್ಮ ವಿಜಯಕ್ಕೆ

1936 ನಿಮ್ಮ ಪ್ರಗತಿಯ ವರ್ಷವಾಗಿರಲಿ

1936ರ ಉಳಿದ ಭಾಗದ ವಾರ್ಷಿಕ ವಿವರಗಳು.

ನಿಮ್ಮ ಉದ್ಯೋಗ, ಸಂಪತ್ತು, ಆರೋಗ್ಯ, ಮನೆ, ಪ್ರೇಮ, ಭಾಗ್ಯ ಇವುಗಳ ವರ್ಷದ ಪ್ರತಿಯೊಂದು ಮಾಸದ ಅನುಕೂಲ ಮತ್ತು ಪ್ರತಿಕೂಲದ ತಾರೀಕುಗಳು 1936ನೇ ವರ್ಷದ ನಿಶ್ಚಿತ ತಾರೀಕುಗಳೊಡನೆ ನಿವರಿಸಲ್ಪಟ್ಟು ಮಾಸ ಮತ್ತು ವಾರ ಭವಿಷ್ಯಗಳನ್ನು ಕೊಡುತ್ತದೆ. ನಿಮ್ಮ ಜನನತಾರೀಕನ್ನು ತಿಳಿಸಿರಿ. ಕೃಯು ರೂ. 2 ಮಾತ್ರ.

ಮೂನ್ ಟೇಬಲ್ ಗ್ಯಾಡ್ 1936ಕ್ಕೆ

ಈ ಚಿಕ್ಕ ಪುಸ್ತಕದಲ್ಲಿ 1936ನೇ ವರ್ಷದ ಪ್ರತಿಯೊಂದು ದಿನದ ಚಂದ್ರನ ಸ್ಥಾನವು ಕೊಡಲ್ಪಟ್ಟಿದ್ದು ನಿಮ್ಮ ಜೀವನದ ಮುಖ್ಯ ಘಟನೆಗಳಿಗೆ ಬೇಕಾದ ಶುಭದಿನಗಳನ್ನು ತೋರಿಸುತ್ತದೆ. ಇದರಲ್ಲಿ 1936ರ ಹಿಂದೂಸ್ಥಾನದ ಭವಿಷ್ಯವೂ ಇದೆ. ಬಹಳ ಪ್ರಯೋಜನಕಾರಿ. ಕೃಯು ಆ. 4 ಮಾತ್ರ.

ಕಬಾಲಾ ರಕ್ಷೆ 1936ಕ್ಕೆ

ಇದು ತಾಜಾ ಬೆಳ್ಳಿಯಲ್ಲಿ ಗ್ರಹಗಳ ಚಿಹ್ನೆಗಳೊಡನೆ ಮಾಡಲ್ಪಟ್ಟಿದೆ; ಈ ಶುಭ ರಕ್ಷೆಯು ನಿಮ್ಮ ಔದ್ಯೋಗಿಕ, ಸಾಂಪತ್ತಿಕ ಮತ್ತು ಆರೋಗ್ಯದ ವಿಷಯಗಳಲ್ಲಿ ಅಷ್ಟು ಗ್ರಹಗಳ ಬಾಧೆಯನ್ನು ನಿವಾರಿಸಿ ನಿಮಗೆ ಶುಭವನ್ನುಂಟುಮಾಡುತ್ತದೆ. ಒಂದನ್ನು ಧರಿಸಿ ಮತ್ತು 1936ರಲ್ಲಿ ಭಾಗ್ಯಶಾಲಿಗಳಾಗಿರಿ. ಕೃಯು ರೂ. 2—6—0.

ಹೆಚ್ಚಿನ ವಿವರಗಳು ಉಚಿತ.

Please conduct all correspondence in English only. The reading will be sent in English only.

PROFESSOR SEKHAR,
B.A. (Wash) M.I.B.M. (U.S.A.),
THE GREAT MESMERIST,
ELLORE,
(WEST GODAVARI DISTRICT).

ವೈದ್ಯವಿಶಾರದ ಎಚ್. ತಿಮ್ಮಪ್ಪ ಪಂಡಿತ, ಪ್ರೊಪ್ರೈಟರ್.

ಆನಂದ ಚಂದ್ರೋದಯ ಆಯುರ್ವೇದಿಕ್ ಔಷಧಾಲಯ.

ಮಾರ್ಕೆಟ್ ರೋಡ್, ಹಂಪನಕಟ್ಟೆ, ಮಂಗಳೂರು.

ಸಚ್ಚಿದಾನಂದ ಚೂರ್ಣ.

ಎಲ್ಲಾ ತರದ ಪಿತ್ತರೋಗ, ಪಿತ್ತಪಾಂಡು, ಪಿತ್ತಕಾಮಿಲಾ ರೋಗಕ್ಕೆ

ಈ ರೋಗದಿಂದ ಉಂಟಾಗಿರುವ ಜಗೆ, (ಎದೆ ಹಾರುವದು) ಸಂದು ಸಂದುನೋವು, ಕೈ ಕಾಲು ಬಚ್ಚುವದು, ಓಡುವಾಗ ಮತ್ತು ಎತ್ತರ ಸ್ಥಳದಲ್ಲಿ ಹತ್ತಿ ನಡೆಯುವಾಗ ಉಂಟಾಗುವ ಆಯಾಸ, ಶೋಫ (ಶರೀರ ಬೀಗುವದು) ಶರೀರ ಬಿಳೀ ವರ್ಣವಾಗುವದು, ನಾಲಿಗೆ ಒಣಗುವದು, ನಾಲಿಗೆಯ ರುಚಿ ಕೆಡುವದು, ನಾಲಿಗೆ ಕಹಿ ಆಗುವದು, ಆಹಾರ ಬೇಡವಾಗುವುದು, ಅಜೀರ್ಣ ಉಂಟಾಗುವುದು, ತಲೆ ತಿರುಗುವದು ಕಣ್ಣುಕತ್ತಲೆ ಬರುವದು, ಕಿವಿಯಲ್ಲಿ ಗುಂ ಎಂತ ಶಬ್ದ ಉಂಟಾಗುವದು, ಮೈ ಪಸೆ ಇಲ್ಲದೆ ಒಣಗಿ ಹೋಗುವದು, ಹೊಟ್ಟೆಯಲ್ಲಿ ಬೆಂಕಿ, ಎದೆ ಗಂಟ್ಲು ಸುಡುವುದು, ಮಲಬದ್ಧತೆಯಾಗಿ ಮಲವು ಬಹು ಗಟ್ಟಿಯಾಗಿ ಹಿಕ್ಕೆಗಳಂತಿರುವದು, ಅಲಸ್ಯ, ಕೆಲಸಮಾಡಲಿಕ್ಕೆ ಮನಸ್ಸಿಲ್ಲದಿರುವದು, ಅಲ್ಲದೆ ಇನ್ನೂ ಈ ರೋಗದಿಂದ ಉಂಟಾಗುವ ಬೇರೆ ವಿಕಾರಗಳಿಂದ ದೇಹಾಂತ್ಯದ ವರೆಗೆ ನರಳುತ್ತಿರುವವರು ದೇಹಾಂತ್ಯದ ವರೆಗೆ ತಮ್ಮ ದೇಹಾರೋಗ್ಯವನ್ನು ರಕ್ಷಿಸಿಕೊಂಡು, ನಿರೋಗಿಗಳಾಗಿ ಇರಬೇಕೆಂತ ಆಪೇಕ್ಷಿಸುವವರಾದರೆ ಈ ನಮ್ಮ **ಸಚ್ಚಿದಾನಂದ ಚೂರ್ಣವನ್ನು** ಸೇವಿಸಿರಿ.

ಅತ್ಯುತ್ತಮ ಗುಣಕಾರಿಯಾದ ಈ ಔಷಧವನ್ನು ಅಪೇಕ್ಷಿಸುವವರು 7 ಯಾ 15 ದಿವಸಕ್ಕೆ ಬೇಕಾಗುವ 1 ಯಾ 2 ತೊಲೆ ತರಿಸಿಕೊಂಡು ಸೇವಿಸಿ ಪರೀಕ್ಷಿಸಿರಿ. ಅಷ್ಟರಲ್ಲಿಯೇ ಗುಣಾಂಶ ಕಂಡುಬಂದರೆ, ನಾವು ಹೇಳುವ ವರೆಗೆ ಸೇವಿಸಿ, ದೇಹಾರೋಗ್ಯವನ್ನು ಪೂರ್ಣ ಪಡೆಯಿರಿ. ಅನುಮಾನ ಕಂಡರೆ, ರೋಗಿಗಳು ಖುದ್ದು ನಮ್ಮ ಔಷಧಾಲಯಕ್ಕೆ ಬಂದು ತಮ್ಮ ಊಟದ ಖರ್ಚು ತಾವೇ ನೋಡಿಕೊಂಡು, 15 ದಿವಸ ಯಾ 1 ತಿಂಗಳ ಔಷಧಿಯನ್ನು ಮುಂಗಡವಾಗಿ ಹಣ ಕೊಡದೆನೇ ಸೇವಿಸಿ ಗುಣಾವಗುಣ ಪರೀಕ್ಷಿಸಿರಿ.

ಅಷ್ಟರಲ್ಲಿ ಗುಣಾವಗುಣ ಕಂಡುಬಾರದಿದ್ದರೆ, ಸೇವಿಸಿದ ಔಷಧಿಯ ಕ್ರಯ ಕೊಡುವ ಅಗತ್ಯವಿಲ್ಲ. ಅಷ್ಟರಲ್ಲಿ ಗುಣಾಂಶ ಎಂತ ಕಂಡುಬಂದರೆ, ನಾವು ಪ್ರಥಮ ಕೊಟ್ಟ ಔಷಧಿಯ ಕ್ರಯ ತೆರಬೇಕಾಗುವದಲ್ಲದೆ, ಅನಂತರ ನಾವು ಹೇಳುವ ಸಮಯದ ವರೆಗೆ ಬೇಕಾಗುವ ಮದ್ದಿನ ಕ್ರಯಕೊಟ್ಟು ಸೇವಿಸಬೇಕಾಗುವುದು.

ರೋಗಿಗಳು ತಮ್ಮಿಂದ ಕೈಲಾಗುವ ಕೆಲಸಗಳನ್ನು ಮಾಡುತ್ತಾ ಪಥ್ಯಾಪಥ್ಯದ ಭಯವಿಲ್ಲದೆ ಸೇವಿಸಿ ಗುಣಹೊಂದತಕ್ಕ ಸೇವನೆಗೆ ಹಿತಕರವಾದ ಕೈಕಂಡ ಔಷಧವಾಗಿರುತ್ತದೆ.

ಕ್ರಯ ತೊಲೆ 1ರ ಬರೇ 12 ಆಣೆ (0—12—0). ಒಂದು ತಿಂಗಳ ಔಷಧಿಗೆ ರೂ. 2—8—0.

ವಿವಿಧ-ವೃತ್ತ

ರಾತ್ಸ್ ಚೈಲ್ಡನೂ ಬೇಂಕ್ ಆಫ್ ಇಂಗ್ಲೆಂಡೂ.

ರಾತ್ಸ್ ಚೈಲ್ಡ್ ಬ್ರದರ್ಸ್‌ರವರು ಲೋಕದ ಸರ್ವಶ್ರೇಷ್ಠ ಧನಿಕರ ಸಾಲಿನವರು. ಇವರಲ್ಲಿ ನಾಟಾನ್ ರಾತ್ಸ್ ಚೈಲ್ಡನು ಲಂಡನ್ ಹೌಸಿನ ಮೂಲಕನು. ಒಮ್ಮೆ ರಾತ್ಸ್ ಚೈಲ್ಡಿನ ಒಂದು ಚೆಕ್ಕನ್ನು ಒಟಾಯಿಸಲಿಕ್ಕೆ 'ಬೇಂಕ್ ಆಫ್ ಇಂಗ್ಲೆಂಡು' ನಿರಾಕರಿಸಿ, ಪ್ರೈವೆಟ್ ಚೆಕ್ಕುಗಳು ಇಲ್ಲಿ ಒಟಾಯಿಸಲ್ಪಡುವುದಿಲ್ಲವೆಂದಿತ. ಇದರಿಂದ ರಾತ್ಸ್ ಚೈಲ್ಡನಿಗೆ ಸಿಟ್ಟೇರಿತು. ಒಂದು ದಿನ ರಾತ್ಸ್ ಚೈಲ್ಡನು ಬೇಂಕಿಗೆ ಬಂದು ಕೇಶಿಯರಸಿಗೆ ೫ ಪೌಂಡಿನ ನೋಟೊಂದನ್ನು ಕೊಟ್ಟು ಬದಲಿಗೆ ಬಂಗಾರದ ನಾಣ್ಯಗಳನ್ನು ಕೇಳಿದನು. ಕೇಶಿಯರನು ಬಂಗಾರದ ನಾಣ್ಯಗಳನ್ನು ಕೂಡಲೇ ಕೊಟ್ಟನು. ಆದರೆ, ರಾತ್ಸ್ ಚೈಲ್ಡನು ಇನ್ನೊಂದು ನೋಟು, ಮತ್ತೊಂದು ನೋಟು ಎಂಬಂತೆ ಅನೇಕ ನೋಟುಗಳನ್ನು ಹೊರತೆಗೆಯುತ್ತಲೇ ಇದ್ದನು.

ತಾಳವೃಕ್ಷದ ವೈಚಿತ್ರ್ಯ

ಐದು ಶಾಖೆಗಳುಳ್ಳ ಈ ತಾಳವೃಕ್ಷವು ತಿರುವಾಂಕೂರಿನ ವೆಟ್ಟಿಯಕಾಡು ಎಂಬಲ್ಲಿದೆ. ಕೆಲವು ಕಾಲದ ಹಿಂದೆ ಈ ಮರದ ಸುಮಾರು ೨೫ ಅಡಿ ಎತ್ತರದಲ್ಲಿ 'ಚಿಲ್ಲಿ' ಎಂಬ ಕೆಟ್ಟ ಹುಳು ಹಿಡಿದು ನೋಡುವವರಿಗಾ ಮರವು ಸತ್ತುಹೋದಂತೆಯೇ ತೋರುತ್ತಿತ್ತು. ಆದರೆ ಎಂತಹ ಆಶ್ಚರ್ಯ! ಆ ಐದು ಶಾಖೆಗಳೂ, ಇತರ ಎಲ್ಲ ಸೋಗೆಗಳೂ ಪುನಃ ಚಿಗುರಿ, ಆವೆಲ್ಲವುಗಳೂ ಈಗ ಫಲಕೊಡುತ್ತಿವೆ.

ಕೇಶಿಯರನು ನೋಟುಗಳನ್ನೆಣಿಸಿ ಎಣಿಸಿ ನಾಣ್ಯಗಳನ್ನು ಮೇಜಿನ ಮೇಲೆ ಸುರಿದಂತೆ ನೌಕರರು ಆಚೆಗೆ ಸಾಗಿಸುತ್ತಿದ್ದರು. ಬೇಂಕ್ ತೆರೆದ ಕೂಡಲೇ ಒಟಾಯಿಸಲಿಕ್ಕೆ ಸುರುಮಾಡಿದವನು ಸಂಜೆ ಬೇಂಕ್ ಮುಚ್ಚಲಿಕ್ಕಾಗುವಾಗ ೨೧,೦೦೦ ಪೌಂಡುಗಳನ್ನು ಒಟಾಯಿಸಿ ಪಡೆದನು. ಈ ಕೆಲಸದಲ್ಲಿ ರಾತ್ಸ್ ಚೈಲ್ಡನ ಬೇರೆ ಒಂಬತ್ತು ಮಂದಿ ನೌಕರರೂ ಸೇರಿದ್ದರಂತೆ. ಅಂತು ಒಂದು ದಿನದಲ್ಲಿ ೨೧೦,೦೦೦ ಪೌಂಡು ಚಿನ್ನವು ಬೇಂಕಿನಿಂದ ಖಾಲಿಯಾಯಿತು. ಆ ದಿನವಿಡೀ ಬೇಂಕಿನವರಿಂದ ಬೇರೆ ಕೆಲಸವನ್ನು ಮಾಡಲಾಗಲಿಲ್ಲ. ಮರುದಿನ ಪುನಃ ರಾತ್ಸ್ ಚೈಲ್ಡನು ಬಂದು ನಗುತ್ತಾ 'ನನ್ನ ಚೆಕ್ಕನ್ನು ಒಟಾಯಿಸಲು ನಿಮಗೆ ನಂಬಿಕೆಯಿಲ್ಲದಿದ್ದರೆ ನಿಮ್ಮ ನೋಟಿನ ನಂಬಿಕೆ ನನಗೇನು' ಎಂದು ತಮಾಷೆ ಮಾಡುತ್ತಾ ಒಟಾಯಿಸತೊಡಗಿದನು. ಹೀಗೆ ಒಟ್ಟು ಒಂದು ಕೋಟಿ ಹತ್ತು ಲಕ್ಷ ಪೌಂಡುಗಳನ್ನು ಒಟಾಯಿಸಿ ಬೇಂಕಿನವರೊಡನೆ ಮುಯ್ಯಿ ತೀರಿಸಿದನು. ಅಂದಿನಿಂದ ರಾತ್ಸ್ ಚೈಲ್ಡನ ಚೆಕ್ಕುಗಳನ್ನು ಬೇಂಕಿನವರು ಒಟಾಯಿಸಬಹುದೆಂದು ಪ್ರಕಟಣ ಕೊಟ್ಟರು.

* * * *

ದನದ ಹೊಟ್ಟೆಯಲ್ಲಿ ಗಡಿಯಾರ ನಡೆಯುತ್ತಿತ್ತು.

ಕೆಲವು ವರ್ಷಗಳ ಮೊದಲು ಅಮೇರಿಕದ ಅಯೋವಾ ಎಂಬ ಸ್ಥಳದ ಒಬ್ಬ ಒಕ್ಕಲಿಗನು ಹಟ್ಟಿಯಲ್ಲಿ ಕರು ಕಟ್ಟುವ ಗೂಟಕ್ಕೆ ತನ್ನ ಅಂಗಿಯನ್ನು ತೂಗಾಡಿಸಿ ತನ್ನ ಕೆಲಸದ ಮೇಲೆ ಹೋಗಿದ್ದನು. ಬಳಿಯಲ್ಲೇ ಇದ್ದ ದನದ ಕರುವು ಅಂಗಿಯ ಕಿಸೆಯನ್ನು ಹರಿದು ತಿನ್ನುವಾಗ ಆ ಕಿಸೆಯಲ್ಲಿದ್ದ ಸಣ್ಣ ಗಡಿಯಾರವೊಂದು ಕರುವಿನ ಹೊಟ್ಟೆಗೆ ಹೋಯಿತು. ಏಳು ವರ್ಷಗಳ ಅನಂತರ ದೊಡ್ಡದಾದ ಆ ದನವನ್ನು ಕಸಾಯಿಗಳಿಗೆ ಆ ಒಕ್ಕಲಿಗನು ಮಾರಿದನು. ಕಸಾಯಿಯು ಮಾಂಸಮಾಡುವಾಗ ದನದ ಶ್ವಾಸಕೋಶದೊಳಗೆ ಗಡಿಯಾರ ದೊರಕಿತು. ಗಡಿಯಾರವು ಆಗಲೂ ನಡೆಯುತ್ತಿದ್ದು ಸ್ಟೆಂಡಾರ್ಡ್ ಗಂಟೆಗೆ ನಾಲ್ಕು ಮಿನಿಟು ಹಿಂದಕ್ಕಿತ್ತು. ದನವು ಉಸಿರಾಡುತ್ತಿದ್ದಾಗ ಉಬ್ಬಿ ಒತ್ತಿದಂತಾಗುತ್ತಿದ್ದ ದನದ ಶ್ವಾಸಕೋಶವು ಗಡಿಯಾರದ ಕೀಯನ್ನು ತಿರುಗಿಸುತ್ತಿದ್ದುದರಿಂದ ಗಡಿಯಾರವು ನಡೆಯುತ್ತಿತ್ತೆಂದು ತಿಳಿದು ಬಂದಿದೆ.

* * * *

ಇಜಿಪ್ತದಲ್ಲಿ ಪಿರಮಿಡು (ಸಮಾಧಿ)ಗಳಲ್ಲಿ ದೊಡ್ಡದಾದುದು ೫,೦೦೦ ವರ್ಷಗಳ ಹಿಂದೆ ಕಟ್ಟಲಾಯಿತು. ಅದರ ಒಂದೊಂದು ಬದಿಯು ೭೬೪ ಅಡಿ ಎತ್ತರವಿದೆ. ೮೦ ಮಿಲಿಯ ಘನ ಪೂಟುಗಳ ವ್ಯಾಪ್ತಿಯುಳ್ಳ ಈ ಕಟ್ಟಡವನ್ನು ತೂಕಮಾಡಿದರೆ ಅರ್ಧತ್ತೆಂಟು ಲಕ್ಷ ಖಂಡಿ ಭಾರವಾದೀತು. ಇದೊಂದೇ ಕಟ್ಟಡವನ್ನು ಬಿಚ್ಚಿ, ೮೦ ಅಡಿ ಉದ್ದಗಲದ ೨೨,೦೦೦ ಮನೆಗಳನ್ನು ಕಟ್ಟಬಹುದು. ಇವುಗಳಲ್ಲಿನ ಕಲ್ಲುಗಳನ್ನು ಒಂದಕ್ಕೊಂದು ಜೋಡಿಸಿ ಒಂದೇ ಸಾಲಾಗಿ ೧೭,೦೦೦ ಮೈಲು ದೂರದ ತನಕ ಇಡಬರುವುದು. ಒಂದು ಲಕ್ಷ ಜನರು ಇಪ್ಪತ್ತು ವರ್ಷ ಕೆಲಸ ಮಾಡಿ, ಈ ಸಮಾಧಿ ಗೃಹವನ್ನು ರಚಿಸಿದರು.

* * * *

ಪ್ರಾಣಿವರ್ಗದಲ್ಲಿ,— ಜೇಡರಹುಳುಗಳು ಒಂದೆರಡು ವರ್ಷ ಬಾಳುವುವು. ಜೇನುಹುಳುಗಳಲ್ಲಿ ರಾಣಿಯು ೫ ವರ್ಷವೂ, ಇತರ ಹುಳುಗಳು ಒಂದೂವರೆ ತಿಂಗಳು ಮಾತ್ರವೂ ಬಾಳುವುವು. ಇರಿವೆಗಳು ೧೫ ವರ್ಷ, ಕಪ್ಪೆ ನಲ್ವತ್ತು ವರ್ಷ ಬದುಕುವುವು. ೪೫೦ ವರ್ಷ ಬದುಕಿದ ಆವೆಗಳುಂಟು. ಕೋಳಿಯು ೧೫-೨೦ ವರ್ಷಗಳೂ, ಹಂಸವು ೧೦೨ ವರ್ಷವೂ, ಬಕವು ೭೦ ವರ್ಷವೂ, ಗಿಳಿಯು ೧೦೦ ವರ್ಷವೂ ಬದುಕಿದ್ದುದೂ ಇದೆ. ಕುದುರೆಗಳು ೪೦-೬೦ ವರ್ಷಗಳ ತನಕವೂ, ಕುರಿ ೨೦ ವರ್ಷವೂ, ನಾಯಿ ೨೮ ವರ್ಷವೂ, ಬೆಕ್ಕು ೨೨ ವರ್ಷವೂ, ಆನೆ, ತಿಮಿಂಗಿಲಗಳು ೨೦೦ ವರ್ಷ ಕಾಲಕ್ಕೂ ಬದುಕಿದ ರುಜುವಾತು ಇದೆ.

ವಿಜ್ಞಾನ ವಿಷಯ

"ವಿಜ್ಞಾನಿ"

ವೈಜ್ಞಾನಿಕ ಕೃಷಿಯಂತ್ರ (ನೇಗ್ತಿಲು)

ಭಾರತವರ್ಷದ ಕೃಷಿಯಲ್ಲಿ ಉನ್ನತಿಯಾಗಬೇಗಾದರೆ ವೈಜ್ಞಾನಿಕ ಸಾಧನೋಪಕರಣಗಳನ್ನು ಉಪಯೋಗಿಸಬೇಕೆಂದು ಆಗಾಗ ಹೇಳಬೇಕಾಗಿಲ್ಲ. ವೈಜ್ಞಾನಿಕ ಉಪಕರಣಗಳನ್ನು ಉಪಯೋಗಿಸಿದರೆ ಯುರೋಪು, ಅಮೇರಿಕ, ಜಾಪಾನುಗಳಂತೆ ನಾವು ಕೂಡಾ ಕೃಷಿಕರ್ಮದಲ್ಲಿ ಮುಂದುವರಿಯಬಹುದು. ವಿಜ್ಞಾನದ ಬಲದಿಂದ ವರ್ಷಕ್ಕೊಂದು ಬೆಳೆಯಾಗುವ ಭೂಮಿಯಲ್ಲಿ ಮೂರು ಬೆಳೆ ಮಾಡಲು ಸಾಧ್ಯವಿದೆ. ಪೂಸಾ, ಡಾಕಾ, ಕೊಯಮುತ್ತೂರು ಮೊದಲಾದೆಡೆಗಳಲ್ಲಿ ವೈಜ್ಞಾನಿಕ ಕೃಷಿಕರ್ಮಗಳನ್ನು ಕಲಿಸುವ ಕಾಲೇಜುಗಳಿದ್ದರೂ ಸಾಕಷ್ಟು ಪ್ರಯೋಜನವನ್ನು ಜನರು ಪಡೆಯುವುದಿಲ್ಲ.

ಅತ್ಯಂತ ಚಿಕ್ಕ ಕ್ಯಾಮೆರಾ

ಒಬ್ಬ ಹೆಂಗಸಿನ ಕೊಡೆಯ ಹಿಡಿಯಲ್ಲಿ ಹಿಡಿಯುತ್ತಿದೆ; ಬ್ರಿಟಿಷ್ ಕೈಗಾರಿಕೆಯ ಪ್ರದರ್ಶನದಲ್ಲಿ ತೋರಿಸಲಾದ ಸಾಧನಗಳಲ್ಲಿ ಇದೂ ಒಂದು.

ನಮ್ಮ ದೇಶದ ಹಳೇ ಕ್ರಮದ ಮರದ ನೇಗಿಲು ಸರ್ವಾಂಗಸಂಪೂರ್ಣವಾಗಿಲ್ಲ. ಅದರಲ್ಲಿ ಅನೇಕ ಕೊರತೆಗಳಿವೆ. ಈ ನೇಗಿಲುಗಳಿಂದ ಗದ್ದೆಯುತ್ತು ಲಾಭಪಡೆಯುವುದು ಕಷ್ಟಕರ. ಮರದ ನೇಗಿಲಿಂದ ಉತ್ತರಿ ಗದ್ದೆಯ ಮಣ್ಣು ಒಂದೆರಡಂಗುಲ ಆಳದಷ್ಟು ಕೂಡ ತಿರುವಿಬೀಳುವುದಿಲ್ಲ. ಅಲ್ಲದೆ ಕುದುರೆಗಳನ್ನೋ ಬಲಶಾಲಿಗಳಾದ ಕೋಣಗಳೆನ್ನೋ ಈ ನೇಗಿಲುಗಳಿಗೆ ಕಟ್ಟಲೂ ಸಾಧ್ಯವಿಲ್ಲ. ಎಳಲಿಕ್ಕೆ ಕೂಡದ ಹೋರಿಗಳಿಗೆ ಈ ಮರದ ನೇಗಿಲು ಹದ.

ಕಿರ್ಲೋಸ್ಕರ ಮೊದಲಾದ ಕಂಪೆನಿಗಳು ಶಾಸ್ತ್ರೀಯ ರೀತಿಯಿಂದ ತಯಾರಿಸಿದ ಕಬ್ಬಿಣದ ನೇಗಿಲುಗಳನ್ನು ಇನ್ನೂ ನಮ್ಮ ಹಳ್ಳಿಯ ರೈತರು ಉಪಯೋಗಿಸಲು ಕಲಿತಿಲ್ಲವೆಂಬುದು ವಿಷಾದಕರ. ಕಬ್ಬಿಣದ್ದೂ ನೇಗಿಲುಗಳು ಇಂಡಿಯದ ಯಾವ ಭಾಗದಲ್ಲಿ ಬೇಕಾದರೂ ದೊರಕುತ್ತವೆ. ಮಾತ್ರವಲ್ಲ, ಮಳೆದ ನೇಗಿಲಿಗಿಂತ ಬಾಳಿಕೆಬರುತ್ತದೆ. ವಿಶೇಷ ಭಾರವೂ ಇಲ್ಲ. ಗದ್ದೆಯ ಮಣ್ಣನ್ನು ಬೇಕಾದಷ್ಟು ಆಳಕ್ಕೆ ತಿರುವಿಹಾಕುತ್ತವೆ. ಆದುದರಿಂದ ಪ್ರತಿಯೊಬ್ಬನೂ ಕಬ್ಬಿಣದ ಶಾಸ್ತ್ರೀಯ ರೀತಿಯ ನೇಗಿಲನ್ನು ಉಪಯೋಗಿಸಬೇಕು.

× × × × ×

ಮಾರ್ಗ ಗುಡಿಸಲಿಕ್ಕೆ ಸೂಜಿಕಲ್ಲಿನ ಯಂತ್ರ.

ಅಮೇರಿಕದ ಮಿಶಿಗನ್ ದೇಶದಲ್ಲಿ ತಯಾರಿಸಿದ ಒಂದು ಸೂಜಿಕಲ್ಲಿನ ಯಂತ್ರವಿದೆ. ಇದು ಮಾರ್ಗದ ಮೇಲೆ ಬಿದ್ದಿರುವ ಕಬ್ಬಿಣದ ಆಣಿ ಮೊದಲಾದ ವಸ್ತುಗಳನ್ನು ಇತರರಿಗೆ ತೊಂದರೆಯಾಗದಂತೆ ಗುಡಿಸುತ್ತದೆ. ಈ ಮೆಶಿನು ದಿನಕ್ಕೆ ಸುಮಾರು ೪೫ ಮೈಲು ಸುತ್ತುತ್ತದೆ. ಮತ್ತು ವಾರದಲ್ಲಿ ಅರ್ಧ ಟನ್ನಿಗಿಂತ ಹೆಚ್ಚು ಲೋಹದ ಚೂರುಗಳನ್ನು ಸಂಗ್ರಹಿಸುತ್ತದೆ. ಹೀಗೆ ಸಂಗ್ರಹಿಸಿದ್ದಲ್ಲಿ ಒಮ್ಮೆ ಒಂದು ದೊಡ್ಡ ಕತ್ತರಿ ಕೂಡ ಇತ್ತಂತೆ.

× × × × ×

ಉಡುವ— ಹೊದೆಯುವ ವಸ್ತ್ರದಲ್ಲಿ ವಿದ್ಯುಚ್ಛಕ್ತಿ.

ಅತಿ ಶೀತಪ್ರದೇಶದಲ್ಲಿ ವಾಸಿಸುವವರಿಲ್ಲವೇ ಕೆಲಸ ಮಾಡುವ ಜನರಿಗೆ ಶೀತಬಾಧೆಯಿಂದ ತಡೆಯಲು ಬೇಕಾದಷ್ಟು ಸಮಪ್ರಮಾಣದಲ್ಲಿ ವಿದ್ಯುತ್ತಿನ ಬಿಸಿಯೊದಗುವಂತೆ ಮಾಡುವ ವಿದ್ಯುದ್ವಸ್ತ್ರಗಳು ತಯಾರಾಗಿವೆ. ಇನ್ನು ಶೀತ ಬಾಧೆಯ ಭಯವಿಲ್ಲ. ಇದೇ ರೀತಿ ಕೆಸರಾದ ವಸ್ತ್ರಗಳನ್ನೂ ಪಾತ್ರೆಗಳನ್ನೂ ವಿದ್ಯುತ್ತಿನ ಮೂಲಕ ನಿರ್ಮಲಮಾಡಬಹುದು.

ಕೋರ್ಟು ಕಚೇರಿಗಳು, ಶಾಲಾ ಕೊಲೇಜುಗಳು ಬೋರ್ಡು, ಮುನಿಸಿಪಾಲಿಟಿಗಳು, ರೈತ, ವರ್ತಕರು ಇತ್ಯಾದಿ ಎಲ್ಲಾ ಇಲಾಖೆಯವರೂ ಉಪಯೋಗಿಸುತ್ತಿರುವರು.

ಅಂದ ಮೇಲೆ ನೀವೂ ನಿಮ್ಮ ಸೌಕರ್ಯಕ್ಕಾಗಿ ನಮ್ಮ 'ಯುಟಿಲಿಟಿ' ಸ್ಟ್ಯಾಂಪನ್ನು ಏಕೆ ಉಪಯೋಗಿಸಬಾರದು? ಈ ಒಂದೇ ರಬ್ಬರು ಮೊಹರಿನಿಂದ ನಿಮ್ಮ ಎಲ್ಲಾ ಕೆಲಸಗಳೂ ಸುಲಭವಾಗಿ ಆಗುವುವು.

ದಿ ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ,

ವಿವಿಧ ರಬ್ಬರು ಮೊಹರುಗಳನ್ನೂ, ಕೆತ್ತನೆ ಕೆಲಸಗಳನ್ನೂ, ಪೈಂಟಿಂಗನ್ನೂ ಮಾಡುವವರು,

ಬಲ್ಮಠ ರಸ್ತೆ, ಮಂಗಳೂರು.

ನಾವು ಫೌಂಟನ್ ಪೆನ್ನುಗಳನ್ನು ರಿಪೇರಿ ಮಾಡಿಕೊಡುತ್ತೇವೆ.

Jai Vijaya Insurance Company, Limited.

Head Office:—16 LINGHI CHETTY STREET, POST BOX 251, MADRAS.

Jai Vijaya the most scientific and one of the best Companies of the east coast is famous for its strong directorate, efficient management, low and easy monthly payments suitable to poor and middle class people. This ideal life office is the only one which issues policies for Rs. 250 and multiples thereof.

MOST ATTRACTIVE BONUS.

A rebate of Rs. 2½% on yearly payment of premiums. Ask for particulars of Table IX.

WANTED

Wanted immediately Taluk Chief Agents on a monthly salary of Rs. 60. Only men of position and influence need apply.

For particulars write to:—**B. S. RAI,** *Organiser,*
Jai Vijaya Insurance Coy., Ltd., P. O. FARANGIPET, S. Kanara.

OMNIUM-GATHERUM.

Sir,

Some questions addressed to me appeared in the columns of your paper dated 19—6—1936 asking me to answer the same.

The following are my answers to the said questions, which please publish in the columns of your paper. I could not answer them earlier as I was out of Mangalore.

1. The 1st question is why I entered the Council when the Congress boycotted the same. I have already answered the same in my reply to Mr. Shiva Rao's letter. I sought election to the Council because I felt that it was dangerous to boycott the legislature as it would prove a dangerous instrument in the hands of self seekers. Therefore I disagreed with the Congress on this question and rightly too, as congressmen themselves admit now.

2. The second question is as to whether I worked against any congress candidate during the last District Board Elections. My answer is that I have not worked against any congress candidate. I learn that some letters written by me to one or two agents of mine freeing them from their obligation to work for me, is what is referred to in this question. It was represented to me when I was not to stand for Beltangady and some other independent candidate who thought of standing approached my agents for their services that they wanted a letter from me to say that they could work for him and that they are free from their obligation to work for me. They are after all men to be paid for their services, and when I was not going to stand, they should be freed from the obligation to me so that they might earn something from others. So I wrote to them freeing them from their obligation to me. I may also say that at the time Mr. B. Mangesh Rao, the other candidate who actually stood for election for the same seat was not a congressman, he having withdrawn his candidature by a letter as a congress candidate and I was assured that there was No. 2nd letter withdrawing his 1st letter of withdrawal and agreeing to stand as a congress candidate and I was further informed that the Civic Board did not want to put up a candidate against him, though he was an independant candidate. Under these circumstances the letters were written.

3. Whether I tried to be appointed as a public prosecutor in about 1932.—Yes, I did try. I was not in the congress then; and I don't think that there was anything wrong in my trying to get the Public Prosecutorship.

4. Whether I was a member of the Silver Jubilee Committee and King George V Memorial Committee.—I was a member of the Silver Jubillee Committee having been elected to it before I became a congressman. The Congress having banned it, I did not resign on joining the Congress. As for the Memorial Committee, I don't know how my name happens to come in. I never attended any meeting. I am not responsible for others put in my name.

U. C. S. Bhatt.

* * * *

Fly-catcher on the Screen or the Coming Teacher.

Hail Fly-catcher! may his tribe increase! Hitherto twice-blessed was he! For his vaporous meditations did never injure the fly nor did they injure him. Fly-catching is really a happy pastime, because it helps to kill time. To kill time is no joke! Because time is supposed to be the fourth dimension. Man in his limited sphere has only been able to shape and mould to his sweet will all objects of three dimensions. The fourth had yet baffled his limited capacity and at last it was discovered that time was the fourth dimension. Anybody who has the capacity to kill time which hangs heavily on him is a super man indeed! These powers man cannot possess without much effort. He has to pass a stringent ordeal after much apprenticeship. During this apprenticeship he may have to undergo many calamities. He may discard his wife or may be discarded by her. Both mean the same thing for him. He may have to travel far and wide poking his nose over which are balanced gold-rimmed spectacles; he may have to study the question of different varieties of flies like tse tse fly. He may have to join philanthropic societies as a member at will, either himself taking french leave or the societies may get annoyed with his murderous intentions of killing time. Rich in such experience gathered at the expense of his patrimony, he may revert to his native land to resort to his innocent pastime, by lounging on somebody's easy chair, on somebody's pial.

He occupies the rear position of the coming teacher to set right the world and many flock to hear these thoughts written in his inimitable style for the delectation of the few who worship him as an avatar and print his fulminations with avidity in papers of his ilk. Mistakes do creep in sometimes when he lives his spiritual world and descends to this mundane world and brings in accusations about somethings reported to him. But when his statements are liable to reach the party concerned he at once with characteristic generosity withdraws them and says that they referred to events of the past which may even mean his past birth. Such an ornament is he to society. Hence I again say 'may his tribe increase!'

* * * *

Proceedings of the meeting of the King George V Memorial Fund Committee held at 11 A. M., on wednesday, the 1st July 1936.

1. Resolved that Messrs. P. Narayana Gowda and K. Kumaran Unhi be taken as members of the Committee.

2. Read letter of 11—6—'36 from the Secretary of the Central Committee.

3. Resolved that the temporary clerk be retained till 31-8-'36.

4. Resolved that the heads of all educational institutions and Secretaries and Presidents of Clubs who are willing to arrange benefit performances be taken as Sub Committee members for that purpose. Resolved also that the undermentioned members be taken in the Sub Committee.

Mr. & Begum Mir Amiruddin; Mr. Kumaran Unhi; Mr. C. L. Lobo; Mr. B. Madhava Rao; Mr. M. K. Nambiar; Mr. Charsley; Mr. Kirwan; Mr. V. Karunakara Menon; Mr. Kannappa, D. E. O.; Mr. Venkatesh Pai; Dr. L. P. Fernandez; Mrs. Nery.

5. Resolved that Mr. Venkatesh Pai be thanked for the remittance of Rs. 68/- which he collected from the subscribers as per list.

6. Resolved that at the next meeting of the Committee the President should put up for the approval of the Committee a draft letter to the Honorary Secretary of the Central Committe requesting that for the urgent Hospital requirements in this District 80% of our collections be given to us instead of mere interest on an investment.

7. Resolved that M. R. Ry. Dewan Bahadur B. Mahabala Hegde Avl. be thanked for his having made a further remittance of Rs. 136—10—0 towards the Fund.

8. Resolved that M. R. Ry. F. Lobo Avl. be thanked for his having been making continuous remittances to the Bank towards the Fund, his collections so far being Rs. 405/—

9. Resolved that the next meeting be held at 4-30 P. M. on Saturday, the 18th July 1936.

ಹಾಸ್ಯಾರ್ಣವ

ಮಿತ್ರ:—ಮೊನ್ನೆಯ ಪತ್ರಿಕೆಯಲ್ಲಿ ನಿನ್ನ ದೊಂದು ಲೇಖನವನ್ನು ನಾನು ಓದಿದ್ದೆನು; ಅದು ಒಳ್ಳೇದಿತ್ತು.

ಲೇಖಕ:—ಒಳ್ಳೇದಿರಬಾರದಿತ್ತೇ?

ಮಿತ್ರ:—ಹಾಗಲ್ಲ! ನೀವು ಅದನ್ನು 'ಆಧಾರದಿಂದ' ಎಂದು ಬರೆದಿರುವಿರಲ್ಲ, ಯಾವುದರ ಆಧಾರದಿಂದ?

ಲೇಖಕ:—ಅದೋ? ನನ್ನ ಮೇಜಿನ ಆಧಾರದಿಂದ.

× × × × ×

ಉಪಾಧ್ಯಾಯ:—ಭೀಷ್ಮನು ಸರಳ ಮಂಚದಲ್ಲಿದ್ದರೂ ಏಕೆ ಸಾಯುಲಿಲ್ಲ?

ಡಾಕ್ಟರರ ಮಗ ರವೀಂದ್ರ:—ಅವನು ಯಾವ ಡಾಕ್ಟರುಗಳಿಂದಲೂ ಮದ್ದು ತೆಗೆದು ಕೊಳ್ಳಲಿಲ್ಲ ಸರ್!

× × × × ×

ಮಗ:—(ಪಚ್ಚೆ ಬಣ್ಣದ ಹುಡಿಯನ್ನು ತಂದು) ಅಮ್ಮಾ! ಇದನ್ನು ಎಲ್ಲಾ ಕಾಯಿಪಲ್ಯದ ಪದಾರ್ಥಗಳಿಗೆ ಉಪಯೋಗಿಸಬೇಕು.

ತಾಯಿ:—ಇಸ್ಸಪ್ಪಾ! ಪದಾರ್ಥಗಳಿಗೆ ಬಣ್ಣ ಹಾಕುತ್ತಾರೆಯೇ? ಅದು ನಿನ್ನ ಡ್ರೋಯಿಂಗ್ ಏನು?

ಮಗ:—ಹಾಗಲ್ಲವಮ್ಮಾ! ತರಕಾರಿಯು ಪಚ್ಚೆ ಬಣ್ಣದಲ್ಲಿ ಪೌಷ್ಟಿಕವಾದ, ಮತ್ತು ನಮ್ಮ ದೇಹಕ್ಕೆ ಅತ್ಯಗತ್ಯವಾದ 'ವಿಟೆಮಿನ್' ಎಂಬ ಪದಾರ್ಥ ಉಂಟೆಂದು ಮೇಸ್ತ್ರು ಹೇಳಿದ್ದಾರೆ. ಅದನ್ನು ಬೇಯಿಸಿದೊಡನೆ ಪಚ್ಚೆ ಬಣ್ಣವು ಹೋಗಿರುವುದಲ್ಲವೇ?

ಗುರು:—(ವಾಮನಾವತಾರದ ಕಥೆಯನ್ನು ವಿವರಿಸಿ) ಶ್ರೀ ವಿಷ್ಣುವಿನ ಮೊದಲನೆಯ ನಾಲ್ಕು ಅವತಾರಗಳು ಯಾವುವು?

ಶಿಷ್ಯ:—ಮತ್ಸ್ಯ, ಕೂರ್ಮ, ವರಾಹ, ಮತ್ತು ನರಸಿಂಹ ಸರ್!

ಗುರು:—ಒಳ್ಳೇದು! ಸರಿ. ಈ ಯುಗದಲ್ಲಿ ಶ್ರೀ ವಿಷ್ಣುವು ಇಂಥಾ ಅವತಾರಗಳನ್ನೇಕೆ ಧರಿಸುವುದಿಲ್ಲ?

ಶಿಷ್ಯ:—ಮತ್ಸ್ಯನಾದರೆ ಬ್ರಾಹ್ಮಣರೂ, ಕೂರ್ಮನಾದರೆ ಮಾದಿಗರೂ, ವರಾಹನಾದರೆ ಕೈಸ್ತರೂ ಹಿಡಿದು ತಿನ್ನುವರು; ಸಿಂಹನಾದರೆ ಸರ್ಕಸಿನವರು ಹಿಡಿಯುವರೆಂಬ ಭಯದಿಂದ ಸರ್!

× × × × ×

ಮೇಷ್ಟ್ರು:—ವರ್ತಮಾನಪತ್ರಿಕೆಗಳಿಂದ ಸಾರ್ವಜನಿಕವಾದ ಪ್ರಯೋಜನವು ಯಾವುದು?

ಸಾಮಾನ್ಯ ತಿಳುವಳಿಕೆಯುಳ್ಳ ಗಣಪ:—ಕಾಫಿ ಹೋಟೇಲುಗಳಲ್ಲಿ ತಿಂಡಿ ಕಟ್ಟಿಯೂ ಅಂಗಡಿಗಳಲ್ಲಿ ಸಾಮಾನು ಕಟ್ಟಿಯೂ ಸರ್ವರಿಗೂ ಕೊಡುವದು ಸರ್!

× × × × ×

ಕೊಡೆ ಕೊಟ್ಟವನು:—ನನ್ನ ಕೊಡೆಯನ್ನು ದುರುಸ್ತಿಮಾಡಿದ್ದೀರಾ?

ದುರುಸ್ತಿ ಮಾಡುವವನು:—ತಯಾರಾಗಿದೆ ಸ್ವಾಮಿ! ಮಳೆ ಬರುವಾಗ ಮಾತ್ರ ಬಿಡಿಸಬೇಡಿ.

'ಭಗಿನೀವೃಂದ.'

ಪ್ರಕಟಣೆ

ಉಡ್ಪಿ ತಾಲೂಕು ಆರೂರು ಗ್ರಾಮದಲ್ಲಿರುವ ಕಿನ್ನಿ ಅನಂತಯ್ಯ ಯಾನೆ ಸುಬ್ರಾಯರ ಮಗ ಕಿನ್ನಿ ಶ್ರೀನಿವಾಸರಾಯನು ಈ ಮೂಲಕ ಸಮಸ್ತ ಜನರಿಗೆ ತಿಳಿಸುವುದೇನೆಂದರೆ:—

ಹಾಲೀ ಮದ್ರಾಸ್ ಟೌನ್ ಬ್ರಾಂಚ್ಚೆಯಲ್ಲಿರುವ ಉಡ್ಪಿ ತಾಲೂಕು ಬಡಾನಿಡಿಯೂರು ಲಿಂಗು ಮಂಜುನಾಥಯ್ಯನವರ ಮಗ ಡಾಕ್ಟರ್ ಬಿ. ವೆಂಕಟ್ರಾಯರು, ಅವರ ಮಗ ವ ಲಿಂಗು ಸುಬ್ಬಣ್ಣಯ್ಯನ ದತ್ತಪುತ್ರ ಮಗ ಮೈನರ ಮಾಧವರಾಯನಗೋಸ್ಕರ ಗಾರ್ಡಿಯನಾಗಿ ತನ್ನ ಹೆಸರಲ್ಲಿ 'ದಿ ಆರೂರು ಬೇಂಕ್, ಉಡ್ಪಿ,' ಈ ಬೇಂಕಿನಲ್ಲಿ ತಾ. 16—9—1933 ರಲ್ಲು ರೂ. 1551—14—0ನ್ನು ಫಿಕ್ಸೆಡ್ ಡಿಪೋಜಿಟ್ಟಾಗಿಟ್ಟು ಪಡೆದ ನಂಬ್ರ 1498/16—9—33ನೇ ರಶೀದಿ 1 ಮತ್ತು ತಾ. 25—1—1935ರಲ್ಲು ರೂಪ್ಯಾ 111—2—4ನ್ನು ಫಿಕ್ಸೆಡ್ ಡಿಪೋಜಿಟ್ಟಾಗಿಟ್ಟು ಪಡೆದ ನಂಬ್ರ 1550/25—1—35ನೇ ರಶೀದಿ 1 ಕೂಡಾ 2 ರಶೀದಿಗಳನ್ನು ಆವುಗಳ ಬಾಬ್ತು ಅಂದರೆ 1498/16—9—33ನೇ ರಶೀದಿಯ ಬಾಬ್ತು ತಾ. 16—9—35ರ ವರೆಗಿನ ಒಂದು ವರ್ಷದ ಬಡ್ಡಿಯನ್ನೂ ಮತ್ತು ನಂ. 1550/25—1—35ನೇ ರಶೀದಿಯ ತಾರೀಕಿನಿಂದ ಒಂದು ವರ್ಷದ ಬಡ್ಡಿಯನ್ನೂ ಪಡೆದು ಶರಾ ಬರೆಯಿಸುವರೆ ನನಗೆ ಕಳುಹಿಸಿರುತ್ತಾರೆ. ಸದ್ರಿ 2 ರಶೀದಿಗಳ ಬಾಬ್ತು ಮೇಲ್ಕಾಣಿಸಿದಂತೆ ಬಡ್ಡಿಯನ್ನು ನಾನು ಪಡೆದು ಸದ್ರಿ 2 ರಶೀದಿಗಳಲ್ಲಿಯೂ ತಾರೀಕು 7—4—1936ರಲ್ಲು ಬೇಂಕಿನವರು ಶರಾ ಬರೆದಿರುತ್ತಾರೆ. ಈ ಪ್ರಕಾರ ಆಪೈರು ತಾ. 7—4—1936ರಲ್ಲು ಬರೆದ ಶರಾ ವಿನಹಾ ಆನಂತರ ಸದರಿ 2 ರಶೀದಿಗಳಲ್ಲಿಯೂ ಬೇರೆ ಯಾವ ತರದ ಪಾವತಿ ಶರಾ, ಎಸ್ಸಾಯನ್‌ಮೆಂಟ್ ವಗೈರೆ ಏನೊಂದೂ ಬರೆದಿದ್ದಾಗಲೀ ಮಾಡಿದ್ದಾಗಲೀ ಇಲ್ಲ. ಆನಂತರ ಸದ್ರಿ 2 ರಶೀದಿಗಳನ್ನು ನಾನು ನನ್ನ ಆಂಗಿಜೇಬಿನಲ್ಲಿಟ್ಟುಕೊಂಡು ಮಂಗಳೂರು ಅತ್ತಕಡೆ ಪ್ರಯಾಣ ಮಾಡುವಾಗ್ಗೆ ಸದ್ರಿ 2 ರಶೀದಿಗಳೂ ನನ್ನ ಬೇರೆ ರಿಕಾರ್ಡಿನೊಂದಿಗೆ ಕಾಣೆಯಾಗಿರುತ್ತವೆ. ಆದು ದರಿಂದ ಆ 2 ರಶೀದಿಗಳು ಯಾರಿಗಾದರೂ ಸಿಕ್ಕಿದ್ದರೆ ಆವುಗಳನ್ನು ನನ್ನ ಮೇಲಿನ ಎಡ್ರೆಸಿಗೆ ಕಳುಹಿಸಿಕೊಡಬೇಕು. ಈ ವಿನಹಾ ಸದ್ರಿ ರಶೀದಿಗಳು ಯಾರಿಗಾದರೂ ಸಿಕ್ಕಿ ಆವುಗಳ ಮೇಲಣ ಏನಾದರೂ ಸೃಷ್ಟಿನೆ ಪಾವತಿ, ಎಸ್ಸಾಯನ್‌ಮೆಂಟ್ ವಗೈರೆ ಮಾಡಿದರೆ ಅಂಥಾ ಪಾವತಿಗಳು-ಎಸ್ಸಾಯನ್‌ಮೆಂಟುಗಳು ಸದ್ರಿ ವೆಂಕಟ್ರಾಯರಿಗಾಗಲೀ ವ ಅವರ ಕಡೆಯಿಂದ ನನಗಾಗಲೀ ಸಹಾ ಬದ್ಧವಾಗತಕ್ಕವುಗಳಲ್ಲ. ಮತ್ತು ಅಂಥಾ ಪಾವತಿಗಳೂ ಎಸ್ಸಾಯನ್‌ಮೆಂಟುಗಳೂ ಶಿಂಧುವಲ್ಲ. ಆ ಎರಡು ರಶೀದಿಗಳ ಬಾಬ್ತು ಆವುಗಳಲ್ಲಿ ಬರೆದ ತಾ. 7—4—1936ನೇ ಶರಾ ಪ್ರಕಾರ ಬಡ್ಡಿ ಮಾತ್ರ ನನಗೆ ಬಂದದ್ದು ವಿನಹಾ ಆನಂತರದ ಬಡ್ಡಿ ವ ಆಸ್ಲು ಐವಜು ಪೂರಾ ಬೇಂಕಿನ ಲೆಕ್ಕ ಪ್ರಕಾರ ಬರತಕ್ಕದ್ದು ಬಾಕಿ ಇರುತ್ತದೆ. ಈ ಸಂಗತಿಯನ್ನು ಬೇಂಕಿನವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ನಾನು ಆಲಾಹಿದಾ ತಿಳಿಸಿರುತ್ತೇನೆ.

ಮೊಕ್ಕಾಂ: ಆರೂರು, ತಾ. 1-7-'36.

ಕಿನ್ನಿ ಶ್ರೀನಿವಾಸ ರಾವ್.

THE ASIAN ASSURANCE CO., LTD., BOMBAY.

ಇನ್ಶೂರೆನ್ಸಿಗಾಗಿ ಈ ಸಂಸ್ಥೆಯೊಡನೆ ಆಲೋಚಿಸಿರಿ

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬಯಿ.

ರಜತಮಹೋತ್ಸವದ ಮೂಲ್ಯಪೇತನದ ಫಲಿತಾಂಶವನ್ನು ಕಾಯುತ್ತಿರಿ.

ವಿಸ್ತಾರಗೊಳಿಸಿದ 'ಇನೂರೆನ್ಸ್'

ಇದಕ್ಕೊಂದು ಉದಾಹರಣೆ:—ಒಬ್ಬ ಯುವಕನು, "ಕೋಷ್ಟಕ" III Aಯಂತೆ, ಲಾಭಸಹಿತವಾದ 20 ವರ್ಷಗಳ ಎಂಡೋಮೆಂಟಿಗಾಗಿ, 10,000 ರೂಪಾಯಿಗಳಿಗೆ ವಿಮೆ ಮಾಡುತ್ತಾನೆ ಎನ್ನುವ. ಆತನ ವರ್ಷಾವಧಿ ಪ್ರೀಮಿಯಮಿನ ಮೊತ್ತ ರೂ. 500—15—0. ಈ ಕಂತನ್ನು ಆತನು 5 ವರ್ಷ ಕಟ್ಟುತ್ತಾ ಬರುತ್ತಾನೆ; ಆ ಮೇಲೆ ಅದವನಿಂದ ಸಾಧ್ಯವಿಲ್ಲ, ವೆಂದಾಗಲು, ಆತನು ವಿಸ್ತಾರಗೊಳಿಸಿದ ಈ ವಿಮಾ ಕ್ರಮದ ಪ್ರಯೋಜನ ಪಡೆಯಲು ಮನವಿ ಮಾಡುತ್ತಾನೆ. ಆಗ ಕಂಪೆನಿ, ಮುಖಮೂಲ್ಯದ ಸಂಪೂರ್ಣ ಮೊತ್ತ ರೂ. 10,000ಗಳಿಗೇ, ಆತನ ಪೋಲಿಸಿಯನ್ನು ಉಳಿದ 15 ವರ್ಷಗಳ ವರೆಗೂ ಊರ್ಜಿತದಲ್ಲಿರಿಸಲು ತಕ್ಕ ಭರವಸೆ ಕೊಡುತ್ತದೆ. ಈ ಅವಧಿಯಲ್ಲಿ ಆತನೆಲ್ಲಿಯಾದರೂ ಮೃತನಾದರೆ, ಈತನು ತೆರದೆ ಇರುವ ಪ್ರೀಮಿಯಮಿನಲ್ಲಿ ಎಷ್ಟನ್ನಾದರೂ ಕಳೆಯದೆ, ಆ 10,000 ರೂಪಾಯಿಗಳನ್ನೂ ಕಂಪೆನಿಯು ಸಲ್ಲಿಸಿಬಿಡುವುದು.

ಜೆ. ಎ. ಪುತ ನ್, ಬ್ರಾಂಚ್ ಮ್ಯಾನೇಜರ್,
ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

Obtain 100% Satisfaction!

By using our Famous, Regd. Deer Brand, Flower Vase Brand, Steamer (King George) Brand and Gold Mohar Brand

Roofing Tiles, Ridges, Ventilators, Skylights, Flooring Tiles, Building Bricks, etc.

They are hall marks of perfection—genuine in quality and superb in kind.

That is why we want you to insist on buying them.

Buy only goods bearing our genuine Trade Marks & Names.

Messrs. C. Abdurahiman & Coragappa,
MANGALORE.

Props: HAMEEDIAH TILE WORKS, MANGALORE,
Mang. Props: ISLAMIAH TILE CO., KASARAGODE.

THE BANK OF MANGALORE, LTD.,
MANGALORE.

ESTD. 1931.

Head Office:-MANGALORE. Branch:-MUDABIDRI.

Fixed Deposits:-4½% for 3 months
,, 5% ,, 6 ,,
,, 6% ,, 12 ,,
,, 6½% ,, 24 ,, & upwards.

Savings Bank Deposits:—4⅜% on daily balance.
Withdrawals by cheques.
Current A/C 2%—opened free of charge.

We have various schemes for encouraging Thrift such as Cumulative Deposits, Recurring Savings Bank Deposits etc.

SAVE WHILE YOU CAN

Your future demands a fund to draw upon in case of need:—

START NOW AT THIS BANK—

Write for detailed Rules of Business sent free on request.

POHOLATUM **for Rheuma and Headache & Cold**
LUBA **for weakness of lungs, coughs etc.**
COUGH-CURE **for Colds, Coughs**
CURATIVE-EARTH **for Constipation, Typhoid, Dysenterie**
OLYMPIA-TYPEWRITERS **for better typing**
ASTRIDA-BLADES **for quicker shaving**
EUCALYPTUS-BONBONS **for hoarseness**
BOOKS **for education**
STATIONERIES **for home and Office-use**
LAMPS **for better lights**

ALL THIS YOU HAVE TO GET

FROM

Basel Mission Book Depot (Canarag Ltd)

MANGALORE, S. K.

MISSION ROAD HAMPANKATTA

Printed and published by U. Ganesh Shenai, Superintendent at the Saraswathi Printing Works, Ltd., Mangalore. Editor:—B. Vittal Rau.